ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 20 ಬುಧವಾರ 2026

ಸಂಪುಟ: 47 | ಸಂಚಿಕೆ: 34 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಜಿಲ್ಲಾ ಕೆಮಿಸ್ಟ್ & ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್, ಮೈಸೂರು

MYSORE DISTRICT CHEMISTS & DISTRIBUTORS ASSOCIATION (R) MYSURU

ಸಾರ್ವಜನಿಕ ಹಿತಾಸಕ್ತಿ ನಮ್ಮ ಗುರಿ


ಅಂಗಡಿ ಮುಚ್ಚುವುದಿಲ್ಲ

ದಿನಾಂಕ: 20-5-2026ನೇ ಬುಧವಾರದಂದು ಯಾವುದೇ ಔಷಧ ಅಂಗಡಿಗಳು ಮುಚ್ಚುವುದಿಲ್ಲ. ಸಾರ್ವಜನಿಕರ ಅನುಕೂಲಕ್ಕಾಗಿ ಎಲ್ಲಾ ಔಷಧ ಅಂಗಡಿಗಳು ತೆರೆದಿರುತ್ತೇವೆ

NO BANDH

There Will be No Bandh, No Closure of Medical Shops on 20th May 2026, Wednesday All Pharmacy Shops Will Remain Open To Serve Public

ಎಸ್‌ಜೆಸಿಇ–ಸ್ಟೆಪ್‌ನ ಪ್ರೊ. ಶಿವರಾಂ ಮಳವಳ್ಳಿ ನಿಧನ



ಮೈಸೂರು, ಮೇ 19– ಮೈಸೂರಿನ ಎಸ್‌ಜೆಸಿಇ–ವಿಜ್ಞಾನ ಮತ್ತು ತಂತ್ರಜ್ಞಾನ ಎಂಟರ್‌ಪ್ರಿನ್ಯೂರ್ಸ್ ಪಾರ್ಕ್‌ನ (ಎಸ್‌ಜೆಸಿಇ–ಎಸ್‌ಟಿಇಪಿ) ಸಂಸ್ಥಾಪಕ ನಿರ್ದೇಶಕರು ಮತ್ತು ಬೋಗಾದಿ 2ನೇ ಹಂತದ ನಿವಾಸಿ ಪ್ರೊ. ಶಿವರಾಂ ಮಳವಳ್ಳಿ ಮಂಗಳವಾರ ಬೆಳಗ್ಗೆ ನಿಧನರಾದರು.

ಶ್ರೀಯುತರು ಇಬ್ಬರು ಪುತ್ರರಾದ ಮಂಜೇಶ್ ಭಾರ್ಗವ್ ಮತ್ತು ಅಖಿಲೇಶ್ ಭಾರ್ಗವ್ ಸೇರಿದಂತೆ ಅಪಾರ ಬಂಧು–ಬಳಗ, ಸ್ನೇಹಿತರನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಇಂದು ಸಂಜೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರೊ. ಶಿವರಾಂ ಮಳವಳ್ಳಿಯವರು ಮೈಸೂರಿನ ಎಸ್‌ಜೆಸಿಇಯಿಂದ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿ ಪಡೆದು, ನಂತರ ಬಾಂಬೆ ಐಐಟಿಯಲ್ಲಿ ಮಾಸ್ಟರ್ಸ್ ಪದವಿ ಪಡೆದುಕೊಂಡರು. ಶ್ರೀಯುತರು 1981ರಿಂದ 2002 ರವರೆಗೆ ಎಸ್‌ಜೆಸಿಇ–ಎಸ್‌ಟಿಇಪಿ ಸಂಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ಅಲ್ಲದೆ, ಹೆಲ್ತ್ ಟೆಕ್ನಾಲಜಿ ಬ್ಯುಸಿನೆಸ್ ಇನ್‌ಕ್ಯೂಬೇಟರ್ (ಟಿಬಿಐ) ವ್ಯವಸ್ಥಾಪಕ ನಿರ್ದೇಶಕರಾಗಿ, ಇಂಡಿಯನ್ ಸೈನ್ಸ್ ಅಂಡ್ ಟೆಕ್ನಾಲಜಿ ಎಂಟರ್‌ಪ್ರಿನ್ಯೂರ್ಸ್ ಪಾರ್ಕ್ಸ್ ಅಂಡ್ ಬ್ಯುಸಿನೆಸ್ ಇನ್‌ಕ್ಯೂಬೇಟರ್ ಅಸೋಸಿಯೇಷನ್ (ಐಎಸ್‌ಬಿಎ) ಉಪಾಧ್ಯಕ್ಷರಾಗಿ, ಸ್ಯಾನ್ ಫ್ರಾನ್ಸಿಸ್ಕೋ–ಬೆಂಗಳೂರು ಸಿಸ್ಟರ್ ಸಿಟಿ ಇನ್ಸಿಯೇಟಿವ್ ಸ್ಥಾನಿಕ ಅಧ್ಯಕ್ಷರಾಗಿ, ಇಂಡಸ್ ಇಂಟರ್‌ನ್ಯಾಷನಲ್ ಸ್ಕೂಲ್ಸ್ ಟ್ರಸ್ಟಿಯಾಗಿ, ಉತ್ತರಾಖಂಡ್‌ನ ಸ್ವಾಮಿ ರಾಮ ಹಿಮಾಲಯನ್ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಪ್ರೊ. ಶಿವರಾಮು ಅವರು ಅಗಸ್ತ್ಯ ಮಹರ್ಷಿ ದೇವಸ್ಥಾನ ಮತ್ತು ಬಲಮುರಿಯ ಕಾವೇರಿ ನದಿ ದಡದಲ್ಲಿ ಲೋಪಮುದ್ರ ದೇವಸ್ಥಾನಗಳನ್ನು ಸ್ಥಾಪಿಸಿದ್ದಾರೆ.

ಚೆಂಡು ಹೂ, ತೊಗರಿ ಗಿಡಗಳ ಮಧ್ಯೆ ಗಾಂಜಾ ಬೆಳೆಯುವ ಸಾಧ್ಯತೆ

ಖುದ್ದು ಪರಿಶೀಲನೆ ನಡೆಸುವಂತೆ ಅಧಿಕಾರಿಗಳಿಗೆ ಎಎಸ್ಪಿ ಮಲ್ಲಿಕ್ ತಾಕೀತು

ಮೈಸೂರು, ಮೇ19(ಬಿಎಲ್‌ಯು)– ಚೆಂಡು ಹೂ ಹಾಗೂ ತೊಗರಿ ಗಿಡಗಳ ಮಧ್ಯೆ ಗಾಂಜಾ ಬೆಳೆಯುವ ಸಾಧ್ಯತೆ ಹೆಚ್ಚಿದ್ದು, ತೋಟಗಾರಿಕೆ ಹಾಗೂ ಕೃಷಿ ಇಲಾಖೆಯವರು ಸ್ಥಳಕ್ಕೆ ಖುದ್ದು ಬೇಟಿ ನೀಡಿ, ಪರಿಶೀಲಿಸುವಂತೆ ಮೈಸೂರು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಮಲ್ಲಿಕ್ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ನಾರ್ಕೊ ಕೋ ಆರ್ಡಿನೇಷನ್ ಸೆಂಟರ್ (ಎನ್ ಸಿಒಆರ್ ಡಿ) ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಚೆಂಡು ಹೂ ಹಾಗೂ ತೊಗರಿ ಗಿಡಗಳನ್ನ ಬೆಳೆದಿರುವ ಸ್ಥಳಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ವಾಸ್ತವತೆ ಅರಿವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮೈಸೂರು ಜಿಲ್ಲೆಯಲ್ಲಿ ಬಹುಷ್ಟು ಖಾಸಗಿ ವ್ಯಸನ ಮುಕ್ತ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, ಈ ಕೇಂದ್ರಗಳ ಕಾರ್ಯ ನಿರ್ವಹಣೆಗೆ ಇರುವ ಷರತ್ತುಗಳು ಹಾಗೂ ಅವುಗಳ ಪಾಲನೆ ಬಗ್ಗೆ ಅಧಿಕಾರಿಗಳು ನಿಗಾ ವಹಿಸಬೇಕು ಎಂದು ಸೂಚಿಸಿದರು.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಎಎಸ್ಪಿ ಸಿ.ಮಲ್ಲಿಕ್ ಅಧ್ಯಕ್ಷತೆಯಲ್ಲಿ ನಾರ್ಕೊ ಕೋ ಆರ್ಡಿನೇಷನ್ ಸೆಂಟರ್ (ಎನ್ ಸಿಒಆರ್ ಡಿ) ಸಮಿತಿ ಸಭೆ ನಡೆಯಿತು.

ಹಾಸ್ಟೆಲ್‌ಗಳಿಗೆ ಸಿಸಿಟಿವಿ ಕ್ಯಾಮರಾ ಅಳವಡಿಸಿ ವಿದ್ಯಾರ್ಥಿಗಳ ಕಾರ್ಯಚಟುವಟಿಕೆಗಳು ಹಾಗೂ ಅವರ ವರ್ತನೆಯ ಬದಲಾವಣೆಯ ಬಗ್ಗೆ ಗಮನ ಹರಿಸಬೇಕು. ವಿದ್ಯಾರ್ಥಿಗಳಿಗೆ ಹೊರಗಿನಿಂದ ಬರುವ ಆಹಾರ ಪದಾರ್ಥಗಳ ಬಗ್ಗೆ ಕೂಡ ಲಕ್ಷ್ಯ ವಹಿಸಿ, ಆಗಾಗೆ ಪರಿಶೀಲನೆ ಮಾಡಬೇಕು ಎಂದು ಹೇಳಿದರು.

ಮಾದಕ ವಸ್ತುಗಳ ಸೇವನೆ ಸಮಾಜಕ್ಕೆ ಮಾರಕವಾಗಿದೆ. ಈ ಹಿನ್ನೆಲೆಯಲ್ಲಿ ಮಾದಕ ವಸ್ತುಗಳ ಮಾರಾಟ ಮತ್ತು ಸೇವನೆಯನ್ನು ತಡೆಗಟ್ಟಲು ಜಾಗೃತಿ ಮೂಡಿಸುವ ಪರಿಣಾಮಕಾರಿ ಕಾರ್ಯಕ್ರಮ ರೂಪಿಸಬೇಕು ಎಂದು ಸಲಹೆ ನೀಡಿದರು.

- ಹಾಸ್ಟೆಲ್ ಸಿಸಿಟಿವಿ ಕ್ಯಾಮರಾಗಳನ್ನು ಪರಿಶೀಲಿಸಿ
- ವಿದ್ಯಾರ್ಥಿಗಳ ವರ್ತನೆ ಬದಲಾವಣೆ ಬಗ್ಗೆ ಗಮನ ನೀಡಿ
- ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡಿದ 561 ಪ್ರಕರಣ ದಾಖಲು; ಅಬಕಾರಿ ಇಲಾಖೆಯಿಂದ 58,335 ಕೆ.ಜಿ. ಗಾಂಜಾ ವಶ

ಆರೋಗ್ಯ ಇಲಾಖೆ ಕೋಟ್ಸ್ ವಿಭಾಗದಿಂದ ಏಪ್ರಿಲ್ ಮಾಹೆಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಸೇವನೆ ಮಾಡುವವರ ವಿರುದ್ಧ 561 ದೂರು ದಾಖಲಿಸಿ 1.25 ಲಕ್ಷ ದಂಡ ಸಂಗ್ರಹಿಸಲಾಗಿದೆ.

ಅಬಕಾರಿ ಇಲಾಖೆ ವತಿಯಿಂದ ಮೈಸೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 20 ಎನ್ ಡಿಪಿಎಸ್ ಪ್ರಕರಣ ದಾಖಲಿಸಿ 14 ಆರೋಪಿಗಳನ್ನು ಬಂಧಿಸಿ ಅವರಿಂದ 58,335 ಕೆ.ಜಿ. ಗಾಂಜಾ ಹಾಗೂ 50 ಹಸಿ ಗಾಂಜಾ ಗಿಡಗಳನ್ನು ವಶಪಡಿಸಿಕೊಳ್ಳಲಾಗಿದೆ ಆಯಾ ಇಲಾಖೆಯವರು ಇದೇ ವೇಳೆ ಮಾಹಿತಿ ನೀಡಿದರು.

ಜೂನ್ 26ರಂದು ಮಾದಕ ವಸ್ತು ವಿರೋಧಿ ದಿನಾಚರಣೆ ಆಚರಿಸಲಾಗುತ್ತಿದ್ದು, ಸದರಿ ಮಾಹೆಯಲ್ಲಿ ವಿವಿಧ ಇಲಾಖೆಗಳು ಕಾಲೇಜು ವಿದ್ಯಾರ್ಥಿಗಳನ್ನು ತೊಡಗಿಸಿಕೊಂಡು ಕಾರ್ಯಕ್ರಮ ಮಾಡಬೇಕು ಎಂದು ಸಲಹೆ ನೀಡಿದರು.

ನಗರ ಪೊಲೀಸ್ ಆಯುಕ್ತರ ಕಚೇರಿಯ ಎಸಿಪಿ ಮನೋಜ್‌ಕುಮಾರ್, ಸಹಾಯಕ ಔಷಧ ನಿಯಂತ್ರಕರಾದ ಆಶಾಲತಾ, ವಾಸೀಂ ಷರೀಫ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕಿ ನಿರ್ಮಲಾ ಸೇರಿದಂತೆ ಹಲವು ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಉಭಯ ಶ್ರೀಗಳ ಆಶೀರ್ವಾದ ಪಡೆದ ಶಾಸಕ ಟಿ.ಎಸ್. ಶ್ರೀವತ್ಸ...



ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದ 50ನೇ ವರ್ಷದ ಸುವರ್ಣ ಸಮಾರಂಭದಲ್ಲಿ ಉಭಯ ಶ್ರೀಗಳಾದ ಮಂತ್ರಾಲಯ ಶ್ರೀ ರಾಘವೇಂದ್ರಸ್ವಾಮಿ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು ಹಾಗೂ ಉಡುಪಿ ಪೇಜಾವರ ಅಧೋಕ್ಷಜ ಮಠ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀಶ್ರೀ 1008 ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳರವರ ಆಶೀರ್ವಾದವನ್ನು ಶಾಸಕ ಟಿ.ಎಸ್. ಶ್ರೀವತ್ಸ ಪಡೆದರು. ಈ ವೇಳೆ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್, ಹಿರಿಯ ಪತ್ರಕರ್ತ ರವೀಂದ್ರ ಜೋಶಿ, ಶ್ರೀ ಕೃಷ್ಣ ಟ್ರಸ್ಟ್ ಉಪಾಧ್ಯಕ್ಷ ರವಿ ಶಾಸ್ತ್ರಿ, ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಕಡಕೊಳ ಜಗದೀಶ್, ಟಿ.ಎಸ್.ಅರುಣ್, ಕೆ.ಎಂ.ನಿಶಾಂತ್ ಇನ್ನಿತರರು ಹಾಜರಿದ್ದರು.

ಇಂದು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ



ಮೈಸೂರು, ಮೇ 19–ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯೋತ್ಸವ ಸಮಿತಿ ವತಿಯಿಂದ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿಯನ್ನು ಮೇ 20ರಂದು ಬೆಳಗ್ಗೆ 11.30 ಗಂಟೆಗೆ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮದ ಉದ್ಘಾಟಿಸಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್ ಕುಮಾರ್ ಸಿ., ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಗೌರವ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ಸುನೀಲ್ ಬೋಸ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ ಎಂ, ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್ ಅಧ್ಯಕ್ಷ ಹೆಚ್. ಡಿ.ಗಣೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎನ್. ರಂಗಸ್ವಾಮಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಂಯೂಬ್ ಖಾನ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಆಗಮಿಸಲಿದ್ದಾರೆ.

ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಕೆ.ಆರ್. ನಗರ ಕ್ಷೇತ್ರದ ಶಾಸಕ ರವಿಶಂಕರ್ ಡಿ., ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಹುಣಸೂರು ಕ್ಷೇತ್ರದ ಶಾಸಕರಾದ ಜಿ.ಡಿ. ಹರೀಶ್‌ಗೌಡ, ನಂಜನಗೂಡು ಕ್ಷೇತ್ರದ ಶಾಸಕ ದರ್ಶನ್ ಧ್ರುವನಾರಾಯಣ್ ಹಾಗೂ ವಿಧಾನ ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ.ಯತೀಂದ್ರ ಎಸ್., ಕೆ. ವಿವೇಕಾನಂದ, ಕೆ.ಶಿವಕುಮಾರ್, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ, ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಪ್ಯಾರಿಜಾನ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಪುಷ್ಪಲತಾ.ಜೆ ಉಪನ್ಯಾಸ ನೀಡಲಿದ್ದಾರೆ.

ರೈಲ್ವೆ ರಕ್ಷಣಾ ಪಡೆಯಿಂದ 'ಆಪರೇಷನ್ ಸತರ್ಕ' ಕಾರ್ಯಾಚರಣೆ

ರೈಲಿನಲ್ಲಿದ್ದ ಮದ್ಯದ ಬಾಟಲ್‌ಗಳು ವಶಕ್ಕೆ



ಹಾಸನದ ಅರಸೀಕೆರೆ ರೈಲ್ವೆ ನಿಲ್ದಾಣದ ಬಳಿ ರೈಲಿನಲ್ಲಿ ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದ ಮದ್ಯದ ಬಾಟಲ್‌ಗಳನ್ನು ರೈಲ್ವೆ ರಕ್ಷಣಾ ಪಡೆ ವಶಪಡಿಸಿಕೊಂಡಿದೆ.

ಮೈಸೂರು, ಮೇ19(ಬಿಎಲ್‌ಯು)– ಹಾಸನದ ಅರಸೀಕೆರೆ ರೈಲ್ವೆ ನಿಲ್ದಾಣದಲ್ಲಿ ರೈಲ್ವೆ ರಕ್ಷಣಾ ಪಡೆ 'ಆಪರೇಷನ್ ಸತರ್ಕ' ಕಾರ್ಯಾಚರಣೆ ನಡೆಸಿದ ವೇಳೆ 5 ಸಾವಿರ ಮೌಲ್ಯದ 12 ಮದ್ಯದ ಬಾಟಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಅಕ್ರಮ ನಿಷೇಧಿತ ವಸ್ತುಗಳ ಸಾಗಾಣಿಕೆ ತಡೆಯುವ ಉದ್ದೇಶದಿಂದ ವಾಸ್ಕೋಡ ಗಾಮಾ–ಯಶವಂತಪುರ ಎಕ್ಸ್‌ಪ್ರೆಸ್ ರೈಲಿನಲ್ಲಿ ಕೈಗೊಂಡ ಕಾರ್ಯಾಚರಣೆಯಲ್ಲಿ ರೈಲ್ವೆ ರಕ್ಷಣಾ ಪಡೆ ಹಾಗೂ ಅಬಕಾರಿ ಇಲಾಖೆ ತಂಡ ಪಾಲ್ಗೊಂಡಿತ್ತು.

ಕಾರ್ಯಾಚರಣೆ ವೇಳೆ ಬಾಣಾವರ ಮತ್ತು ಅರಸೀಕೆರೆ ರೈಲು ನಿಲ್ದಾಣಗಳ ಮಧ್ಯೆ ಸಾಮಾನ್ಯ ಬೋಗಿಯ ಬಳಿ ಮಾಲೀಕರಿಲ್ಲದ ಪ್ಲಾಸ್ಟಿಕ್ ಚೀಲ ಪತ್ತೆಯಾಯಿತು. ಇದನ್ನು ಪರಿಶೀಲನೆ ನಡೆಸಿದಾಗ 5,123 ರೂ. ಮೌಲ್ಯದ 12 ಮದ್ಯದ ಬಾಟಲ್‌ಗಳಿತ್ತು. ಪ್ರಯಾಣಿಕರ ಸುರಕ್ಷತೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ನಿರಂತರವಾಗಿ ಇಂತಹ ಜಾಗೃತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ಮೂಲಕ ರೈಲ್ವೆ ನಿಲ್ದಾಣದ ಆವರಣ ಹಾಗೂ ರೈಲುಗಳಲ್ಲಿ ಅಕ್ರಮ ಚಟುವಟಿಕೆಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ನೈಋತ್ಯ ರೈಲ್ವೆಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಗಿರೀಶ್ ಧರ್ಮರಾಜ ಕಲಗೊಂಡ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪಾಸಾದ ಪ.ಜಾತಿ ವಿದ್ಯಾರ್ಥಿಗಳ ಪ್ರೋತ್ಸಾಹಧನಕ್ಕೆ ಅರ್ಜಿ

ಮೈಸೂರು, ಮೇ 19– ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

2025–26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಶೇ.60ರಿಂದ ಶೇ.74.99 ಅಂಕ ಪಡೆದ ಪ.ಜಾತಿಯ ವಿದ್ಯಾರ್ಥಿಗಳಿಗೆ ರೂ. 7000/– ಮತ್ತು ಶೇ.75ಕ್ಕಿಂತ ಹೆಚ್ಚು ಅಂಕ ಪಡೆದ ಪ.ಜಾತಿ ವಿದ್ಯಾರ್ಥಿಗಳಿಗೆ ರೂ.15000 ಪ್ರೋತ್ಸಾಹಧನ ನೀಡಲಾಗುತ್ತದೆ. ಅರ್ಜಿ ಸಲ್ಲಿಸಲು ಆದಾಯ ಮಿತಿ ಇರುವುದಿಲ್ಲ. ರಾಜ್ಯ ಪಠ್ಯಕ್ರಮ CBSE ಮತ್ತು ICSC ಪಠ್ಯಕ್ರಮದಲ್ಲಿ 2026ರ ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ ಶೇ.60ಕ್ಕೂ ಹೆಚ್ಚಿನ ಅಂಕ ಪಡೆದ ಎಲ್ಲಾ ಪ.ಜಾತಿ ವಿದ್ಯಾರ್ಥಿಗಳೂ ತಮ್ಮ ಖಾತೆಗೆ ಆಧಾರ್ ಸೀಡ್ ಆಗಿರುವ ಬಗ್ಗೆ ಖಚಿತಪಡಿಸಿಕೊಂಡು https://swdservices. karnataka.gov.in/PrizeMoneyClientApp/register or swdservices.karnataka.gov.in - Prize Money Application - Register/Apply ಆನ್‌ಲೈನ್ ಅರ್ಜಿ ಸಲ್ಲಿಸಬೇಕು. ನಂತರ ಆನ್‌ಲೈನ್ ಸ್ವೀಕೃತಿಯೊಂದಿಗೆ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಆಧಾರ್ ಪ್ರತಿ, ಜಾತಿ ಪ್ರಮಾಣ ಪತ್ರದ ನಕಲು ಪ್ರತಿಗಳನ್ನು ಸಂಬಂಧಿಸಿದ ಶಾಲಾ ಮುಖ್ಯೋಪಾಧ್ಯಾಯರಿಂದ ದೃಢೀಕರಿಸಿ ಸಹಾಯಕ ನಿರ್ದೇಶಕರು ಗ್ರೇಡ್–1, ರವರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ಬಾಬು ಜಗಜೀವನರಾಂ ಕಟ್ಟಡ ಆದಿಪಂಪರಸ್ತೆ, ಪಡುವಾರಹಳ್ಳಿ ಮೈಸೂರು ಇವರಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ದೂ.ಸಂ: 0821–2520910 ಅನ್ನು ಸಂಪರ್ಕಿಸಬಹುದು.

ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ಕಾನೂನುಬಾಹಿರ ಆಡಳಿತ ನಿರ್ವಹಣೆ ಆರೋಪ

ಮೈಸೂರು, ಮೇ 19(ಜಿಎ)–ಮೈಸೂರಿನ ಗಾಂಧಿ ವೃತ್ತದಲ್ಲಿರುವ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್‌ನ ಆಡಳಿತ ಮಂಡಳಿ ಕಾನೂನು ಬಾಹಿರವಾಗಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ಬ್ಯಾಂಕ್‌ನ ಮಾಜಿ ನಿರ್ದೇಶಕ ಪೈಲ್ವಾನ್ ಚಿಕ್ಕಪುಟ್ಟಿ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು 35 ವರ್ಷದಿಂದ ಬ್ಯಾಂಕ್‌ನ ಸದಸ್ಯನಾಗಿದ್ದು, 2005ರಿಂದ 2020ರವರೆಗೂ ನಿರ್ದೇಶಕ ಹಾಗೂ ಉಪಾಧ್ಯಕ್ಷನಾಗಿ ಸೇವೆ ಸಲ್ಲಿಸಿರುವುದರಿಂದ ಇಲ್ಲಿ ನಡೆಯುವ ಪ್ರತಿಯೊಂದು ವಿಚಾರದ ಬಗ್ಗೆಯೂ ಮಾಹಿತಿ ಇದೆ. ಉಪಾಧ್ಯಕ್ಷ ಅವಧಿ ಮುಗಿದ ನಂತರ ಬ್ಯಾಂಕಿನಲ್ಲಿ ನಡೆಯುತ್ತಿರುವ ಅವ್ಯವಹಾರ ಹಾಗೂ ಕಾನೂನು ಬಾಹಿರದ ಬಗ್ಗೆ ಆಡಳಿತದ ಬಗ್ಗೆ ಆಡಳಿತ ಮಂಡಳಿ ವಾರ್ಷಿಕ ಮಹಾ ಸಭೆಯಲ್ಲಿ ಸೂಕ್ತ ಉತ್ತರ ನೀಡಿಲ್ಲ ಎಂದು ದೂರಿದರು.

ಈ ಹಿಂದೆ ಕೆ.ಉಮಾಶಂಕರ್ ಬ್ಯಾಂಕ್‌ನ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಮಹಾಸಭೆ ಹಾಗೂ ಸಹಕಾರ ಇಲಾಖೆಯ ಅನುಮೋದನೆ ಇಲ್ಲದೇ ಸದಸ್ಯರ ಕ್ಷೇಮ ನಿಧಿಗೆ ಸದಸ್ಯರಿಂದ ವಂತಿಕೆ ವಸೂಲು ಮಾಡಲು ಕೈಗೊಂಡಿದ್ದ ನಿರ್ಣಯದ ವಿರುದ್ಧ ನಾನು ಧ್ವನಿ ಎತ್ತಿದಾಗ ಕಾನೂನಿನಲ್ಲಿ ಅವಕಾಶ ಇಲ್ಲದಿದ್ದರೂ ನನ್ನ ಮೇಲಿನ ದ್ವೇಷಕ್ಕೆ ಸದಸ್ಯತ್ವವನ್ನು ಕಾನೂನುಬಾಹಿರವಾಗಿ ರದ್ದುಪಡಿಸಿದರು. ನಂತರ ಸಹಕಾರ ಸಂಘಗಳ ಉಪನಿಬಂಧಕರ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿ ಸದಸ್ಯತ್ವ ಪುನಃ ಪಡೆದುಕೊಂಡೆ ಎಂದರು.

ಬ್ಯಾಂಕಿಗೆ ಅವಶ್ಯಕತೆ ಇಲ್ಲದಿದ್ದರೂ ಆಡಳಿತ ಮಂಡಳಿಯೂ ಕೆಲಸಗಾರರನ್ನು ನೇಮಕ ಮಾಡಿಕೊಂಡಿದ್ದು, ಅದರಲ್ಲಿಯೂ ಬ್ಯಾಂಕಿನ ಬೈಲಾ, ಸಹಕಾರ ಸಂಘಗಳ ನಿಯಮವನ್ನು ಉಲ್ಲಂಘನೆ ಮಾಡಲಾಗಿದೆ. ರೋಸ್ಟರ್ ಪದ್ಧತಿ ಧಿಕ್ಕರಿಸಿ ಒಂದೇ ಜಾತಿಯ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡಿರುವುದರ ಬಗ್ಗೆಯೂ ದಾವೆ ಹೂಡಿದ್ದೇನೆ. ಒಂದಲ್ಲಾ ಒಂದು ಕಾರಣದಿಂದ ಈ ಎಲ್ಲಾ ವಿಚಾರ ವಿಲೇವಾರಿಯಾಗದೇ ಉಳಿದುಕೊಂಡಿದೆ ಎಂದು ತಿಳಿಸಿದರು.

ನಂತರ 2024ರಲ್ಲಿ ಪ್ರಭಾರ ಕಾರ್ಯದರ್ಶಿ ಮರಿಲಿಂಗಾಚಾರಿ ಮತ್ತು ಆಡಳಿತ ಮಂಡಳಿಯೂ ಬೈಲಾದಡಿ ಕಾರ್ಯನಿರ್ವಹಿಸದೇ ಬ್ಯಾಂಕಿಗೆ 18 ಲಕ್ಷ ರೂ. ನಷ್ಟ ಮಾಡಿರುವ ಸಂಬಂಧವೂ ದಾವೆ ಹೂಡಿದ್ದೇನೆ. ಹೀಗೆ ಅನೇಕ ನಷ್ಟ ಮಾಡಿರುವವರಿಂದ ಹಣ ವಸೂಲಿ ಮಾಡದೇ ಇರುವ ಬಗ್ಗೆ ಕೇಸ್ ದಾಖಲಿಸಿದ್ದೇನೆ ಎಂದರು.

ದೇಶದ ಸ್ವಾವಲಂಬನೆಗಾಗಿ ಸಂಶೋಧನಾ ಕ್ಷೇತ್ರ ಬಲಗೊಳ್ಳಬೇಕಿದೆ

ಸಿಇಸಿ ಫ್ಲೇವರ್ಸ್ ಅಂಡ್ ಫ್ರಾಗ್ರೆನ್ಸಸ್ ಪ್ರೈ.ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಎ.ಅಪ್ಪಾರಾವ್ ಅಭಿಮತ

ಮೈಸೂರು,ಮೇ 19(ಪಿಎಂ)– ಇತ್ತೀಚೆಗೆ ಪಶ್ಚಿಮ ಏಷ್ಯಾದಲ್ಲಿ ಉಲ್ಬಣಗೊಂಡ ಯುದ್ಧದಿಂದ ಜಾಗತಿಕ ವಹಿವಾಟಿನ ಮೇಲೆ ಗಂಭೀರ ಪರಿಣಾಮ ಉಂಟಾಗಿದೆ. ದೇಶದ ಆಮದಿನ ಮೇಲೂ ಇದು ತೀವ್ರ ಪರಿಣಾಮ ಉಂಟು ಮಾಡಿದೆ. ಹಾಗಾಗಿ ಆಮದು ವಸ್ತುಗಳ ಅವಲಂಬನೆ ಕಡಿಮೆಗೊಳಿಸುವ ಮೂಲಕ ದೇಶದ ಸ್ವಾವಲಂಬನೆಗಾಗಿ ಸಂಶೋಧನಾ ಕ್ಷೇತ್ರ ಬಲಪಡಿಸಬೇಕಿದೆ ಎಂದು ಸಿಇಸಿ ಫ್ಲೇವರ್ಸ್ ಅಂಡ್ ಫ್ರಾಗ್ರೆನ್ಸ್ ಪ್ರೈ. ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಎ.ಅಪ್ಪಾರಾವ್ ಹೇಳಿದರು.

ನಗರದ ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ (ಸಿಎಫ್‌ಟಿಆರ್‌ಐ) ಹಮ್ಮಿಕೊಂಡಿದ್ದ ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಫ್ಲೇವರ್ ಉದ್ಯಮವು ಸವಾಲುಗಳನ್ನು ಎದುರಿಸುತ್ತಿದ್ದು, ನೈಸರ್ಗಿಕ ಸಂಶ್ಲೇಷಿತ ಅಣು ಮತ್ತು ಕಿಣ್ವಗಳನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಯುದ್ಧಗಳು ಸರಕು ಪೂರೈಕೆ ಸರಪಳಿಯನ್ನೇ ತುಂಡರಿಸಿದೆ. ಕಚ್ಚಾ ವಸ್ತುಗಳ ಬೆಲೆ ಗಗನಕ್ಕೇರಿದ್ದು, ಜೊತೆಗೆ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಿದೆ. ಇಂತಹ ಸನ್ನಿವೇಶದಲ್ಲಿ ಕಚ್ಚಾ ತೈಲ ಸೇರಿದಂತೆ ಇಲ್ಲಿ ಲಭ್ಯವಿಲ್ಲದ ವಸ್ತುಗಳನ್ನು ಹೊರತುಪಡಿಸಿ ಉಳಿದವುಗಳನ್ನು ದೇಶೀಯವಾಗಿಯೇ ಉತ್ಪಾದಿಸುವ ಮೂಲಕ ಆತ್ಮನಿರ್ಭರ ಭಾರತದ ಕನಸನ್ನು ನನಸಾಗಿಸಬೇಕು ಎಂದು ತಿಳಿಸಿದರು.



ಮೈಸೂರಿನ ಸಿಎಫ್‌ಟಿಆರ್‌ಐನ ಚೆಲುವಾಂಬ ಹಾಲ್‌ನಲ್ಲಿಹಮ್ಮಿಕೊಂಡಿದ್ದ ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆಯನ್ನ ಎ.ಅಪ್ಪಾರಾವ್ ಉದ್ಘಾಟಿಸಿದರು.

> ನಮ್ಮ ಆಹಾರೋತ್ಪನ್ನಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆ ನೀಡಬೇಕೆಂದರೆ ನಮ್ಮ ತಂತ್ರಜ್ಞಾನವನ್ನು ಉನ್ನತೀಕರಿಸಬೇಕು. ಇಲ್ಲಿನ ಸ್ವಾದವನ್ನು ತಲುಪಿಸಲು ಆಹಾರ ಸಂಶೋಧನೆ ನಡೆಯಬೇಕು. ಈ ನಿಟ್ಟಿನಲ್ಲಿ ಸಿಎಫ್‌ಟಿಆರ್‌ಐ ದೇಶದ ಎಲ್ಲಾ ಕಂಪನಿಗಳಿಗೆ ಮಾತೃ ಸಂಸ್ಥೆಯಾಗಿರುವುದು ಶ್ಲಾಘನೀಯ.
> –ಎ.ಅಪ್ಪಾರಾವ್.

ಪ್ರೊಪಿಲೀನ್ ಗ್ಲೈಕಾಲ್ ಎಂಬ ಬಣ್ಣರಹಿತವಾದ ಮತ್ತು ವಾಸನೆಯಿಲ್ಲದ ರಾಸಾಯನಿಕ ದ್ರವ ಲೀಟರ್‌ಗೆ 130 ರೂ.ಗೆ ದೊರೆಯುತ್ತಿತ್ತು. ಆದರೆ 400 ರೂ.ಗೆ ಏರಿಕೆಯಾಗಿದೆ. ಇದಕ್ಕೆ ನಾವು ಕೊರಿಯಾ ಹಾಗೂ ಅಮೆರಿಕ ದೇಶವನ್ನು ಅವಲಂಬಿಸಿದ್ದೇವೆ. ಈ ರೀತಿಯ ವಸ್ತುಗಳಲ್ಲಿ ಸ್ವಾವಲಂಬನೆ ಸಾಧಿಸಿದರೆ ನಾವೇ ಜಾಗತಿಕ ನಾಯಕರಾಗುತ್ತೇವೆ ಎಂದರು.

ಆಹಾರದ ರುಚಿ ಮತ್ತು ಸುಗಂಧ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನ ದಾಪುಗಾಲು ಇಟ್ಟಿದೆ. ಹೀಗೆ ವಿಶ್ವ ಆಹಾರ ಕ್ಷೇತ್ರದಲ್ಲಿ ತಂತ್ರಜ್ಞಾನದ ಆವಿಷ್ಕಾರ ವೇಗವಾಗಿ ನಡೆಯುತ್ತಿದ್ದು, ಇದು ವಿಶ್ವದ ಆಹಾರಾಭ್ಯಾಸದ ಚಿತ್ರಣವನ್ನೇ ಬದಲಿಸಿದೆ. ಫ್ಲೇವರ್ಸ್ ಮತ್ತಷ್ಟು ಗುಣಮಟ್ಟ ಹಾಗೂ ಸ್ಥಿರತೆ ಕಾಯ್ದುಕೊಳ್ಳಲು ನೆರವಾಗಿದೆ ಎಂದು ಹೇಳಿದರು. ಸಂಸ್ಥೆಯ ನಿರ್ದೇಶಕ ಪ್ರೊ.ಗಿರಿಧರ ಪರ್ವತಂ, ವಿಜ್ಞಾನಿ ಅಶುತೋಷ್ ಎ.ಇನಾಂದಾರ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಇಂದು ನೇರ ಸಂದರ್ಶನ ಫೋನ್–ಇನ್

ಮೈಸೂರು, ಮೇ 19–ಜೆಎಸ್‌ಎಸ್ ರೇಡಿಯೋ 91.2 FM ವತಿಯಿಂದ ಸಾರ್ವಜನಿಕರಿಗಾಗಿ ವಿಕಲ ಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸೇವಾ ಸೌಲಭ್ಯಗಳು ಕುರಿತು ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮವನ್ನು ನಾಳೆ (ಮೇ 20) ಬೆಳಗ್ಗೆ 11:30ರಿಂದ ಮಧ್ಯಾಹ್ನ 12:30ರವರೆಗೆ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲೆಯ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು ಹಾಗೂ ಜಿಲ್ಲಾ ವಿಕಲಚೇತನ ಮತ್ತು ಹಿರಿಯ ನಾಗರೀಕರ ಕಲ್ಯಾಣಾಧಿಕಾರಿ ರಾಘವೇಂದ್ರ ಭಾಗವಹಿಸಿ ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ.



ರಾಘವೇಂದ್ರ

ವಿಕಲಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ವಿವಿಧ ಯೋಜನೆಗಳು, ಸೇವೆಗಳು, ಸೌಲಭ್ಯಗಳು, ಸಮಸ್ಯೆಗಳ ಕುರಿತು ಸಾರ್ವಜನಿಕರು ತಮ್ಮ ಪ್ರಶ್ನೆಗಳು ಅಥವಾ ಸಲಹೆಗಳನ್ನು ದೂರವಾಣಿ ಮೂಲಕ ತಿಳಿಸಬಹುದು. ಕರೆ ಮಾಡಲು ದೂ.ಸಂ.: 8296725912 / 0821–2546563.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

20.5.2026 ಬುಧವಾರ, ಮಳೆ ನಕ್ಷತ್ರ: ಕೃತ್ತಿಕ 11.05.2026ರಿಂದ 24.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ:** ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಸುಯೋಗ್ ಆಸ್ಪತ್ರೆ :** ಉಚಿತ ಸಕ್ಕರೆ ಕಾಯಿಲೆ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಮಧುಮೇಹದ ಗಾಯಗಳು, ವೆರಿಕೋಸ್ ವೇನ್ಸ್, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀ ಕೃಷ್ಣ ಟ್ರಸ್ಟ್:** ಸಂಜೆ 5ಕ್ಕೆ ಶ್ರೀ ಕೃಷ್ಣ ಮಿತ್ರಮಂಡಳಿಯ ಸುವರ್ಣ ಸಂಭ್ರಮ ಸಮಾರೋಪ ಸಮಾರಂಭ, ಉಪಸ್ಥಿತರು : ಶ್ರೀ ಪುತ್ತಿಗೆ ಮಠ, ಉಡುಪಿ, ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದಂಗಳವರು, ಮುಖ್ಯ ಅತಿಥಿಗಳು : ಶಾಸಕ ಕೆ. ಹರೀಶ್‌ಗೌಡ, ಸಂಜೆ 7ಕ್ಕೆ ಕೊಳಲು ಮಾಂತ್ರಿಕ ಪಂಡಿತ್ ಪ್ರವೀಣ್ ಗೋಡ್ಖಿಂಡಿ ಮತ್ತು ತಂಡದವರಿಂದ ರಾಗಸುಧೆ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ.
- **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದ್ವಾನ್ ಕೌಸಲ್ಯ ಮತ್ತು ವಿದುಷಿ ಅಪ್ರಮೇಯ ಅವರಿಂದ ದಾಸ ಲಹರಿ ಜುಗಲ್‌ಬಂದಿ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ 5.30ಕ್ಕೆ.
- **ವ್ಯವಸ್ಥಾಪಕರು :** ಮಾವು ಮತ್ತು ಹಲಸು ಮೇಳ, ಸ್ಥಳ: ಶ್ರೀ ಬಂದಂತಮ್ಮ ಕಾಳಮ್ಮ ಸಮುದಾಯ ಭವನ, ಕುವೆಂಪುನಗರ, ಬೆಳಗ್ಗೆ 10 ರಿಂದ.
- **ಬಿಜಿಎಸ್ ಇಂಟರ್‌ನ್ಯಾಷನಲ್ ಫೌಂಡೇಷನ್ ಫಾರ್ ಹೆಲ್ತ್ ಸೈನ್ಸಸ್ :** ವಿಶ್ವ ಶುಶ್ರೂಷಕರ ದಿನಾಚರಣೆ, ಸಾನ್ನಿಧ್ಯ: ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಬಿಜಿಎಸ್ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮುಖ್ಯ ಅತಿಥಿಗಳು : ಶ್ರೀ ಜಯದೇವ ಹೃದ್ರೋಗ ಸಂಸ್ಥೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ, ಅಪೋಲೋ ಬಿಜಿಎಸ್ ಆಸ್ಪತ್ರೆ ಉಪಾಧ್ಯಕ್ಷ ಭರತೀಶ್ ರೆಡ್ಡಿ, ವೈದ್ಯಕೀಯ ಅಧೀಕ್ಷಕ ಡಾ.ಅಮನ್‌ನಾಯಕ್, ಸ್ಥಳ: ಬಿಜಿಎಸ್ ಸಾಂಸ್ಕೃತಿಕ ಸಭಾ ಭವನ, ಹೆಬ್ಬಾಳು, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ವಚನ ಬಾನುಲಿ–ಬಾನುಲಿ ಸರಣಿ, ಪ್ರಸ್ತುತಿ–ಪ್ರೊ. ಓ.ಎಲ್.ನಾಗಭೂಷಣ ಸ್ವಾಮಿ, 6.40 ಪದಸಂಸ್ಕೃತಿ– ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಕನ್ನಡ ಚಿತ್ರಗೀತೆಗಳು, 8.30 ನಾ ಕಸ್ತೂರಿ ಅವರ ಪಾತಳದಲ್ಲಿ ಪಾಪಚ್ಚಿ–ಮಕ್ಕಳ ಸಾಹಿತ್ಯ ಕೃತಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.35 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಅರವಿಂದ್ ಪರಿಕ್ – ಸಿತಾರ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಹೆಚ್.ಟಿ. ಹರೀಶ್–ಸ್ಯಾಕ್ಸೋಫೋನ್ ವಾದನ, 4.00 ಮಹಿಳಾರಂಗ, ಭಾವಸಂಗಮ– ಭಾವಗೀತೆಗಳನ್ನಾಧರಿಸಿದ ಕಾರ್ಯಕ್ರಮ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ, ರೇಷ್ಮೆರಂಗ– ರೇಷ್ಮೆ ತಂತ್ರಜ್ಞಾನಗಳ ಕುರಿತ ಬಾನುಲಿ ಸರಣಿ ವಿವಿಧ ಬೆಳವಣಿಗೆ ಪರಿಸ್ಥಿತಿಗೆ ಸೂಕ್ತವಾದ ಹಿಪ್ಪುನೇರಳೆ ತಳಿಗಳು ಈ ಕುರಿತು ಮೈಸೂರಿನ ಕೇಂದ್ರೀಯ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಮಂಜಪ್ಪ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮಂದ ಸುಧಾರಾಣಿ – ಹಾಡುಗಾರಿಕೆ, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 20 ಬುಧವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 34 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಚಿಂತೆ ಬೇಡ ಬಸ್‌ಗಳಿವೆ...

ಹೈಕೋರ್ಟ್ ಆದೇಶದಂತೆ ಸಾರಿಗೆ ನೌಕರರ ಇಂದಿನ ಮುಷ್ಕರ ವಾಪಸ್





ಬೆಂಗಳೂರು: ಮೇ 20ರಂದು (ಬುಧವಾರ) ರಾಜ್ಯಾದ್ಯಂತ ನಡೆಯಬೇಕಿದ್ದ ಸಾರಿಗೆ ನೌಕರರ ಬೃಹತ್ ಮುಷ್ಕರ ದಿಢೀರ್ ರದ್ದಾಗಿದೆ. ಹೈಕೋರ್ಟ್ ನೀಡಿರುವ ಮಹತ್ವದ ನಿರ್ದೇಶನಕ್ಕೆ ಗೌರವ ನೀಡಿರುವ ಸಾರಿಗೆ ಸಂಸ್ಥೆಗಳ ಜಂಟಿ ಕ್ರಿಯಾ ಸಮಿತಿಯು ತನ್ನ ಪ್ರತಿಭಟನೆಯ ನಿರ್ಧಾರವನ್ನು ಅಧಿಕೃತವಾಗಿ ಹಿಂಪಡೆದಿದೆ. ಇದರಿಂದಾಗಿ ನಾಳೆ ರಾಜ್ಯಾದ್ಯಂತ ಕೆಎಸ್ ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ಎಲ್ಲ ಸಾರಿಗೆ ಬಸ್‌ಗಳ ಸಂಚಾರ ಎಂದಿನಂತೆ ಸುಗಮವಾಗಿರಲಿದ್ದು, ಸಾರ್ವಜನಿಕರು ಹಾಗೂ ಪ್ರಯಾಣಿಕರು ನಿಟ್ಟುಸಿರುಬಿಟ್ಟಿದ್ದಾರೆ.

ಮುಷ್ಕರದ ಕುರಿತು ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಪ್ರತಿಭಟನೆಯನ್ನು ಕೈಬಿಟ್ಟು ಸರ್ಕಾರದೊಂದಿಗೆ ಸಂಧಾನ ಸಭೆ ನಡೆಸುವಂತೆ ಸಾರಿಗೆ ಒಕ್ಕೂಟಕ್ಕೆ ಸೂಚಿಸಿತ್ತು. ಈ ಕುರಿತು ಮಾಹಿತಿ ನೀಡಿರುವ ಕೆಎಸ್‌ಆರ್‌ಟಿಸಿ ಜಂಟಿ ಕ್ರಿಯಾ ಸಮಿತಿ, ನಾವು ನಿಯಮಾನುಸಾರವೇ ಮುಷ್ಕರದ ಮುನ್ಸೂಚನೆಯನ್ನು ಸರ್ಕಾರಕ್ಕೆ ನೀಡಿದ್ದೆವು. ಆದರೆ ನ್ಯಾಯಾಲಯದ ಆದೇಶವನ್ನು ಗೌರವಿಸಿ ಸದ್ಯಕ್ಕೆ ಮುಷ್ಕರವನ್ನು ವಾಪಸ್ ಪಡೆಯುತ್ತಿದ್ದೇವೆ. ಮುಖ್ಯಮಂತ್ರಿಗಳು ಅಥವಾ ಸಾರಿಗೆ ಸಚಿವರು ಶೀಘ್ರದಲ್ಲೇ ನಮ್ಮ ಬೇಡಿಕೆಗಳ ಈಡೇರಿಕೆಗೆ ಕಾಲಾವಕಾಶ ನಿಗದಿಪಡಿಸಿ ಸಭೆ ಕರೆಯಬೇಕು ಎಂದು ಹೈಕೋರ್ಟ್ ಸರ್ಕಾರಕ್ಕೂ ನಿರ್ದೇಶನ ನೀಡಿದೆ ಎಂದು ತಿಳಿಸಿದೆ.


ಸರ್ಕಾರದ ವಿರುದ್ಧ ನೌಕರರ ಒಕ್ಕೂಟದ ಕಿಡಿ: ಇದೇ ವೇಳೆ ಜಂಟಿ ಕ್ರಿಯಾ ಸಮಿತಿಯ ಪ್ರಧಾನ ಕಾರ್ಯದರ್ಶಿ ವಿಜಯ್ ಭಾಸ್ಕರ್ ಸರ್ಕಾರದ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕಾರ್ಮಿಕರಿಗೆ ಪ್ರತಿಭಟಿಸುವ ಹಕ್ಕಿದೆ. ಆದರೆ ಸರ್ಕಾರವೇ ಮುಂಚೂಣಿಯಲ್ಲಿ ನಿಂತು ಬೇರೆಯವರಿಂದ ಕೋರ್ಟ್‌ನಲ್ಲಿ ಪಿಐಎಲ್ ಹಾಕಿಸಿರುವ ಶಂಕೆ ಮೂಡುತ್ತಿದೆ. ನೌಕರರ ವೇತನ ಹಾಗೂ ಡಿಎ ಹೆಚ್ಚಳವಾಗಬೇಕಿದೆ. ಸರ್ಕಾರ ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳಬಾರದು. ಹೈಕೋರ್ಟ್ ಸೂಚನೆಯಂತೆ ಮುಖ್ಯಮಂತ್ರಿಗಳ ಜೊತೆ ಸಭೆ ನಡೆಸಲು ನಾವು ಸಿದ್ಧರಿದ್ದೇವೆ. ನ್ಯಾಯಾಲಯ ಕೂಡ ನಮ್ಮ ಹಲವು ಬೇಡಿಕೆಗಳನ್ನು ಗಮನಿಸಿದೆ ಎಂದಿದ್ದಾರೆ. ಸದ್ಯಕ್ಕೆ ಸಾರಿಗೆ ನೌಕರರು ಮುಷ್ಕರದ ನೋಟಿಸ್ ಅನ್ನು ಅಧಿಕೃತವಾಗಿ ಹಿಂಪಡೆದಿರುವುದರಿಂದ, ಬುಧವಾರ ಮುಂಜಾನೆಯಿಂದಲೇ ಎಲ್ಲ ನಗರ ಹಾಗೂ ಗ್ರಾಮಾಂತರ ಬಸ್‌ಗಳು ಎಂದಿನ ವೇಳಾಪಟ್ಟಿಯಂತೆಯೇ ಸಂಚರಿಸಲಿವೆ ಎಂದು ಸಾರಿಗೆ ಇಲಾಖೆಯ ಮೂಲಗಳು ಸ್ಪಷ್ಟಪಡಿಸಿವೆ

ಹೈಕೋರ್ಟ್‌ನಿಂದ ಮುಷ್ಕರಕ್ಕೆ ತಡೆ: ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಬೃಹತ್ ಮುಷ್ಕರ ನಡೆಸಲು ಸಕಲ ಸಿದ್ಧತೆ ಮಾಡಿಕೊಂಡಿದ್ದ ಸಾರಿಗೆ ನೌಕರರ ಒಕ್ಕೂಟಗಳಿಗೆ ಕರ್ನಾಟಕ ಹೈಕೋರ್ಟ್ ಬಿಗ್ ಶಾಕ್ ನೀಡಿದೆ. ಸಾರ್ವಜನಿಕರಿಗೆ ಎದುರಾಗಬಹುದಾದ ಭಾರೀ ತೊಂದರೆಗಳನ್ನು ಗಂಭೀರವಾಗಿ ಪರಿಗಣಿಸಿರುವ ನ್ಯಾಯಾಲಯ, ಸಾರಿಗೆ ನೌಕರರ ಉದ್ದೇಶಿತ ಮುಷ್ಕರಕ್ಕೆ ಮಧ್ಯಂತರ ತಡೆ ವಿಧಿಸಿ ಆದೇಶ ಹೊರಡಿಸಿದೆ. ಮುಷ್ಕರದ ಹಾದಿ ಬಿಟ್ಟು ಸರ್ಕಾರದೊಂದಿಗೆ ಮಾತುಕತೆಯ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಸೂಚನೆ ನೀಡಿದೆ.

ಸದ್ಯಕ್ಕೆ ರಾಜ್ಯದಲ್ಲಿ ಯಾವುದೇ ರೀತಿಯ ಮುಷ್ಕರ ಅಥವಾ ಸಾರ್ವಜನಿಕ ಸೇವೆಗೆ ಧಕ್ಕೆ ತರುವಂತಹ ಪ್ರತಿಭಟನೆಗಳನ್ನು ನಡೆಸದಂತೆ ಒಕ್ಕೂಟಗಳಿಗೆ ನಿರ್ದೇಶಿಸಿದೆ. ಮುಷ್ಕರ ಮಾಡದಂತೆ ನಾವು ಇಂದು ತಡೆಹಿಡಿಯುತ್ತಿದ್ದೇವೆ. ಲಕ್ಷಾಂತರ ಸಾರ್ವಜನಿಕರ ಹಿತದೃಷ್ಟಿಯಿಂದ ಈ ಕಠಿಣ ನಿರ್ಧಾರ ಕೈಗೊಳ್ಳುವುದು ಸದ್ಯದ ಪರಿಸ್ಥಿತಿಯಲ್ಲಿ ಅನಿವಾರ್ಯ. ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ನೌಕರರ ಒಕ್ಕೂಟ ಸಜ್ಜಾಗಿದೆ. ನ್ಯಾಯಾಲಯದ ಈ ಹಸ್ತಕ್ಷೇಪದಿಂದಾಗಿ ನಾಳೆ ಎಂದಿನಂತೆ ಸಾರಿಗೆ ಬಸ್‌ಗಳು ರಸ್ತೆಗಿಳಿಯಲಿವೆ.

ತುಮಕೂರಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರದ ‘3 ವರ್ಷಗಳ ಸಾಧನಾ ಸಮರ್ಪಣಾ’

ಪ್ರಣಾಳಿಕೆಯ 580ರಲ್ಲಿ 290ಕ್ಕೂ ಅಧಿಕ ಭರವಸೆ ಈಡೇರಿಸಿದ್ದೇವೆ: ಸಿಎಂ ಸಿದ್ದರಾಮಯ್ಯ



ತುಮಕೂರಲ್ಲಿ ಮಂಗಳವಾರ ನಡೆದ ಸಾಧನಾ ಸಮರ್ಪಣಾ ಸಮಾವೇಶದಲ್ಲಿ ವಿವಿಧ ಫಲಾನುಭವಿಗಳಿಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್, ಗೃಹ ಸಚಿವ ಪರಮೇಶ್ವರ್ ಸಮ್ಮುಖದಲ್ಲಿ ಹಕ್ಕುಪತ್ರ ವಿತರಿಸಲಾಯಿತು.

ಬೆಂಗಳೂರು, ಮೇ 19(ಕೆಎಂಶಿ)– ಜಾತಿ, ಧರ್ಮದ ಹೆಸರಿನಲ್ಲಿ ಮನುಷ್ಯರನ್ನು ವಿಭಜಿಸುವ ಕೆಟ್ಟ ರಾಜಕಾರಣ ಮಾಡದೆ, ರಾಜ್ಯದಲ್ಲಿ ಅಭಿವೃದ್ಧಿ ಪರ್ವದ ಇತಿಹಾಸ ಸೃಷ್ಟಿಸಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿ ವಿರುದ್ಧ ಕಿಡಿಕಾರಿದ್ದಾರೆ.


ನಾವು ಅಧಿಕಾರಕ್ಕೆ ಬಂದ ಬಳಿಕ ಸರ್ವ ಜಾತಿ, ಸರ್ವ ಧರ್ಮದ ಸಕಲ ಜನತೆಯ ಅಭಿವೃದ್ಧಿಗೆ ಕೆಲಸ ಮಾಡಿದ್ದೇವೆ. ಎಲ್ಲಾ ಜಾತಿ, ಎಲ್ಲಾ ಧರ್ಮದ ಬಡವರಿಗೆ ಶಕ್ತಿ ತುಂಬುವ ಕೆಲಸ ಮಾಡಿದ್ದೇವೆ ಎಂದರು.

ಸರ್ಕಾರಕ್ಕೆ ಮೂರು ವರ್ಷಗಳು ಪೂರೈಸಿರುವ ಸಂದರ್ಭದಲ್ಲಿ ತುಮಕೂರು ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಆಯೋಜಿಸಿದ್ದ 'ಮೂರು ವರ್ಷಗಳ ಸಾಧನಾ ಸಮರ್ಪಣಾ' ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು ಪ್ರಣಾಳಿಕೆಯಲ್ಲಿನ 580 ಭರವಸೆಗಳಲ್ಲಿ 290 ಕ್ಕೂ ಹೆಚ್ಚು ಭರವಸೆಗಳನ್ನು ಈಡೇರಿಸಿದ್ದೇವೆ. ಉಳಿದ ಎರಡು ವರ್ಷಗಳಲ್ಲಿ ಬಾಕಿ ಭರವಸೆಗಳನ್ನೂ ಈಡೇರಿಸಲಾಗುವುದು ಎಂದರು.

ಪ್ರಮುಖವಾಗಿ ನಾವು ಘೋಷಿಸಿದ್ದ ಐದು ಗ್ಯಾರಂಟಿಗಳನ್ನು ಅಧಿಕಾರಕ್ಕೆ ಬಂದ ಕ್ಷಣದಿಂದಲೇ ಒಂದೊಂದಾಗಿ ಈಡೇರಿಸಿದ್ದಲ್ಲದೆ ಉಳಿದ ಭರವಸೆಗಳನ್ನೂ ಈಡೇರಿಸಿ, ಧನ್ಯತೆ ಅರ್ಪಿಸಲು ನಿಮ್ಮ ಮುಂದೆ ನಿಂತಿದ್ದೇವೆ ಎಂದರು.

35 ವರ್ಷಗಳಿಂದ ಗುಜರಾತ್‌ನಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ಇಲ್ಲಿ ಅಭಿವೃದ್ಧಿಯೇ ಆಗಿಲ್ಲ. ಮೊನ್ನೆಯಷ್ಟೇ ಕೇವಲ 2500 ರೂ ಮನೆ ಬಾಡಿಗೆ ಕಟ್ಟಲಾಗದ ಕಾರಣಕ್ಕೆ ಬಾಡಿಗೆಗಿದ್ದ ಬಡ ಕುಟುಂಬದ 13 ವರ್ಷದ ಮಗಳ ಮೇಲೆ ಮನೆ ಮಾಲೀಕ ಅತ್ಯಾಚಾರ ಎಸಗಿರುವ ಘಟನೆ ಗುಜರಾತ್‌ನಲ್ಲಿ ನಡೆದಿದೆ. ಇದು ನಿಜವಾದ ಗುಜರಾತ್ ಮಾದರಿ. ಕರ್ನಾಟಕ ಮಾದರಿ ಅಭಿವೃದ್ಧಿ ಮುಂದೆ ಗುಜರಾತ್ ಮಾದರಿ ಟೊಳ್ಳು ಎಂದರು. ■ 6ನೇ ಪುಟಕ್ಕೆ

ಪ್ರಾಯೋಜಿತ ಪಿಆರ್‌ನಿಂದ ವಿಶ್ವ ಗುರು ಆಗಲು ಸಾಧ್ಯವಿಲ್ಲ



ನವದೆಹಲಿ, ಮೇ 19– ಇಂಧನ ಬೆಲೆ ಏರಿಕೆಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದ್ದು, ಬಿಜೆಪಿಯಲ್ಲಿ ದೂರದೃಷ್ಟಿ ಹಾಗೂ ನಾಯಕತ್ವದ ಅಭಾವ ಕಾಡುತ್ತಿದೆ ಎಂದು ಆರೋಪಿಸಿದ್ದಾರೆ.

ಪ್ರಾಯೋಜಿತ ಪಿಆರ್‌ನಿಂದ ವಿಶ್ವ ಗುರು ಆಗಲು ಸಾಧ್ಯವಿಲ್ಲ ಎಂದು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಖರ್ಗೆ ಪೋಸ್ಟ್ ಮಾಡಿದ್ದಾರೆ. ಸಾಮಾನ್ಯ ಜನರಿಂದ ದೋಚುವುದು ಹಾಗೂ ಅಮೆರಿಕದಿಂದ ಅದಾನಿಗೆ ಉಚಿತ ಪಾಸ್ ನೀಡುವುದು – ಇದುವೇ ಮೋದಿಯ ರಾಜಿ ಮಾದರಿ ಎಂದು ಟೀಕಿಸಿದ್ದಾರೆ. ಮಂಗಳವಾರ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯಲ್ಲಿ ಪ್ರತಿ ಲೀಟರ್‌ಗೆ 90 ಪೈಸೆ ಹೆಚ್ಚಿಸಲಾಗಿತ್ತು. ಒಂದು ವಾರದ ಅವಧಿಯಲ್ಲಿ ಎರಡನೇ ಸಲ ಇಂಧನ ದರದಲ್ಲಿ ಬೆಲೆ ಏರಿಕೆಯಾಗಿತ್ತು.

ಬೆಲೆ ಏರಿಕೆಯಾದ ಕೇವಲ ನಾಲ್ಕು ದಿನಗಳ ಬೆನ್ನಲ್ಲೇ ಮೋದಿ ಸರ್ಕಾರ ಮತ್ತೊಮ್ಮೆ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳನ್ನು ಹೆಚ್ಚಿಸಿದೆ. ಜನರಿಗೆ ಮಿತವ್ಯಯ ಹಾಗೂ ಉಳಿತಾಯದ ಬಗ್ಗೆ ಪಾಠ ಮಾಡುತ್ತಿದ್ದ ■ 6ನೇ ಪುಟಕ್ಕೆ

ಎರಡು ವರ್ಷದಲ್ಲಿ 5,394 ರೈತರು ಆತ್ಮಹತ್ಯೆ; ಅನ್ನದಾತರ ಸಮಾಧಿ ಮೇಲೆ ಸರ್ಕಾರದ ಸಮರ್ಪಣಾ ಸಮಾವೇಶ

ರೈತರ ಆತ್ಮಹತ್ಯೆ ಪ್ರಕರಣಗಳನ್ನು ಕಾಂಗ್ರೆಸ್ ಜಾಣ್ಮೆಯಿಂದ ಮುಚ್ಚಿಟ್ಟಿದೆ



ಬೆಂಗಳೂರು, ಮೇ 19– ರೈತರ ಆತ್ಮಹತ್ಯೆ ಪ್ರಕರಣಗಳನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಜಾಣ್ಮೆಯಿಂದ ಮುಚ್ಚಿಟ್ಟಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ. ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಇತ್ತೀಚೆಗೆ ಅನ್ನದಾತರ ಆತ್ಮಹತ್ಯೆ ಹೆಚ್ಚಳ ಎನ್ನುವ ವರದಿ ಓದಿದೆ. ಆಗ ನನಗೆ ತೀವ್ರ ಆಘಾತ ಉಂಟಾಯಿತು. ಹನ್ನೆರಡು ದಿನಗಳ ಹಿಂದಿನ ಈ ವರದಿಯಿಂದಾದರೂ ಸರ್ಕಾರ ಕಣ್ತೆರೆಯುತ್ತದೆ ಎಂದು ಭಾವಿಸಿದ್ದೆ. ಆದರೆ, ಸಾಧನಾ ಸಮಾವೇಶದ ಸಂಭ್ರಮದಲ್ಲಿರುವ ಈ ಸರ್ಕಾರಕ್ಕೆ ರೈತರ ಹಿತಾಸಕ್ತಿ ಬೇಕಾಗಿಲ್ಲ ಎಂದು ಕಿಡಿಕಾರಿದರು.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ(ಎನ್‌ಸಿಆರ್‌ಬಿ) ವರದಿ ಪ್ರಕಾರ ರಾಜ್ಯದಲ್ಲಿ 2023ರಲ್ಲಿ 2,423 ಹಾಗೂ 2024ರಲ್ಲಿ 2,971 ರೈತರು, ಕೃಷಿ ಕಾರ್ಮಿಕರು ■ 6ನೇ ಪುಟಕ್ಕೆ

ಮೆಡಿಕಲ್ ಶಾಪ್‌ಗಳ ಬಂದ್‌ಗೆ ಕರೆ

ಬೆಂಗಳೂರು: ಇ–ಫಾರ್ಮಸಿಗಳು, ಆನ್‌ಲೈನ್ ಔಷಧ ಮಾರಾಟ ಹಾಗೂ ಅತಿಯಾದ ರಿಯಾಯಿತಿ ವಿರೋಧಿಸಿ ಔಷಧ ವ್ಯಾಪಾರಿಗಳು ಮತ್ತು ಔಷಧ ವಿತರಕರು ಬುಧವಾರ ರಾಜ್ಯಾದ್ಯಂತ ಬಂದ್‌ಗೆ ಕರೆ ನೀಡಿದ್ದು, ರಾಷ್ಟ್ರವ್ಯಾಪಿ 24 ಗಂಟೆಗಳ ಬಂದ್‌ನಲ್ಲಿ ಭಾಗವಹಿಸಲಿದ್ದಾರೆ.

ಆಲ್ ಇಂಡಿಯಾ ಆರ್ಗನೈಸೇಶನ್ ಆಫ್ ಕೆಮಿಸ್ಟ್ಸ್ ಅಂಡ್ ಡ್ರಗ್ಗಿಸ್ಟ್ಸ್ (ಎಐಒಸಿಡಿ) ಪ್ರಕಾರ, ದೇಶಾದ್ಯಂತ 15 ಲಕ್ಷಕ್ಕೂ ಹೆಚ್ಚು ಔಷಧ ವ್ಯಾಪಾರಿಗಳು ಮತ್ತು ಔಷಧ ವಿತರಕರು, ಔಷಧಿಗಳ ಅಕ್ರಮ ಆನ್‌ಲೈನ್ ಮಾರಾಟ ಮತ್ತು ಕಾರ್ಪೊರೇಟ್ ಸಂಸ್ಥೆಗಳ ವೃತ್ತಿಪರವಲ್ಲದ ಸ್ಪರ್ಧೆಯನ್ನು ವಿರೋಧಿಸಿ ಮುಷ್ಕರ ನಡೆಸುತ್ತಿದ್ದಾರೆ. ಹೀಗಾಗಿ ನಾಳೆ ಔಷಧ ಅಂಗಡಿಗಳು ಬಂದ್ ಆಗಲಿವೆ. ಇಂದು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕರ್ನಾಟಕ ಕೆಮಿಸ್ಟ್ಸ್ ಅಂಡ್ ಡ್ರಗ್ಗಿಸ್ಟ್ಸ್ ಸಂಘ(ಕೆಸಿಡಿಎ)ದ ■ 6ನೇ ಪುಟಕ್ಕೆ

ಮೈಸೂರಲ್ಲಿ ಮೆಡಿಕಲ್ ಶಾಪ್ ಬಂದ್ ಇಲ್ಲ

ಮೈಸೂರು, ಮೇ 19– ಸಾರ್ವಜನಿಕರ ಹಿತಾಸಕ್ತಿ ದೃಷ್ಟಿಯಿಂದ ಮೆಡಿಕಲ್ ಶಾಪ್‌ಗಳನ್ನು ಮುಚ್ಚದಿರಲು ಮೈಸೂರು ಜಿಲ್ಲಾ ಕೆಮಿಸ್ಟ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್(ಎಂಡಿಸಿಡಿಎ) ನಿರ್ಧರಿಸಿದೆ ಇವರಿಗೆ ಜಿಲ್ಲಾಡಳಿತ ಪೊಲೀಸ್ ಭದ್ರತೆ ಕಲ್ಪಿಸಿದೆ.

ಎಐಒಸಿಡಿ ಸಂಘಟನೆಯು ಬುಧವಾರ(ಮೇ 20) ಔಷಧಿ ಅಂಗಡಿಗಳ ಬಂದ್‌ಗೆ ಕರೆ ನೀಡಿದ್ದು, ಆದರೆ ಸಾರ್ವಜನಿಕರಿಗೆ ತೊಂದರೆಯಾಗಬಾರದು ಎಂಬ ಕಾರಣಕ್ಕೆ ಮೈಸೂರಿನ ಎಲ್ಲಾ ಔಷಧ ಅಂಗಡಿಗಳನ್ನೂ ತೆರೆಯುವುದಾಗಿ ಎಂಡಿಸಿಡಿಎ ಸ್ಪಷ್ಟಪಡಿಸಿದೆ. ನಮ್ಮ ವ್ಯಾಪಾರ–ವಹಿವಾಟು ಸಮಾಜದ ಮೂಲ ಹಾಗೂ ಅತ್ಯವಶ್ಯಕ. ಸಾರ್ವಜನಿಕ ಹಿತ ಕಾಯುವ ಗುರುತರ ಜವಾಬ್ದಾರಿ ನಮ್ಮ ಮೇಲಿದೆ. ಬೇಡಿಕೆಗಳ ಸಂಬಂಧ ಡಿಸಿಗೆ ಮನವಿ ಸಲ್ಲಿಸಲು ನಿರ್ಧರಿಸಿದ್ದಾರೆ.

ದುಬಾರೆಯಲ್ಲಿ ಕಂಜನ್ ದಾಳಿಯಿಂದ ತೀವ್ರ ಗಾಯಗೊಂಡಿದ್ದ ಜೈ ಮಾರ್ತಾಂಡ ಸಾವು

• ಎರಡು ದಿನ ದುಬಾರೆ ಆನೆ ಶಿಬಿರ ಬಂದ್ • ಕಣ್ಣೀರಾದ ಮಾವುತ–ಕಾವಾಡಿಗಳು; ಕ್ಯಾಂಪ್‌ನಲ್ಲಿ ನೀರವ ಮೌನ




ಕಂಜನ್ ದಾಳಿಯಿಂದ ತೀವ್ರ ಗಾಯಗೊಂಡಿದ್ದ ಜೈ ಮಾರ್ತಾಂಡ ಆನೆ ಮೃತಪಟ್ಟಿರುವುದು.

ಕುಶಾಲನಗರ, ಮೇ 19(ಎಂಟಿವೈ)– ಕೊಡಗು ಜಿಲ್ಲೆಯ ಕುಶಾಲನಗರದ ದುಬಾರೆ ಆನೆ ಕ್ಯಾಂಪ್‌ನಲ್ಲಿ ದಸರಾ ಆನೆ ಕಂಜನ್ ಮಾರಕ ದಾಳಿಯಿಂದ ತೀವ್ರವಾಗಿ ಗಾಯಗೊಂಡಿದ್ದ ಜೈ ಮಾರ್ತಾಂಡ ಆನೆ ಮಂಗಳವಾರ ಬೆಳಗ್ಗೆ ಮೃತಪಟ್ಟಿದೆ.

ದುಬಾರೆ ಸಾಕಾನೆ ಶಿಬಿರದಲ್ಲಿ ನೂರಾರು ಪ್ರವಾಸಿಗರ ಸಮ್ಮುಖದಲ್ಲೇ ಕಾವೇರಿ ನದಿಯಲ್ಲಿ ಸ್ನಾನ ಮಾಡಿಸುತ್ತಿದ್ದಾಗ ಏಕಾಏಕಿ ರೊಚ್ಚಿಗೆದ್ದ 27 ವರ್ಷದ ದಸರಾ ಆನೆ ಕಂಜನ್, ಪಕ್ಕದಲ್ಲೇ ಇದ್ದ 34 ವರ್ಷದ ಜೈ ಮಾರ್ತಾಂಡ ಆನೆ ಮೇಲೆ ದಾಳಿ ಮಾಡಿತ್ತು. ದಾಳಿಯ ರಭಸಕ್ಕೆ ಜೈ ಮಾರ್ತಾಂಡ ಮುಗ್ಗರಿಸಿ ಬಿದ್ದಿತ್ತು. ಈ ವೇಳೆ ಅದರ ಬಳಿಯೇ ಇದ್ದ ಚೆನ್ನೈ ಸಮೀಪದ ಪಲ್ಲವರಂನ ಎಸ್. ಜೊಯಿಷಿ ಅಲಿಯಾಸ್ ಜಿನ್ನು ಅಲಿಯಾಸ್ ತುಳಸಿ (33) ಆನೆಯಡಿ ಸಿಲುಕಿ ದುರಂತ ರೀತಿ ಸಾವನ್ನಪ್ಪಿದರು. ಅವರ ಪತಿ ಸಾಫ್ಟ್‌ವೇರ್ ಇಂಜಿನಿಯರ್ ಜೋಯೆಲ್ ಹಾಗೂ ಮೂರು ವರ್ಷದ ಪುತ್ರಿ ಕೂದಲೆಳೆ ■ 6ನೇ ಪುಟಕ್ಕೆ

ದಸರಾ ಅವಕಾಶ ಕಳೆದುಕೊಂಡ ಕಂಜನ್



ಮೈಸೂರು, ಮೇ 19(ಎಂಟಿವೈ)– ದುಬಾರೆ ಆನೆ ಶಿಬಿರದಲ್ಲಿ ದಾಳಿ ನಡೆಸಿ ಜೈ ಮಾರ್ತಾಂಡ ಆನೆಯ ಸಾವಿಗೆ ಕಾರಣವಾದ ಕಂಜನ್ ಆನೆಯನ್ನು ದಸರಾ ಮಹೋತ್ಸವಕ್ಕೆ ಕರೆತರದಂತೆ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಸೂಚಿಸಿದ್ದಾರೆ.

ದಸರಾ ಆನೆ ಕಂಜನ್ ಮತ್ತು ಮಕ್ನ ಆನೆ ಜೈ ಮಾರ್ತಾಂಡ ನಡುವೆ ನಡೆದ ಕಾಳಗದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಮಾರ್ತಾಂಡ ಇಂದು ಚಿಕಿತ್ಸೆ ಫಲ ಕಾರಿಯಾಗದೆ ಮೃತಪಟ್ಟಿದ್ದು ನೋವುಂಟು ಮಾಡಿದೆ. ಅನಿರೀಕ್ಷಿತ ಮತ್ತು ಊಹಿಸಲೂ ಆಗದ ದುರ್ಘಟನೆಯಲ್ಲಿ ಒಬ್ಬ ಪ್ರವಾಸಿ ಮಹಿಳೆ ಮತ್ತು ಒಂದು ಆನೆ ಮೃತಪಟ್ಟಿರುವುದು ಅತ್ಯಂತ ದುಃಖದ ಸಂಗತಿ ಎಂದು ಸಂತಾಪ ಸೂಚಿಸಿದ್ದಾರೆ. ಹಾಸನ ಜಿಲ್ಲೆ ಆಲೂರಿನಲ್ಲಿ 2023ರಲ್ಲಿ ಸೆರೆ ಹಿಡಿಯಲಾಗಿದ್ದ ಮಾರ್ತಾಂಡ 4500 ಕೆ.ಜಿ. ತೂಕವಿತ್ತು. ಹಾಸನ ಜಿಲ್ಲೆ ಯಸಳೂರಿನ ಬಳಿ 2014ರಲ್ಲಿ ಸೆರೆ ಹಿಡಿಯಲಾಗಿದ್ದ 27 ವರ್ಷದ ಕಂಜನ್ 3 ವರ್ಷದಿಂದ ದಸರಾ ಮಹೋತ್ಸವದಲ್ಲಿ ಭಾಗಿಯಾಗುತ್ತಿದ್ದ. ಇನ್ನು ಮುಂದೆ ದಸರಾ ಮಹೋತ್ಸವಕ್ಕೆ ಈ ಆನೆಯನ್ನು ಬಳಸದಂತೆ ಸೂಚಿಸಲಾಗಿದೆ.

ಪೆಟ್ರೋಲ್, ಡೀಸೆಲ್ ದರ ಮತ್ತೆ 90 ಪೈಸೆ ಹೆಚ್ಚಳ

5 ದಿನದಲ್ಲಿ ಎರಡನೇ ಬಾರಿ ಏರಿಕೆ



ನವದೆಹಲಿ: ಇರಾನ್ ಯುದ್ಧದ ನಡುವೆಯೇ ಇಂಧನ ದರಗಳನ್ನು ಒಂದು ವಾರಕ್ಕೂ ಕಡಿಮೆ ಅವಧಿಯಲ್ಲಿ ಎರಡನೇ ಬಾರಿ ಕೇಂದ್ರ ಸರ್ಕಾರ ಹೆಚ್ಚಿಸಿದ್ದು, ಇಂದು ಮಂಗಳವಾರ ತೈಲ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಪ್ರತಿ ಲೀಟರ್‌ಗೆ ಸುಮಾರು 90 ಪೈಸೆಯಷ್ಟು ಏರಿಸಿವೆ.

ದೆಹಲಿಯಲ್ಲಿ ಪೆಟ್ರೋಲ್ ದರವನ್ನು ಲೀಟರ್‌ಗೆ 97.77ರೂಪಾಯಿಯಿಂದ 98.64 ರೂಪಾಯಿಗೆ ಹೆಚ್ಚಿಸಲಾಗಿದ್ದು, ಡೀಸೆಲ್ ದರವು 90.67 ರೂಪಾಯಿಯಿಂದ 91.58 ರೂಪಾಯಿಗೆ ■ 6ನೇ ಪುಟಕ್ಕೆ

ಮೈಸೂರು ಪಾಲಿಕೆಯಿಂದ 3 ಕೋಟಿಯಲ್ಲಿ ‘ಪುರಭವನ’ ಪುನರುಜ್ಜೀವನ

• ಟೆಂಡರ್ ಪ್ರಕ್ರಿಯೆ ಪೂರ್ಣ • ಪಾರಂಪರಿಕ ತಜ್ಞರ ಸಲಹೆಯಂತೆ ಕಾಮಗಾರಿ

ಮೈಸೂರು, ಮೇ 19(ಎಂಟಿವೈ)– ಶಿಥಿಲಾವಸ್ಥೆ ತಲುಪಿದ್ದ ಮೈಸೂರಿನ ಪ್ರಮುಖ ಪಾರಂಪರಿಕ ಕಟ್ಟಡಗಳಲ್ಲಿ ಒಂದಾಗಿರುವ 142 ವರ್ಷದ ಶ್ರೀ ರಂಗಾಚಾರ್ಲು ಸ್ಮಾರಕ ಪುರಭವನ (ಟೌನ್‌ಹಾಲ್)ವನ್ನು ಮೈಸೂರು ಮಹಾನಗರ ಪಾಲಿಕೆ 3 ಕೋಟಿ ರೂ. ವೆಚ್ಚ ದಲ್ಲಿ ದುರಸ್ತಿಗೆ ಯೋಜನೆ ರೂಪಿಸಿದೆ.

ಮೈಸೂರಿನ ಸರ್ಕಾರಿ ಅತಿಥಿ ಗೃಹ ಹೊರತುಪಡಿಸಿದರೆ ಮೈಸೂರಿನ ಅತ್ಯಂತ ಹಳೆಯ ಕಟ್ಟಡಗಳಲ್ಲಿ ಪುರಭವನ ಎರಡನೇ ಕಟ್ಟಡವಾಗಿದೆ. ಕಳೆದ 20 ವರ್ಷದಿಂದ ನಿರ್ವಹಣೆ ಕೊರತೆಯಿಂದಾಗಿ ಪುರಭವನದ ಕಟ್ಟಡ ಶಿಥಿಲಾವಸ್ಥೆ ತಲುಪಿತ್ತು. ಅಲ್ಲದೆ, ಈ ಹಿಂದೆ ದುರಸ್ತಿಗಾಗಿ ಟೆಂಡರ್ ಪಡೆದಿದ್ದ ಆಂಧ್ರ ಮೂಲದ ನಿರ್ಮಾಣ ಸಂಸ್ಥೆಯೊಂದು ನ್ಯಾಯಾಲಯದಲ್ಲಿ ದಾವೆ ಹೂಡಿತ್ತು. ಪುನರ್ಜೀವನ ಕಾಯಕ ನನೆಗುದಿಗೆ ಬಿದ್ದು, ಪುರಭವನದ ಕಟ್ಟಡ ಕುಸಿಯುವ ಹಂತಕ್ಕೆ ತಲುಪಿತ್ತು. ಈ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಕೊನೆಗೂ ಮನಸ್ಸು ಮಾಡಿ, ಈ ಸಾಲಿನ ಬಜೆಟ್‌ನಲ್ಲಿ ಪುರಭವನ ದುರಸ್ತಿಗೆ 3 ಕೋಟಿ ಮೀಸಲಿಟ್ಟಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ.



ಮೈಸೂರಿನ ಪುರಭವನದ ಕಟ್ಟಡ ಶಿಥಿಲಗೊಂಡಿರುವ ಭಾಗ.

> ಮೈಸೂರು ಮಹಾನಗರ ಪಾಲಿಕೆ ಬಜೆಟ್‌ನಲ್ಲಿ ಪುರಭವನದ ದುರಸ್ತಿಗೆ 3 ಕೋಟಿ ಹಣ ಮೀಸಲಿಡಲಾಗಿದೆ. ಕಟ್ಟಡವನ್ನು ತುರ್ತಾಗಿ ದುರಸ್ತಿ ಮಾಡುವ ಅನಿವಾರ್ಯತೆಯನ್ನು ಪಾರಂಪರಿಕ ತಜ್ಞರ ತಂಡ ಪ್ರಸ್ತಾಪಿಸಿರುವ ಹಿನ್ನೆಲೆಯಲ್ಲಿ ಇದೀಗ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ಶೀಘ್ರವೇ ಮೇಲ್ಛಾವಣಿ ಹಾಗೂ ಕಟ್ಟಡದ ಶಿಥಿಲಗೊಂಡ ಭಾಗದ ದುರಸ್ತಿ ಕಾಮಗಾರಿ ಆರಂಭವಾಗಲಿದೆ. ಪ್ರತಿ ಹಂತದಲ್ಲಿ ಪಾರಂಪರಿಕ ತಜ್ಞರ ಸಲಹೆ ಪಡೆಯಲಾಗುವುದು.
>
> -ಡಿ. ಸುರೇಂದ್ರ ಕುಮಾರ್, ವ್ಯವಸ್ಥಾಪಕರು, ಪುರಭವನ



ಪಾರಂಪರಿಕ ರಂಗಚಾರ್ಲು ಮೆಮೋರಿಯಲ್ ಹಾಲ್ (ಪುರಭವನ).

ತಜ್ಞರ ತಂಡದಿಂದ ಪರಿಶೀಲನೆ: ಪಾರಂಪರಿಕ ಪುರಭವನದ ಕಟ್ಟಡ ಬಲಭಾಗದ ಗೋಡೆ, ಮೇಲ್ಛಾವಣಿ ಶಿಥಿಲಾವಸ್ಥೆ ತಲುಪಿದ್ದು, ನೆಲಹಾಸು ಸೇರಿದಂತೆ ಕಟ್ಟಡದ ವಿವಿಧ ಭಾಗ ಗೆಜ್ಜಲು ಹುಳುಗಳಿಂದ ಹಾನಿಯಾಗಿತ್ತು. ಮೇಲ್ಛಾವಣಿ ಭಾಗ ಕುಸಿಯುವ ಹಂತ ತಲುಪಿತ್ತು. ಈ ಹಿನ್ನೆಲೆಯಲ್ಲಿ ಪಾರಂಪರಿಕ ತಜ್ಞ ಪ್ರೊ.ರಂಗರಾಜು ಹಾಗೂ ಇಂಜಿನಿಯರ್‌ಗಳಿದ್ದ ತಂಡದಿಂದ ಕಟ್ಟಡದ ವಸ್ತುಸ್ಥಿತಿ ಪರಿಶೀಲನೆ ನಡೆಸಲಾಗಿತ್ತು. ಪಾರಂಪರಿಕ ತಂಡ ಪುರಭವನದ ಕಟ್ಟಡವನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ವರದಿ ಸಲ್ಲಿಸಿದ ಬಳಿಕ ಮೈಸೂರು ಮಹಾನಗರ ಪಾಲಿಕೆ ಕಟ್ಟಡದ ದುರಸ್ತಿಗೆ 3 ಕೋಟಿ ರೂ. ಮೀಸಲಿಟ್ಟಿದೆ.

ನವೀಕರಣ ಮತ್ತು ದುರಸ್ತಿ: ಟೌನ್‌ಹಾಲ್‌ನ ಬಲಭಾಗದ ದುರಸ್ತಿ, ಒಳಾಂಗಣ ನವೀಕರಣ, ಹೊಸ ಸೌಂಡ್ ಮತ್ತು ಲೈಟಿಂಗ್ ವ್ಯವಸ್ಥೆ ಅಳವಡಿಕೆ, ಮರದಿಂದ ಮಾಡಿರುವ ನೆಲಹಾಸು ತೆರವು ಮಾಡಿ, ಹೊಸದಾಗಿ ನೆಲಹಾಸು ನಿರ್ಮಾಣ, ಮೇಲ್ಛಾವಣಿಗೆ ಬಳಸಿರುವ ಟೀಕ್ ಮರದ ದಿಮ್ಮಿಯನ್ನು ಗೆಜ್ಜಲು ಹುಳು ತಿಂದಿರುವುದರಿಂದ ಇದೀಗ ಅದೆಲ್ಲವನ್ನು ತೆರವು ಮಾಡಿ, ಕಬ್ಬಿಣ ಅಳವಡಿಸಿ ಮೇಲ್ಛಾವಣಿ ನಿರ್ಮಿಸಲಾಗುತ್ತದೆ. ಬಳಿಕ ಕಟ್ಟಡಕ್ಕೆ ಹೊಸದಾಗಿ ಬಣ್ಣ ಬಳಿಯಲು ಟೆಂಡರ್ ನೀಡಲಾಗಿದೆ.

4 ಲಕ್ಷ ರೂ.ನಲ್ಲಿ ಶೌಚಾಲಯ ನವೀಕರಣ: ಇಲ್ಲಿರುವ ಶೌಚಾಲಯದ ನವೀಕರಣಕ್ಕೆ ಪ್ರತ್ಯೇಕ ನಾಲ್ಕು ಲಕ್ಷ ರೂ. ಮೀಸಲಿಡಲಾಗಿದೆ. ಶೌಚಾಲಯದ ಕಾಮಗಾರಿಯೂ ಪುರಭವನದ ಕಟ್ಟಡದ ದುರಸ್ತಿ ಮತ್ತು ನವೀಕರಣ ಕಾಮಗಾರಿಯ ಜೊತೆಯಲ್ಲಿಯೇ ನಡೆಯುತ್ತದೆ.

ರಾಜರ ಕಾಲದಲ್ಲಿ ನಿರ್ಮಾಣವಾದ ಪುರಭವನ: ಮೈಸೂರಿನ ಹೃದಯ ಭಾಗದಲ್ಲಿರುವ ಪುರಭವನವನ್ನು 1884ರಲ್ಲಿ 10ನೇ ಚಾಮರಾಜ ಒಡೆಯರ್ ಅವರು ನಿರ್ಮಿಸಿದ್ದಾರೆ. ಮೈಸೂರು ಸಂಸ್ಥಾನದ ಮೊದಲ ದಿವಾನರಾಗಿದ್ದ ಸರ್ ಸಿ.ವಿ. ರಂಗಾಚಾರ್ಲು ಅವರ ಸ್ಮರಣಾರ್ಥ ನಿರ್ಮಿಸಲಾದ ಈ ಪುರಭವನಕ್ಕೆ ಇದೀಗ 142 ವರ್ಷ ಪೂರ್ಣಗೊಂಡಿದೆ. ಕಾಲೋನಿಯಲ್ ಶೈಲಿಯಲ್ಲಿ ಟೌನ್ ಹಾಲ್ ಕಟ್ಟಡ ನಿರ್ಮಾಣವಾಗಿದ್ದು, ಸಂಗೀತ, ಕಲೆ ಹಾಗೂ ಸಾಂಸ್ಕೃತಿಕ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳ ಪ್ರಮುಖ ಕೇಂದ್ರವಾಗಿತ್ತು ಆದರೆ ಕೆಲ ವರ್ಷಗಳಿಂದ ಕಟ್ಟಡ ಶಿಥಿಲಾವಸ್ಥೆ ತಲುಪಿದ್ದರಿಂದ ಯಾವುದೇ ದೊಡ್ಡಮಟ್ಟದ ಕಾರ್ಯಕ್ರಮ ನಡೆಯದೆ ಪುರಭವನ ನಿರ್ಲಕ್ಷ್ಯಕ್ಕೊಳಗಾಗಿತ್ತು. ■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ರೋಗಿ : ನರ್ಸ್ ನಾನು ನಿನ್ನನ್ನು ಪ್ರೀತಿಸುತ್ತಿದ್ದೇನೆ.
ನರ್ಸ್ : ಧಮ್ ಇದ್ರೆ ಇಂಗ್ಲೀಷ್‌ನಲ್ಲಿ ಹೇಳು
ರೋಗಿ : ಐ ಲವ್ ಯೂ ಸಿಸ್ಟರ್
ನರ್ಸ್ : ಗುಡ್... ಐ ಲವ್ ಯೂ ಟೂ ಬ್ರದರ್

ಮೈಸೂರು ಮಿತ್ರ
ಬುಧವಾರ, ಮೇ 20, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕಡಿಮೆ ತಿಳುವಳಿಕೆಯುಳ್ಳವರೇ ಜೀವನವನ್ನು ಸಂಪೂರ್ಣವಾಗಿ ಆನಂದಿಸುತ್ತಾರೆ. ಜಾಸ್ತಿ ತಿಳುವಳಿಕೆಯುಳ್ಳವರು ಹೆಚ್ಚಾಗಿ ಗೊಂದಲದಲ್ಲೇ ಇರುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಇತರರ ಕಣ್ಣಿನ ಕಸ ಕಾಣುತ್ತೆ, ಆದರೆ, ತನ್ನ ಕಣ್ಣಿನ ಕಸ ಕಾಣಲ್ಲ

ನಿಮ್ಮ ಪತ್ರಗಳು

ರಾಜಕೀಯ ಅಜಾತಶತ್ರು, ಜಾತ್ಯತೀತ ಜನನಾಯಕ ಜಿ. ಟಿ. ದೇವೇಗೌಡ

ಮಾನ್ಯರೆ,

ಮೈಸೂರು ಜಿಲ್ಲೆಯ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ. ಟಿ. ದೇವೇಗೌಡರು ಜೆಡಿಎಸ್ ಅಸಲಿ ನಾಯಕರು. ಮೈಸೂರು ಭಾಗದಲ್ಲಿ ಇಂದು ಜಾತ್ಯತೀತ ಜನತಾದಳ (JDS) ಉಸಿರಾಡುತ್ತಿರುವುದೇ ಜಿ.ಟಿ. ದೇವೇಗೌಡರಿಂದ ಎಂಬುದು ಪಕ್ಷದ ಬಹುತೇಕ ನಾಯಕರು, ಕಾರ್ಯಕರ್ತರು, ಮತದಾರರ ಅಭಿಪ್ರಾಯವೂ ಇದೇ ಆಗಿದೆ. ರಾಜಕೀಯ ಶ್ರದ್ಧೆ, ಶಕ್ತಿ, ಸಾಮರ್ಥ್ಯ ಮತ್ತು ತಮ್ಮದೇ ವರ್ಚಸ್ಸಿನಿಂದ ಮೇಲೆ ಬಂದವರು ಜಿ.ಟಿ. ದೇವೇಗೌಡರು. ಮೂಲತಃ ಕೃಷಿಕರಾದ ಅವರು ರಾಜ್ಯದಲ್ಲಿ ಜಾತ್ಯಾತೀತ ಜನತಾದಳ (JDS) ಕ್ಕಾಗಿ ದುಡಿದಿದ್ದಾರೆ. ಇವರು ಮೈಸೂರು ಭಾಗದಲ್ಲಿ JDS ಪಕ್ಷಕ್ಕೆ ಸಾವಯವ ಗೊಬ್ಬರ ಹಾಕುವ ಮೂಲಕ ಅದರ ಫಲವತ್ತತೆ ಮತ್ತು ಪೋಷಕಾಂಶ ವೃದ್ಧಿಸಲು 4 ದಶಕಗಳ ಕಾಲ ಹಗಲಿರುಳು ಶ್ರಮಿಸಿದ್ದಾರೆ ಮತ್ತು ಪಕ್ಷ ಸಂಘಟಿಸಿದ್ದಾರೆ. ಮುಂದುವರೆದು, 2018ರ ವಿಧಾನ ಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ರಾಜ್ಯದ ಪ್ರಬಲ ಮುಖ್ಯಮಂತ್ರಿ ಎಂದೇ ಪ್ರಖ್ಯಾತಿ ಗಳಿಸಿದ್ದ ಸಿದ್ದರಾಮಯ್ಯ ಅವರನ್ನೇ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದಲ್ಲಿ 36 ಸಾವಿರ ಮತಗಳ ಅಂತರದಲ್ಲಿ ಸೋಲಿಸಿ, JDS ಪಕ್ಷಕ್ಕೆ ಬಲ ಮತ್ತು ಘನತೆ ತಂದು ಕೊಟ್ಟವರೇ ಅಸಲಿ ಜಾತ್ಯಾತೀತ ಜನ ನಾಯಕ ಈ ಜಿ.ಟಿ. ದೇವೇಗೌಡ.

1970ರ ದಶಕದಲ್ಲಿ ಕೃಷಿ ಪ್ರಾಥಮಿಕ ಸಹಕಾರ ಸಂಘದ ಕಾರ್ಯದರ್ಶಿಯಾಗಿ ರಾಜಕೀಯ ಜೀವನ ಆರಂಭಿಸಿದರು. ಮುಂದೆ, ಶಾಸಕರಾಗಿ, ಸಚಿವರಾಗಿ ಸೇವೆ ಮಾಡಿರುವ ಜಿ.ಟಿ. ದೇವೇಗೌಡರು ಎಲ್ಲಾ ಪಕ್ಷದ ನಾಯಕರು ಮತ್ತು ಕಾರ್ಯಕರ್ತರೊಡನೆ ಉತ್ತಮ ಸಂಬಂಧ ಹೊಂದಿದ್ದಾರೆ. ಯಾವುದೇ, ಪಕ್ಷದವರೊಡನೆ ಅಂತರ ಕಾಯ್ದುಕೊಳ್ಳದೆ ಆತ್ಮೀಯ ರಾಜಕಾರಣಕ್ಕೆ ಒತ್ತು ನೀಡುವ ಸ್ವಭಾವ ಅವರದು ಎಂದು ಎಲ್ಲರಿಗೂ ತಿಳಿದೇ ಇದೆ. ಅಂತಹ ನೈಜ ರಾಜಕೀಯ ನಾಯಕ, ನಿಜ ರೈತನನ್ನೇ ಹೊರಗಿಟ್ಟು ಜಾತ್ಯಾತೀತ ಜನತಾದಳ ಪಕ್ಷದ ಮುಖಂಡರು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಜನರೊಂದಿಗೆ ಜನತಾದಳ ಸಮಾವೇಶ ನಡೆಸಿದ್ದಾರೆ. ಇದು JDS ಪಕ್ಷದ ವರಿಷ್ಠರು ಮತ್ತು ನಾಯಕರು, ಶಾಸಕ ಜಿ.ಟಿ. ದೇವೇಗೌಡರಿಗೆ ಮಾಡಿದ ಅಪಮಾನ ಮಾತ್ರವಲ್ಲ ಇಡೀ ಕ್ಷೇತ್ರದ ಮತದಾರರಿಗೆ ಮಾಡಿದ ಅವಮಾನ. ಪಕ್ಷದ ಇಂತಹ ನಡೆಯನ್ನು ಮತದಾರರು ಅನುಮಾನದಿಂದಲೇ ನೋಡಬೇಕಿದೆ.

–ಡಾ. ದಿಲೀಪ್ ನರಸಯ್ಯ ಎಂ., ಜಯದೇವನಗರ, ಮೈಸೂರು.

ಯಾವುದೇ ಪರೀಕ್ಷೆಯಾದರೂ ಗುಣಮಟ್ಟ ಕಾಯ್ದುಕೊಳ್ಳಲಿ

ಮಾನ್ಯರೆ,

ನೀಟ್ ಪ್ರಶ್ನೆ ಪತ್ರಿಕೆ ನಾಲ್ಕು ಮಂದಿ ವಿದ್ಯಾರ್ಥಿಗಳನ್ನು ಬಲಿ ತೆಗೆದು ಕೊಂಡಿದೆ. ಇಂದು ಪರೀಕ್ಷೆ ತನ್ನ ಗುಣಮಟ್ಟವನ್ನು ಕಳೆದುಕೊಳ್ಳುತ್ತಿದೆ. ಬುದ್ಧಿವಂತ, ಶ್ರದ್ಧಾವಂತ, ಪ್ರಾಮಾಣಿಕ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಪ್ರಶ್ನೆ ಪತ್ರಿಕೆಯನ್ನು ಪ್ರಭಾವಿಗಳು ಹಣಕ್ಕಾಗಿ ಸೋರಿಕೆ ಮಾಡುತ್ತಿದ್ದಾರೆ. ಕೆಲ ಕೋಚಿಂಗ್ ಸೆಂಟರ್‌ಗಳು ಇದಕ್ಕೆ ಕೈಜೋಡಿಸಿದ್ದಾರೆ ಎಂದರೆ ಮನಸ್ಸಿಗೆ ಬೇಸರವಾಗುತ್ತದೆ. ಪೋಷಕರು ಮನೆಯ ಕಷ್ಟವನ್ನು ಲೆಕ್ಕಿಸದೆ ಕೇಳಿದಷ್ಟು ಹಣವನ್ನು ನೀಡಿ ಒಳ್ಳೆಯ ಕಾಲೇಜು, ಟ್ಯೂಷನ್ ಸೆಂಟರ್‌ಗಳಿಗೆ ಸೇರಿಸಿ, ಮಕ್ಕಳನ್ನು ಉನ್ನತ ಹುದ್ದೆಯಲ್ಲಿ ನೋಡಲು ಬಯಸುತ್ತಾರೆ. ಆದರೆ ಈ ತರಹ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿ, ಹಣಕ್ಕಾಗಿ ಮಾರಾಟ ಮಾಡಿದರೆ ಮುಂದೆ ಬರುವ ವೈದ್ಯರನ್ನು ನಂಬುವುದಾದರೂ ಹೇಗೆ? ಕಷ್ಟಪಟ್ಟು ಓದಿದ ಮಕ್ಕಳಿಗೆ ನ್ಯಾಯ ಎಲ್ಲಿದೆ. ಇನ್ನಾದರೂ ಪರೀಕ್ಷೆಯಲ್ಲಿ ಗೌಪ್ಯತೆಯನ್ನು ಕಾಪಾಡಿಕೊಂಡು ಕಟ್ಟುನಿಟ್ಟಾಗಿ ಪರೀಕ್ಷೆಯನ್ನು ಮಾಡಬೇಕಾಗಿದೆ. ಇದರಿಂದ ಪೋಷಕರು ಹಾಗೂ ವಿದ್ಯಾರ್ಥಿಗಳು ನೆಮ್ಮದಿಯಿಂದ ಇರಲು ಸಾಧ್ಯವಾಗುತ್ತದೆ.

–ಎಂ.ಎಸ್.ಉಷಾಪ್ರಕಾಶ್, ಲೇಖಕಿ, ಮೈಸೂರು

ಚಿನ್ನತಂಬಿ!

ಮಾನ್ಯರೆ,

ವಿವಿಧ ಗೋಲ್ಡ್ (ಚಿನ್ನ) ಕಂಪನಿಗಳ ಹೆಸರಿನಲ್ಲಿ ಜನರನ್ನು ವಂಚಿಸುತ್ತಿದ್ದ ತಂಬಿಯನ್ನು ಮೈಸೂರಿನ ಕುವೆಂಪುನಗರ ಪೊಲೀಸರು ಬಂಧಿಸಿ ಕಂಬಿ ಎಣಿಸುವಂತೆ ಮಾಡಿದ್ದಾರೆ. ಆರೋಪಿಯ ಹೆಸರೇನು ಗೊತ್ತೇ? ಚಿನ್ನತಂಬಿ

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು.

ಜನಸಂಖ್ಯೆ ಹೆಚ್ಚಳಕ್ಕೆ ಆಂಧ್ರದ ಪ್ರೋತ್ಸಾಹಧನ ಭವಿಷ್ಯಕ್ಕೆ ಮಾರಕ

ಮಾನ್ಯರೆ,

ಜನಸಂಖ್ಯೆ ಕುಸಿತದ ಆತಂಕ ಎದುರಿಸುತ್ತಿರುವ ಆಂಧ್ರಪ್ರದೇಶ ಇದೀಗ ಜನನ ಪ್ರಮಾಣ ಹೆಚ್ಚಿಸಲು ನಗದು ಪ್ರೋತ್ಸಾಹದ ದಾರಿ ಹಿಡಿದಿದ್ದು, ರಾಜ್ಯದಲ್ಲಿ ಮೂರನೇ ಮಗುವಿಗೆ 30,000 ಹಾಗೂ ನಾಲ್ಕನೇ ಮಗುವಿಗೆ 40,000 ರೂ. ಪ್ರೋತ್ಸಾಹಧನ ನೀಡಲಾಗುವುದು ಎಂದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವರು ಘೋಷಿಸಿರುವುದು ಒಂದು ವಿಪರ್ಯಾಸವೇ ಸರಿ.

ಸರ್ಕಾರ ಕೊಡುವ ಮೂವತ್ತು, ನಲವತ್ತು ಸಾವಿರದ ಆಸೆಗೆ ಮಕ್ಕಳನ್ನು ಹೆರುವವರು ಬಡವರೇ ಹೊರತು ಶ್ರೀಮಂತರಲ್ಲ. ಸರ್ಕಾರ ನೀಡಿದ ದುಡ್ಡು ಖಾಲಿಯಾದ ಮೇಲೆ ಈ ಮಕ್ಕಳ ಲಾಲನೆ ಪಾಲನೆ ಮಾಡುವವರು ಯಾರು? ಅವರನ್ನು ಸಾಕಲಿಕ್ಕೆ ಹಾಗೂ ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಹಣ ಬೇಡವಾ? ಮೊದಲೇ ಬಡತನದ ಬೇಗೆಯಿಂದ ಬಳಲುತ್ತಿರುವ ಕುಟುಂಬಕ್ಕೆ ಹಾಗೂ ಮಕ್ಕಳ ಭವಿಷ್ಯಕ್ಕೆ ಆಸರೆಯಾಗುವವರು ಯಾರು?

ಮಕ್ಕಳನ್ನು ಹೆತ್ತು ಜನಸಂಖ್ಯೆ ಹೆಚ್ಚು ಮಾಡಿದರಷ್ಟೇ ಸಾಲದು. ಪೋಷಕರಿಗೆ ಹೀಗಿರುವ ಒಂದೆರಡು ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ, ಒಳ್ಳೆಯ ಸಂಸ್ಕಾರವನ್ನು ಕಲಿಸಿ, ದೇಶಪ್ರೇಮ ಬೆಳೆಸಿದರೆ ಅದೇ ನಾವು ನಮ್ಮ ದೇಶಕ್ಕೆ ಮಾಡುವ ನಿಜವಾದ ದೇಶಸೇವೆ ಅಲ್ಲವೇ? ಇಷ್ಟಕ್ಕೂ ಮುಖ್ಯಮಂತ್ರಿ ಚಂದ್ರಬಾಬುನಾಯ್ಡುರವರ ಮಾತನ್ನು ಆಂಧ್ರದ ಜನತೆ ಗಂಭೀರವಾಗಿ ತೆಗೆದುಕೊಳ್ಳದಿದ್ದರೆ ಅಷ್ಟೇ ಸಾಕು!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಅಮೂಲ್ಯ ನೆನಪುಗಳ ಪ್ರೇಂ....

–ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ




ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1936ರ ಜೂ.27ರಿಂದ ಸೆ.30ರವರೆಗೆ ಯುರೋಪ್ ಪ್ರವಾಸ ಕೈಗೊಂಡಿದ್ದರು. ಈ ಛಾಯಾಚಿತ್ರದಲ್ಲಿ ಡಬಲ್–ಬ್ರೆಸ್ಟೆಡ್ ಲಾಂಗ್ ಟ್ರೆಂಚ್ ಕೋಟ್ ಹಾಗೂ ಪೋಲ್ಕಾ ಚುಕ್ಕೆಗಳ ಬಟ್ಟೆಯ ಪೇಟವನ್ನು ಮಹಾರಾಜರು ಧರಿಸಿ ಸೊಗಸಾಗಿ ಕಾಣುತ್ತಿರುವುದು ವಿಶೇಷ. ಚಿತ್ರದಲ್ಲಿ ಅವರು ರೈಲಿನಿಂದ ಇಳಿಯುತ್ತಿದ್ದು, ಕೈಗವಸು ಧರಿಸಿರುವ ಬಲಗೈಯಲ್ಲಿ ವಾಕಿಂಗ್ ಸ್ಟಿಕ್ ಮತ್ತು ಕೊಡೆಯನ್ನು ಹಿಡಿದಿದ್ದಾರೆ. ಮಹಾರಾಜರ ಬಲಭಾಗದಲ್ಲಿ ಸ್ವಲ್ಪ ಹಿಂದೆ ಕೊಡೆ ಹಿಡಿದುಕೊಂಡು, ಫ್ಯಾಶನ್ ಫೆಡೋರಾ ಟೋಪಿ ಧರಿಸಿರುವ ಸದೇಗ್ ಝಡ್. ಶಾ ಅವರನ್ನು ಕಾಣಬಹುದಾಗಿದ್ದು, ಆಗ ಅವರು ಮಹಾರಾಜರ ಆಪ್ತ ಸಿಬ್ಬಂದಿಯಾಗಿದ್ದರು. ಎಂ.ಶಾಮ ರಾವ್ ಅವರ 'ಆಧುನಿಕ ಮೈಸೂರಿನ ಅನುಬಂಧ'ದಿಂದ ಆಯ್ದ ಭಾಗ ಇದಾಗಿದ್ದು, 1936ರಲ್ಲಿ ಇದು ಪ್ರಕಟವಾಗಿತ್ತು.

ಮಹಾರಾಜರು, ಯುವರಾಜರು, ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್ ಮತ್ತು ಅವರ ಜೊತೆಗಿದ್ದ ತಂಡವು ಪಿ ಅಂಡ್ ಓ ಸ್ಟೀಮರ್ 'ರಣಪುರ'ದಲ್ಲಿ ಪ್ರಯಾಣ ಬೆಳೆಸಿತು ಹಾಗೂ 27.06.1936ರಂದು ಬಾಂಬೆಯಿಂದ ಹೊರಟಿತು. ಜುಲೈ 16ರಂದು, ಪ್ಯಾರಿಸ್‌ನಲ್ಲಿ ನಾಲ್ಕು ದಿನಗಳ ಕಾಲ ತಂಗಿ ನಂತರ, ಲಂಡನ್‌ನ ವಿಕ್ಟೋರಿಯಾ ನಿಲ್ದಾಣದಲ್ಲಿ ಅವರು ಇಳಿದಾಗ, ಮೈಸೂರಿನಿಂದಲೂ ಸೇರಿದಂತೆ ದಕ್ಷಿಣ ಭಾರತದ ಸುಮಾರು 150 ವಿದ್ಯಾರ್ಥಿಗಳು ಅವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಮಹಾರಾಜರ ವಾಸ್ತವ್ಯದ ಸಮಯದಲ್ಲಿ ಭಾರತದಲ್ಲಿ ಅವರಿಗೆ ಪರಿಚಿತರಾಗಿದ್ದ ಸ್ನೇಹಿತರು ಹಾಗೂ ಇಂಗ್ಲೆಂಡ್‌ನ ಅನೇಕ ಗಣ್ಯರು ಅವರನ್ನು ಭೇಟಿ ಮಾಡಿದ್ದರು. ಜುಲೈ 22ರಂದು ಮಹಾರಾಜರು ಬಂಕಿಂಗ್ ಹ್ಯಾಮ್ ಅರಮನೆಯಲ್ಲಿ ದೊರೆ ಕಿಂಗ್ ಎಡ್ವರ್ಡ್ VIII ಅವರೊಂದಿಗೆ ಮತ್ತು ನಂತರ ಡೊವೆಜರ್ ರಾಣಿ ಮೇರಿ ಅವರೊಂದಿಗೆ ಸಂದರ್ಶನ ನಡೆಸಿದರು. ಜುಲೈ 29ರಂದು ಮಹಾರಾಜರು ಸ್ವಾಗತ ಸಮಾರಂಭ ಏರ್ಪಡಿಸಿದ್ದರು. ಅದರಲ್ಲಿ ಲಂಡನ್‌ನ ಹಲವು ಗಣ್ಯರು ಪಾಲ್ಗೊಂಡಿದ್ದರು.

ಆಗಸ್ಟ್ 3ರ ಉಪಾಕರ್ಮ ದಿನದಂದು ಅವರು ಮೇಡನ್ ಹೆಡ್‌ನಲ್ಲಿರುವ ಥೇಮ್ಸ್ ನದಿ ದಡದಲ್ಲಿ ಸಮಾರಂಭ ನಡೆಸಿದರು. ಮಹಾರಾಜರು, ಯುವರಾಜರು ಹಾಗೂ ಅವರ ತಂಡವು ಸೆಪ್ಟೆಂಬರ್ 19ರಂದು 'ಸ್ಟ್ರಾತ್‌ಮೋರ್' ಹಡಗನ್ನು ಹತ್ತಿ ಅದೇ 30ರಂದು ಬಾಂಬೆ ತಲುಪಿತು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ದ್ವಾ ಸುಪರ್ಣಾ ಸಯುಜಾ ಸಖಾಯಾ

ಮುಂಡಕೋಪನಿಷತ್ತು ಪ್ರಾಚೀನ ದಶೋಪನಿಷತ್ತುಗಳಲ್ಲಿ ಒಂದು. ಇದು ಅಥರ್ವವೇದಕ್ಕೆ ಸೇರಿರುವುದರಿಂದ ಆಥರ್ವಣೋಪನಿಷತ್ತು ಎಂದೂ ಇದನ್ನು ಕರೆಯುತ್ತಾರೆ. ಬ್ರಹ್ಮನು ದೇವತೆಗಳಲ್ಲಿ ಮೊದಲನೆಯವನು, ಅವನ ಜ್ಯೇಷ್ಠಪುತ್ರ (ಹಿರಿಯ ಮಗ) ಅಥರ್ವ. ಬ್ರಹ್ಮನೇ ಅಥರ್ವನಿಗೆ ಇತರ ಎಲ್ಲ ವಿದ್ಯೆಗಳಿಗೆ ಆಶ್ರಯವಾದ ಬ್ರಹ್ಮವಿದ್ಯೆಯನ್ನು ಬೋಧಿಸಿದನು. ಅಥರ್ವನು ಅಂಗಿರನಿಗೂ, ಅಂಗಿರನು ಭಾರದ್ವಾಜನಿಗೂ, ಭಾರದ್ವಾಜನು ಅಂಗಿರಸ್ಸಿಗೂ ಈ ವಿದ್ಯೆಯನ್ನು ಕಲಿಸಿದರು. ಶೌನಕನು ವಿಧಿವತ್ತಾಗಿ ಅಂಗಿರಸ್ ಎಂಬ ಈ ಗುರುವಿನಿಂದ ಬ್ರಹ್ಮವಿದ್ಯೆಯನ್ನು ಪಡೆದನು. ಅದೇ ಮುಂಡಕೋಪನಿಷತ್ತಿನಲ್ಲಿ ನಮಗೆಲ್ಲ ಲಭ್ಯವಾಗಿರುವುದು.

ಮನುಷ್ಯನು ಪರಾ ಅಪರಾ ಎಂಬ ಎರಡು ವಿದ್ಯೆಗಳನ್ನೂ ಕಲಿಯಬೇಕು. ಅಪರಾ ಎಂದರೆ ವೇದ, ವೇದಾಂಗ ಇತ್ಯಾದಿ ಲೋಕೋಪಯೋಗಿಯಾದ ಸಮಸ್ತ ವಿದ್ಯೆಗಳು. ಪರಾ ವಿದ್ಯೆ ಎಂದರೆ ಅಕ್ಷರವಾದ (ಅಕ್ಷಯವಾದ, ಶಾಶ್ವತವಾದ) ಬ್ರಹ್ಮ ವಸ್ತುವನ್ನು ತಿಳಿಸುವ ವಿದ್ಯೆ. ಇಂದ್ರಿಯಗಳಿಗೆ ಅಗೋಚರವಾದ, ನಿತ್ಯವೂ ಸರ್ವವ್ಯಾಪಿಯೂ ಆಗಿರುವ, ಸಮಸ್ತ ಜಗತ್ತಿಗೆ ಕಾರಣವಾದುದನ್ನು ಇಲ್ಲಿ ಬ್ರಹ್ಮವೆಂದು ಕರೆದಿದ್ದಾರೆ. ಬ್ರಹ್ಮವು ಜಗತ್ತನ್ನು ಹೇಗೆ ಸೃಷ್ಟಿಸಿತು? ಎಂಬ ಪ್ರಶ್ನೆಗೆ ಉತ್ತರವಾಗಿ ಉಪನಿಷತ್ತು ಊರ್ಣ ನಾಭಿ (ಜೇಡರ ಹುಳು), ಭೂಮಿ ಮತ್ತು ಮನುಷ್ಯನ ದೃಷ್ಟಾಂತವನ್ನು ಕೊಟ್ಟಿದೆ. ಜೇಡರ ಹುಳು ತನ್ನ ಶರೀರದಿಂದಲೇ ನೂಲನ್ನು ಉತ್ಪಾದಿಸಿ ಬಲೆಯನ್ನು ನೇಯುವಂತೆ, ಭೂಮಿಯು ತಾನು ಇದ್ದಂತೆಯೇ ನಾನಾ ಮರಗಿಡಗಳಿಗೆ ಜನ್ಮವನ್ನು ನೀಡುವಂತೆ, ಮನುಷ್ಯನಲ್ಲಿ ಗಡ್ಡ ಮೀಸೆಗಳು, ಕೇಶಗಳು ಬೆಳೆಯುವಂತೆ ಅಕ್ಷರ ಬ್ರಹ್ಮನಿಂದಲೇ ವಿಶ್ವದ ಉತ್ಪತ್ತಿ ಎಂದು ಮುಂಡಕೋಪನಿಷತ್ತು ತಿಳಿಸುತ್ತದೆ.

ವೇದಗಳು ಬೋಧಿಸುವ ಯಜ್ಞಗಳಿಗೆ ನಿರ್ದಿಷ್ಟ ಫಲಗಳನ್ನು ನೀಡುವ ಶಕ್ತಿಯಿದ್ದರೂ, ಆ ಫಲಗಳು ಅಶಾಶ್ವತವಾದುದರಿಂದ ಜ್ಞಾನಿಗೆ ಆ ಯಜ್ಞಗಳು ಅಪೇಕ್ಷಿತವಲ್ಲ ಎಂದು ಮುಂಡಕೋಪ ನಿಷತ್ತು ತಿಳಿಸಿದೆ. ಯಜ್ಞಗಳು ತಂದುಕೊಡುವ ಅನಿತ್ಯ ಫಲಗಳೇ ಶ್ರೇಯಸ್ಸೆಂದು ಭಾವಿಸುವ ಜನರನ್ನು ಈ ಉಪನಿಷತ್ತು ಮೂಢರೆಂದು ಕರೆದಿದೆ.

ಪ್ಲವಾ ಹ್ಯೇತೇ ಅದೃಢಾ ಯಜ್ಞರೂಪಾ
ಅಷ್ಟಾದಶೋಕ್ತಮವರಂ ಯೇಷು ಕರ್ಮ।
ಏತಚ್ಛ್ರೇಯೋ ಯೇಽಭಿನಂದಂತಿ ಮೂಢಾ
ಜರಾಮೃತ್ಯುಂ ತೇ ಪುನರೇವಾಪಿಯಂತಿ ॥

ಯಜ್ಞರೂಪವಾಗಿರುವ ಕ್ರಿಯಾಕಲಾಪಗಳು ದೃಢವಲ್ಲದ ದೋಣಿಗಳು. ಅವುಗಳಲ್ಲಿ ಹದಿನೆಂಟು ವಿಧವಾದ ಕರ್ಮಗಳನ್ನು ಅವುಗಳಲ್ಲಿ ಹೇಳಲಾಗಿದೆ. ಈ ಯಜ್ಞಗಳನ್ನೇ ಯಾರು ಶ್ರೇಯಸ್ಸೆಂದು ತಿಳಿದುಕೊಂಡು ಹೊಗಳುವರೋ ಅವರು ಮತ್ತೆ ಮತ್ತೆ ಮುಪ್ಪಿಗೂ ಸಾವಿಗೂ ತುತ್ತಾಗುವರು ಎಂದು ಈ ಮಂತ್ರದ ಅಭಿಪ್ರಾಯ. ಇದೇ ರೀತಿಯಾಗಿ–

ಇಷ್ಟಾಪೂರ್ತಂ ಮನ್ಯಮಾನಾ ವರಿಷ್ಠಂ
ನಾನ್ಯತ್ ಶ್ರೇಯೋ ವೇದಯಂತೇ ಪ್ರಮೂಢಾಃ।
ನಾಕಸ್ಯ ಪೃಷ್ಠೇ ತೇ ಸುಕೃತೇಽನುಭೂತ್ವಾ
ಇಮಂ ಲೋಕಂ ಹೀನತರಂ ವಾ ವಿಶಂತಿ॥

ಯಜ್ಞಗಳನ್ನೂ, ಸಮಾಜಸೇವಾದಿ ಕಾರ್ಯಗಳನ್ನೂ ಶ್ರೇಷ್ಠವೆಂದು ಭಾವಿಸಿಕೊಂಡಿರುವವರು ಶ್ರೇಯಸ್ಸಿಗೆ ಕಾರಣವಾದ ಇತರ ವಿಷಯಗಳನ್ನು ತಿಳಿದುಕೊಳ್ಳುವುದಿಲ್ಲ. ಅವರು ಸ್ವರ್ಗದಲ್ಲಿ ಸುಖವನ್ನು ಸ್ವಲ್ಪಕಾಲ ಅನುಭವಿಸಿ ಆಮೇಲೆ ಈ ಭೂಲೋಕಕ್ಕೆ ಅಥವಾ ಹೀನಲೋಕಗಳಿಗೆ ಹೋಗುತ್ತಾರೆ.

ಹಾಗಿದ್ದರೆ ಯಜ್ಞಗಳನ್ನೂ, ಸಮಾಜಸೇವೆಯನ್ನೂ ಮಾಡುವುದು ಪ್ರಯೋಜನ ಶೂನ್ಯ ಎಂಬ ಅಭಿಪ್ರಾಯವೇ? ಅಲ್ಲ. ಇವುಗಳನ್ನು ಮಾಡುವಾಗ ನಾಹಂ ಕರ್ತಾ, ಹರಿಃ ಕರ್ತಾ, ನಾಹಂ ಭೋಕ್ತಾ ಹರಿರ್ಭೋಕ್ತಾ (ಮಾಡುತ್ತಿರುವವನು ನಾನಲ್ಲ, ಹರಿಯೇ ಎಲ್ಲವನ್ನು ಮಾಡುತ್ತಿದ್ದಾನೆ, ಇದರ ಫಲವೆಲ್ಲ ನನ್ನದಲ್ಲ, ಹರಿಯದೇ ಎಲ್ಲವೂ ಎಂಬ ಭಾವನೆ ಇರಬೇಕು. ಆಗ ಇವೂ ಶ್ರೇಯಸ್ಸಿನ ಕಡೆಗೆ ಮಾನವನನ್ನು ಒಯ್ಯುತ್ತವೆ.

ಹಾಗಾದರೆ ಪರಮ ಶ್ರೇಯಸ್ಸೆಂಬ ಮೋಕ್ಷಕ್ಕೆ ಮಾರ್ಗವೇನು? ಈ ಪ್ರಶ್ನೆಗೆ ಮುಂಡಕೋಪನಿಷತ್ತು ಕೊಡುವ ಉತ್ತರ–

ತಪಃಶ್ರದ್ಧೇ ಯೇ ಹ್ಯುಪವಸಂತ್ಯರಣ್ಯೇ
ಶಾಂತಾ ವಿದ್ವಾಂಸೋ ಭೈಕ್ಷ್ಯಚರ್ಯಾಂ ಚರಂತಃ।
ಸೂರ್ಯದ್ವಾರೇಣ ತೇ ವಿರಜಾಃ ಪ್ರಯಾಂತಿ
ಯತ್ರಾಮೃತಃ ಸ ಪುರುಷೋ ಹ್ಯವ್ಯಯಾತ್ಮಾ॥

ತಪಸ್ಸು–ಶ್ರದ್ಧೆಗಳಿಂದ ಆ ಗುರಿಯನ್ನು ತಲುಪಬೇಕು. ಅರಣ್ಯದಲ್ಲಿದ್ದು ಉಪವಾಸಾದಿಗಳನ್ನು ಮಾಡುವ, ಸದಾ ಶಾಂತರಾಗಿರುವ ವಿದ್ವಾಂಸರು ಭಿಕ್ಷಾಟನೆ ಮಾಡುತ್ತಾ ರಜೋಗುಣ ರಹಿತರಾಗಿ ಸೂರ್ಯದ್ವಾರದಿಂದ ಅವ್ಯಯರೂಪನಾದ ಆ ಪರಮಪುರುಷನು ಇರುವೆಡೆಗೆ ಪ್ರಯಾಣ ಮಾಡುತ್ತಾರೆ.

ಇಂತಹ ತಪಸ್ಸನ್ನು ಮಾಡಬೇಕಾದರೆ ಲೋಕದ ಮತ್ತು ಸ್ವರ್ಗದ ಸುಖಗಳ ಬಯಕೆಯನ್ನು ತ್ಯಜಿಸಿ ವೈರಾಗ್ಯವನ್ನು ಅವಲಂಬಿಸಿ ಗುರುವನ್ನು ಆಶ್ರಯಿಸಿ ಮಾರ್ಗದರ್ಶನವನ್ನು ಪಡೆದುಕೊಳ್ಳಬೇಕೆಂದು ಮುಂಡಕೋಪನಿಷತ್ತು ತಿಳಿಸುತ್ತದೆ.

ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ
ನಿರ್ವೇದಮಾಯಾನ್ನಾಸ್ತ್ಯಕೃತಃ ಕೃತೇನ।
ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್
ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್ ॥

ಗುರು ಶ್ರೋತ್ರಿಯನಾಗಿರಬೇಕು, ಬ್ರಹ್ಮನಿಷ್ಠನಾಗಿರಬೇಕು. ಅವನು ಧನ–ಕನಕ–ಕಾಮಿನೀನಿಷ್ಠನಾಗಿದ್ದರೆ ಬ್ರಹ್ಮನಿಷ್ಠನಾಗಿರುವುದು ಹೇಗೆ ಸಾಧ್ಯ? ಅಂತಹ ಗುರುವಿನ ಬಳಿಗೆ ಜಿಜ್ಞಾಸುವು ಸಮಿತ್ಪಾಣಿಯಾಗಿ ಹೋಗಬೇಕು. ಸಮಿತ್ತುಗಳನ್ನು ಕೈಯಲ್ಲಿ ಹಿಡಿದಿರುವುದು ವಿನಯದ ಲಕ್ಷಣ, ಗುರುಶುಶ್ರೂಷೆಯನ್ನು ಮಾಡುತ್ತೇನೆ ಎಂಬ ಭಾವನೆಯ ಸಂಕೇತ.

ಮುಂಡಕೋಪನಿಷತ್ತು ಬ್ರಹ್ಮಜ್ಞಾನಕ್ಕಾಗಿ ಮಾಡಬೇಕಾದ ಸಾಧನೆಯ ಮಾರ್ಗವನ್ನೂ ತಿಳಿಸುತ್ತದೆ. ಬಿಲ್ಲುಗಾರನು ಬಿಲ್ಲಿನಲ್ಲಿ ಬಾಣವನ್ನು ಹೂಡಿ ಗುರಿಯನ್ನು ಹೊಡೆಯುವ ದೃಷ್ಟಾಂತದಿಂದ ಸಾಧನೆಯನ್ನು ವಿವರಿಸುತ್ತದೆ.

ಪ್ರಣವೋ ಧನುಃ ಶರೋ ಹ್ಯಾತ್ಮಾ
ಬ್ರಹ್ಮ ತಲ್ಲಕ್ಷ್ಯಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ
ಶರವತ್ತನ್ಮಯೋ ಭವೇತ್ ॥

ಪ್ರಣವ ಎಂದರೆ ಓಂಕಾರ. ಓಂಕಾರವನ್ನೇ ಧನಸ್ಸಾಗಿ ಮಾಡಿಕೊಳ್ಳಬೇಕು. ಸಾಧಕನ ಆತ್ಮವೇ ಬಾಣವಾಗಬೇಕು. ಆ ಬಾಣ ಮುಟ್ಟಬೇಕಾದ ಗುರಿ ಬ್ರಹ್ಮವಸ್ತು. ಯಾವ ಪ್ರಮಾದವನ್ನೂ ಮಾಡದೆ ಗುರಿಯನ್ನು ಮುಟ್ಟಬೇಕು. ಅದಕ್ಕಾಗಿ ಸಾಧಕನು ಬಾಣದಂತೆ ತನ್ಮಯನಾಗಬೇಕು. ಯಾವ ರೀತಿಯಾಗಿ ಬಾಣವು ಬೇರೆ ಏನನ್ನೂ ಮುಟ್ಟದೆ ಒಂದೇ ಧ್ಯಾನದಿಂದ ಲಕ್ಷ್ಯವನ್ನು ಭೇದಿಸುವುದೋ ಹಾಗೆ ತಲ್ಲೀನತೆಯಿಂದ ಬ್ರಹ್ಮವನ್ನು ತಲುಪಬೇಕು.

ಈ ವಿಷಯವನ್ನು ಸ್ಪಷ್ಟಪಡಿಸಲು ಮುಂಡಕೋಪನಿಷತ್ತು ಒಂದು ಸುಂದರ ದೃಷ್ಟಾಂತವನ್ನು ನೀಡಿದೆ –

ದ್ವಾ ಸುಪರ್ಣಾ ಸಯುಜಾ ಸಖಾಯಾ
ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರನ್ಯಃಪಿಪ್ಪಲಂ ಸ್ವಾದ್ವತ್ತಿ
ಅನಶ್ನನ್ನನ್ಯೋ ಅಭಿಚಾಕಶೀತಿ॥

ಎರಡು ಹಕ್ಕಿಗಳು. ಯಾವಾಗಲೂ ಅವು ಒಟ್ಟಿಗೆ ಇವೆ. ಪರಸ್ಪರ ಸದೃಶವಾಗಿ ಇದ್ದು ಒಂದೇ ವೃಕ್ಷವನ್ನು ಆಶ್ರಯಿಸಿಕೊಂಡಿವೆ. ಅವುಗಳಲ್ಲೊಂದು ಆ ವೃಕ್ಷದ ಹಣ್ಣನ್ನು ಸಿಹಿಯಾಗಿದೆಯೆಂದು ತಿನ್ನುತ್ತಿದೆ. ಇನ್ನೊಂದು ಹಕ್ಕಿ ಏನನ್ನೂ ತಿನ್ನದೆ ಸುಮ್ಮನೆ ನಿರೀಕ್ಷಿಸುತ್ತಿದೆ.

ಇಲ್ಲಿ ಎರಡು ಹಕ್ಕಿಗಳು ಜೀವಾತ್ಮ ಮತ್ತು ಪರಮಾತ್ಮ. ಒಂದನ್ನು ಬಿಟ್ಟು ಇನ್ನೊಂದಿಲ್ಲ. ಎರಡೂ ಸ್ನೇಹದಿಂದಿವೆ. ಎರಡೂ ಒಂದೇ ವೃಕ್ಷವನ್ನು ಮರವನ್ನು ಆಶ್ರಯಿಸಿವೆ ಎಂದು ಒಗಟಿನಂತೆ ಉಪನಿಷತ್ತು ಹೇಳಿದೆ. ಮರ ಯಾವುದು? ಈ ಶರೀರವೇ ಮರವಿರಬಹುದೆ? ಶರೀರದಲ್ಲಿ ಆತ್ಮ ವಾಸಿಸುತ್ತಾನೆ ಎಂಬುದು ಸಿದ್ಧ, ಪ್ರಸಿದ್ಧ. ಭಗವಂತನು ಇಲ್ಲಿ ಇದ್ದಾನೆಯೆ? ಅಂತರ್ಯಾಮಿರೂಪದಿಂದ ಪರಮಾತ್ಮನೂ ಇದ್ದಾನೆ ಎಂಬುದು ಉಪನಿಷತ್ತಿನ ಅಭಿಪ್ರಾಯವಿರಬಹುದು. ಭಗವದ್ಗೀತೆಯಲ್ಲಿ –

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ॥

ಎಂದು ಹೇಳಿರುವುದರಿಂದ ಪರಮಾತ್ಮನೂ ಶರೀರದಲ್ಲಿ ಅಂತರ್ಯಾಮಿ ರೂಪದಲ್ಲಿರುವುದು ಸಿದ್ಧವಾಗುತ್ತದೆ. ದೇಹೋ ದೇವಾಲಯಃಪ್ರೋಕ್ತಃ ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಅಥವಾ ವೃಕ್ಷವೆಂದರೆ ಸಂಸಾರ, ವಿಶ್ವ ಎಂಬ ಶಾಶ್ವತ ವೃಕ್ಷ. ಇದರಲ್ಲಿ ಜೀವನೆಂಬ ಪಕ್ಷಿ ವಾಸಿಸುತ್ತಿರುವುದು ಸ್ಪಷ್ಟವೇ ಆಗಿದೆ. ಪರಮಾತ್ಮನು ವಿಶ್ವರೂಪನೇ ಆಗಿರುವುದೂ ಶಾಸ್ತ್ರ ಸಂಮತ. ವಿಶ್ವಂ ವಿಷ್ಣುರ್ವಷಟ್ಕಾರಃ ಎಂದೇ ವಿಷ್ಣು ಸಹಸ್ರನಾಮದ ಆರಂಭ. ಜೀವಾತ್ಮ–ಪರಮಾತ್ಮರಿಬ್ಬರೂ ಇಲ್ಲಿದ್ದರೂ ಅವರಲ್ಲಿ ಮಹತ್ತಾದ ಅಂತರವಿದೆ ಎಂಬುದನ್ನು ಉಪನಿಷತ್ತು ತಿಳಿಸುತ್ತಿದೆ. 'ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ'. ಒಂದು ಪಕ್ಷಿ ಜೀವಾತ್ಮ ಸಂಸಾರವೃಕ್ಷದ ಹಣ್ಣುಗಳನ್ನು ತಿನ್ನುತ್ತಿರುತ್ತದೆ, ಎಂದರೆ ಸುಖ, ದುಃಖಗಳನ್ನು ಭವಿಸುತ್ತಿರುತ್ತದೆ. ಆದರೆ ಇನ್ನೊಂದು ಪಕ್ಷಿ ಅಂತಹ ಅನುಭವಗಳಿಗೆ ದೂರವಾಗಿ, ಕೇವಲ ಸಾಕ್ಷಿಯಾಗಿ ನೋಡುತ್ತಿರುತ್ತದೆ.

ಜೀವಾತ್ಮನಿಗೆ ಪರಮಾತ್ಮನ ಅರಿವು ಬರಬೇಕು. ಸತ್ಯದ ಸಾಕ್ಷಾತ್ಕಾರವಾಗಬೇಕು. ಪರಮಾತ್ಮನ ಮಹಿಮೆ ಗೊತ್ತಾಗಬೇಕು. ಆಗ ಮೋಕ್ಷ ಪ್ರಾಪ್ತಿ ಎಂಬುದನ್ನು ಮುಂಡಕೋಪನಿಷತ್ತು ತಿಳಿಸಿದೆ –

ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಂ
ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಮ್ ।
ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ
ನಿರಂಜನಃ ಪರಮಂ ಸಾಮ್ಯಮುಪೈತಿ ॥

ಯಾವಾಗ ದ್ರಷ್ಟಾ (ನೋಡುವವನು, ಅನುಭವಿಸುವವನು) ಆದ ಜೀವನು ಸುವರ್ಣದಂತೆ ಹೊಳೆಯುವ, ಜಗತ್‌ಕರ್ತೃವೂ ಜಗತ್‌ಪ್ರಭುವೂ ಆದ ಪುರುಷ (ಪರಮಾತ್ಮ)ನನ್ನು ಕಾಣುವನೋ ಆಗ ಪುಣ್ಯಪಾಪಗಳನ್ನು ಕೊಡವಿ ಹಾಕಿ, ನಿರಂಜನನಾಗಿ ಪರಮಾತ್ಮನೊಡನೆ ಸಾಮ್ಯವನ್ನು ಹೊಂದುವನು.

ಬ್ರಹ್ಮಜ್ಞಾನಿಯಾದವನು, ಬ್ರಹ್ಮಸಾಕ್ಷಾತ್ಕಾರವನ್ನು ಪಡೆದವನು ಹೇಗೆ ಈ ಪ್ರಪಂಚದಲ್ಲಿರುತ್ತಾನೆ ಎಂದೂ ಮುಂಡಕೋಪನಿಷತ್ತು ತಿಳಿಸುತ್ತದೆ.

ಪ್ರಾಣೋಃಹ್ಯೇಷ ಯಃ ಸರ್ವಭೂತೈರ್ವಿಭಾತಿ
ವಿಜಾನನ್ ವಿದ್ವಾನ್ ಭವತೇ ನಾತಿವಾದೀ।
ಆತ್ಮಕ್ರೀಡ ಆತ್ಮರತಿಃ ಕ್ರಿಯಾವಾನ್
ಏಷ ಬ್ರಹ್ಮವಿದಾಂ ವರಿಷ್ಠಃ॥

(ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದವನು ಎಲ್ಲರ ಪ್ರಾಣದಂತೆ ಕಾಣಿಸುತ್ತಾನೆ. ಎಲ್ಲವನ್ನೂ ತಿಳಿದ ವಿದ್ವಾಂಸನು ಅತಿಯಾಗಿ ವಾದಕ್ಕೆ ಇಳಿಯುವುದಿಲ್ಲ. ತನ್ನಲ್ಲೇ ಆಟವಾಡುತ್ತಾ, ಆತ್ಮವಿಚಾರದಲ್ಲಿ ಸಂತೋಷಪಡುತ್ತಾ, ಮೋಕ್ಷಕ್ಕೆ ಬೇಕಾದಷ್ಟು ಮಾತ್ರ ಕೆಲಸ ಮಾಡುತ್ತಿರುತ್ತಾನೆ).

ಬ್ರಹ್ಮಜ್ಞಾನವನ್ನು ಪಡೆಯಲು, ಬ್ರಹ್ಮೈಕ್ಯವನ್ನು ಪಡೆಯಲು ಪ್ರವಚನಗಳು ಬೇಕಾಗಿಲ್ಲ, ಅತ್ಯಂತ ಹರಿತವಾದ ಬುದ್ಧಿ ಬೇಕಾಗಿಲ್ಲ, ಅನೇಕ ಗ್ರಂಥಗಳ ಜ್ಞಾನ ಬೇಕಾಗಿಲ್ಲ. ಬೇಕಾಗಿರುವುದು ಭಗವಂತನ ಪ್ರೀತಿ ಮಾತ್ರ ಎಂದು ಮುಂಡಕೋಪನಿಷತ್ತು ತಿಳಿಸುತ್ತದೆ–

ನಾಯಮಾತ್ಮಾ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾ ಶ್ರುತೇನ।
ಯಮೇವೈಷ ವೃಣುತೇ ತೇನ ಲಭ್ಯ–
ಸ್ತಸ್ಯೇಷ ಆತ್ಮಾ ವಿವೃಣುತೇ ತನೂಂ ಸ್ವಾಮ್ ॥

ಹಾಗಾದರೆ ವೇದಾಂತ ಪ್ರವಚನ, ತೀಕ್ಷ್ಣವಾದ ಬುದ್ಧಿ, ಬಹುಶ್ರುತತ್ವ ಯಾರಿಗೂ ಬೇಡವೆ? ಇವೆಲ್ಲವೂ ಇದ್ದರೆ ಚೆಂದ. ಆದರೆ ಇವುಗಳಿಂದಲೇ ಆತ್ಮಜ್ಞಾನ, ಬ್ರಹ್ಮಪ್ರಾಪ್ತಿ ಆಗದು. ಭಗವಂತನಲ್ಲಿ ನಮ್ಮ ಪ್ರೀತಿ, ನಮ್ಮಲ್ಲಿ ಭಗವಂತನ ಪ್ರೀತಿ ದೃಢವಾಗಿರುವುದಾದರೆ ಸಾಕ್ಷಾತ್ಕಾರ ಸಾಧ್ಯ ಭಗವಂತನೇ ಆಗ ನಮಗೆ ತನ್ನನ್ನು ತೋರಿಸುತ್ತಾನೆ.

ಆತ್ಮಜ್ಞಾನಕ್ಕಾಗಿ, ಮೋಕ್ಷಕ್ಕಾಗಿ ಪ್ರಯತ್ನಿಸುವುದು ಮಾನವನ ಕರ್ತವ್ಯ. ಜಗತ್ತಿನ ಹಿತಕ್ಕೆ ದುಡಿಯುವುದೂ ಆವಶ್ಯಕ. ಇದನ್ನೇ ಸ್ವಾಮಿ ವಿವೇಕಾನಂದರು 'ಆತ್ಮನೋ ಮೋಕ್ಷಾಯ ಜಗದ್ಧಿತಾಯಚ' ಎಂದು ಬೋಧಿಸಿದರು. ಮುಂಡಕೋಪನಿಷತ್ತಿನ ಅಧ್ಯಯನ ಇದರ ಕಡೆಗೆ ನಮ್ಮನ್ನು ಒಯ್ಯಲಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಿನಲ್ಲಿ ಆರೋಗ್ಯ ಸೇವಾ ಪರಿಸರ ಸುಧಾರಣೆಗೆ ಸಮ್ಮೇಳನ 'ಮೈಹೋಪ್–2026'

ಮೈಸೂರು, ಮೇ 19(ಜಿಎ)– ಕಾನ್ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿಯಿಂದ (ಸಿಐಐ) ಮೈಸೂರಿನ ರ್‍ಯಾಡಿಸನ್ ಬ್ಲ್ಯೂ ಪ್ಲಾಜಾ ಹೋಟೆಲ್‌ನಲ್ಲಿ ಮೇ 29ರಂದು ಬೆಳಿಗ್ಗೆ 10 ಗಂಟೆಗೆ ಮೈಸೂರಿನಲ್ಲಿ ಆರೋಗ್ಯ ಸೇವಾ ಕಾರ್ಯಾಚರಣೆ ಮತ್ತು ರೋಗಿಗಳ ಅನುಭವ ಕುರಿತ ಸಮ್ಮೇಳನ 'ಮೈಹೋಪ್–2026' ಆಯೋಜಿಸಲಾಗಿದೆ ಎಂದು ಸಂಸ್ಥೆಯ ಚೇರ್ಮನ್ ಉತ್ಸವ್ ಅಗರ್ವಾಲ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಸಾಂಪ್ರದಾಯಿಕ ಆರೋಗ್ಯ ಸೇವಾ ಪರಿಸರವನ್ನು ಅಂತರರಾಷ್ಟ್ರೀಯ ಮಾನದಂಡಕ್ಕೆ ಎತ್ತರಿಸುವ ಆಶಯದೊಂದಿಗೆ ಸಮ್ಮೇಳನ ಆಯೋಜಿಸಲಾಗಿದೆ. ಆರೋಗ್ಯ ಕ್ಷೇತ್ರ ಹಾಗೂ ಸಂಬಂಧಿತ ಉದ್ಯಮಗಳ ಪ್ರತಿನಿಧಿಗಳು ಪಾಲ್ಗೊಂಡು ಚರ್ಚೆ ನಡೆಸುವರು. ಮೈಸೂರು ಅಸೋಸಿಯೇಷನ್ ಆಫ್ ಹಾಸ್ಪಿಟಲ್ಸ್, ನರ್ಸಿಂಗ್ ಹೋಮ್ಸ್, ಕ್ಲಿನಿಕ್ಸ್ ಮತ್ತು ಡಯಾಗ್ನೋಸ್ಟಿಕ್ ಸೆಂಟರ್ಸ್ ಬೆಂಬಲ ನೀಡಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಉಪ ಚೇರ್ಮನ್ ಸವಿತಾ ಮಲ್ಲಪ್ಪ, ಕಾರ್ಯದರ್ಶಿ ಸೋಲೊಮನ್ ಪುಷ್ಪರಾಜ್, ಸಮ್ಮೇಳನ ಚೇರ್ಮನ್, ಅಪೊಲೊ ಆಸ್ಪತ್ರೆ ಮುಖ್ಯಸ್ಥ ಎನ್.ಜಿ.ಭರತೀಶ್‌ರೆಡ್ಡಿ ಉಪಸ್ಥಿತರಿದ್ದರು.

ಮೂತ್ರ ಸಂಯಮ ಸಮಸ್ಯೆ ಕುರಿತು ಮಾಹಿತಿ

ಮೈಸೂರು, ಮೇ 19(ಜಿಎ)– ಮೈಸೂರು ಆರ್ಗನೈಸೇಷನ್ ಆಫ್ ಜೆನಿಟೋ ಯುನಿನರಿ ಸರ್ಜನ್ಸ್ ವತಿಯಿಂದ ಜೆಎಸ್‌ಎಸ್ ಆಸ್ಪತ್ರೆ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ಮೇ 23ರಂದು ಮಧ್ಯಾಹ್ನ 12.30ಕ್ಕೆ 7ನೇ ವಾರ್ಷಿಕ ಲೈವ್ ಆಪರೇಟಿವ್ ಕಾರ್ಯಾಗಾರ ಕೆಯುಎ–ಮೈಸೊಗಸ್ ಯುರೊಕಾನ್ 2026 ಆಯೋಜಿಸಲಾಗಿದೆ ಎಂದು ಮೈಸೂರು ಯುರಾಲಜಿ ಅಸೋಸಿಯೇಷನ್ ಅಧ್ಯಕ್ಷ ಡಾ.ಜೆ.ಬಿ.ನರೇಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಾಗಾರದಲ್ಲಿ ಮೂತ್ರ ಅಸಂಯಮ ಸಮಸ್ಯೆ ಕುರಿತು ತಜ್ಞರು ಮಾಹಿತಿ ನೀಡುವರು. ಮೈಸೂರಿನ ಮಣಿಪಾಲ್ ಆಸ್ಪತ್ರೆಯಿಂದ ಇದರ ಸಂಬಂಧಿತ ಶಸ್ತ್ರ ಚಿಕಿತ್ಸೆಗಳ ನೇರ ಪ್ರಸಾರ ವೀಕ್ಷಿಸಬಹುದು. ಇನ್ಸ್ಟಿಟ್ಯೂಟ್ ಆಫ್ ನೆಫ್ರೋಯುರಾಲಜಿ ಸಂಸ್ಥಾಪಕ ನಿರ್ದೇಶಕ ಡಾ.ಜಿ.ಕೆ. ವೆಂಕಟೇಶ್ ಅತಿಥಿಯಾಗಿ ಪಾಲ್ಗೊಳ್ಳುವರು. ಮೂತ್ರಶಾಸ್ತ್ರಜ್ಞರು, ಸಂಶೋಧನಾ ವಿದ್ಯಾರ್ಥಿಗಳು ಸೇರಿದಂತೆ ಸುಮಾರು 120 ಮಂದಿ ಭಾಗವಹಿಸುವರು ಎಂದರು. ಗೋಷ್ಠಿಯಲ್ಲಿ ಅಸೋಸಿಯೇಷನ್ ಕಾರ್ಯದರ್ಶಿ ಪ್ರಸಾದ್ ಎಚ್.ಎಲ್, ಖಜಾಂಚಿ ಕೆ.ಉಮೇಶ್, ಕರ್ನಾಟಕ ಯುರಾಲಜಿ ಅಸೋಸಿಯೇಷನ್ ಕಾರ್ಯದರ್ಶಿ ಸತೀಶ್ ಧಾರವಾಡಕರ್, ಆಯೋಜಕ ಸಮಿತಿ ಚೇರ್ಮನ್ ಪ್ರಕಾಶ್ ಪ್ರಭು, ಕಾರ್ಯದರ್ಶಿ ಡಾ.ದಿನೇಶ್‌ಕುಮಾರ್ ಉಪಸ್ಥಿತರಿದ್ದರು.

ನಾಳೆ ಪೂರ್ವಭಾವಿ ಸಭೆ

ಮೈಸೂರು: ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಯೋಜಿಸುವ ಸಂಬಂಧ ಎಡಿಸಿ ಅಧ್ಯಕ್ಷತೆಯಲ್ಲಿ ಮೇ 21ರಂದು ಸಂಜೆ 4 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಕನ್ನಡ– ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಂಡರ್ ಕಿಡ್ ವೈಭವ್ ಆಟಕ್ಕೆ ಲಕ್ನೋ ಧೂಳೀಪಟ

ಆರ್‌ಆರ್ ಪ್ಲೇ-ಆಫ್ ಕನಸು ಇನ್ನೂ ಜೀವಂತ!

ಜೈಪುರ್, ಮೇ 19(ವಿವಿಹೆಚ್)– ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್, ಧ್ರುವ್ ಜುರೆಲ್ ಅವರ ಅರ್ಧಶತಕದ ನೆರವಿನಿಂದ ರಾಜಸ್ಥಾನ್ ರಾಯಲ್ಸ್, ಲಕ್ನೋಸೂಪರ್ ಜೈಂಟ್ಸ್ ತಂಡವನ್ನು 7 ವಿಕೆಟ್‌ಗಳಿಂದ ಮಣಿಸಿತು. ಅದರೊಂದಿಗೆ ಅಂಕಪಟ್ಟಿಯಲ್ಲಿ 4ನೇ ಸ್ಥಾನಕ್ಕೆ ಜಿಗಿತ ಕಂಡಿತು.

ಇಲ್ಲಿನ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಎಲ್‌ಎಸ್‌ಜಿ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 220 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಿದ ಆರ್‌ಆರ್ 19.1 ಓವರ್‌ಗಳಲ್ಲಿ ಕೇವಲ 3 ವಿಕೆಟ್ ಕಳೆದುಕೊಂಡು 225 ರನ್ ಬಾರಿಸಿ, ಗೆಲುವಿನ ನಗೆ ಬೀರಿತು.

ಎಲ್‌ಎಸ್‌ಜಿ ಪರ ಇನ್ನಿಂಗ್ಸ್ ಆರಂಭಿಸಿದ ಜೋಶ್ ಇಂಗ್ಲಿಸ್ ಹಾಗೂ ಮಿಚೆಲ್ ಮಾರ್ಷ್ 50 ಎಸೆತಗಳಲ್ಲಿ 109 ರನ್ ಜೊತೆಯಾಟವಾಡಿದರು. ಇಂಗ್ಲಿಸ್ 29 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸರ್ ಸಹಿತ 60 ರನ್ ಗಳಿಸಿದರೆ, ಮಿಚೆಲ್ ಮಾರ್ಷ್ 57 ಎಸೆತಗಳಲ್ಲಿ 11 ಬೌಂಡರಿ, 5 ಸಿಕ್ಸರ್ ಸಹಿತ 96ರನ್ ಚಚ್ಚಿದರು.

ಇವರಿಗೆ ಸಾಥ್ ನೀಡಿದ ನಾಯಕ ರಿಷಬ್ ಪಂತ್ 35(23), ನಿಕೋಲಸ್ ಪೂರನ್ 16(11) ರನ್ ಕಲೆಹಾಕಿದರು. ರಾಯಲ್ಸ್ ಪರ ಯಶ್ ರಾಜ್ ಪೂಂಜಾ 2 ವಿಕೆಟ್, ಜೋಫ್ರಾ ಆರ್ಚರ್ ಒಂದು ವಿಕೆಟ್ ಕಬಳಿಸಿದರು.



ಅರ್ಧಶತಕ ಬಾರಿಸಿದ ವೈಭವ್ ಸೂರ್ಯವಂಶಿಯನ್ನು ಅಭಿನಂದಿಸಿದ ಧ್ರುವ್ ಜುರೆಲ್

ಬೃಹತ್ ಮೊತ್ತ ಚೇಸಿಂಗ್ ಮಾಡಿದ ಆರ್‌ಆರ್‌ಗೆ ವಂಡರ್ ಕಿಡ್ ವೈಭವ್ ಸೂರ್ಯವಂಶಿ ನೆರವಾದರು. ಸಿಕ್ಸರ್, ಫೋರ್ಸ್ ಸುರಿಮಳೆಗೈಯುವ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು. 38 ಎಸೆತ ಎದುರಿಸಿ 7 ಬೌಂಡರಿ ಹಾಗೂ ಭರ್ಜರಿ 10 ಸಿಕ್ಸರ್‌ಗಳ ಸಹಾಯದಿಂದ 93 ರನ್ ಗಳಿಸಿದರು. ಇವರಿಗೆ ಸಾಥ್ ನೀಡಿದ ನಾಯಕ ಯಶಸ್ವಿ ಜೈಸ್ವಾಲ್ 23 ಎಸೆತಗಳಲ್ಲಿ 43 ರನ್ ಚಚ್ಚಿದರು.

ಕೊನೆಯಲ್ಲಿ ಗೆಲುವಿನ ಜವಾಬ್ದಾರಿ ಹೊತ್ತ ಧ್ರುವ್ ಜುರೇಲ್ 38 ಎಸೆತಗಳಲ್ಲಿ 3ಬೌಂಡರಿ, 3 ಸಿಕ್ಸರ್ ಸಹಿತ ಅಜೇಯ 58 ರನ್ ಗಳಿಸಿದರು. ಇವರಿಗೆ ಸಾಥ್ ನೀಡಿದ ಫೆರಿರ್‍ರಾ ಅಜೇಯ 16(10) ರನ್‌ಗಳಿಸಿದರು. ಎಲ್.ಪ್ರಿಟೋರಿಯಸ್ 7(6) ರನ್ ಕಲೆಹಾಕಿದರು. ಲಕ್ನೋ ಪರ ಆಕಾಶ್ ಮಹಾರಾಜ್ ಸಿಂಗ್ ಹಾಗೂ ಮೋಹ್ಸಿನ್ ಖಾನ್ ತಲಾ ಒಂದೊಂದು ವಿಕೆಟ್ ಪಡೆದರು.

ಈ ಪಂದ್ಯದೊಂದಿಗೆ 14 ಅಂಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿರುವ ರಾಜಸ್ಥಾನ್, ಮೇ.24ರಂದು ಮುಂಬೈ ವಿರುದ್ಧ ಪಂದ್ಯ ಆಡಲಿದ್ದು, ಈ ಪಂದ್ಯದಲ್ಲಿ ಗೆಲುವು ದಾಖಲಿಸಿದ್ದಲ್ಲಿ ನೇರವಾಗಿ ಪ್ಲೇ–ಆಫ್‌ಗೆ ಅರ್ಹತೆ ಪಡೆಯಲಿದೆ. ಒಂದು ವೇಳೆ ಆ ಪಂದ್ಯ ಸೋತಲ್ಲಿ, ಪಂಜಾಬ್ ಹಾಗೂ ಚೆನ್ನೈ ತಂಡಗಳ ಸೋಲಿನ ಲೆಕ್ಕಾಚಾರದೊಂದಿಗೆ ಅರ್ಹತೆ ಪಡೆಯಲಿದೆ.

ಹಿಂದೂ ದೇವಸ್ಥಾನಗಳ ಆಡಳಿತ ನಿಯಂತ್ರಿಸುವ ಕಾಯ್ದೆಗಳ ಪರಿಶೀಲನೆಗೆ ಸುಪ್ರೀಂ ಒಪ್ಪಿಗೆ

ನವದೆಹಲಿ, ಮೇ 19– ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ಮತ್ತು ಪುದುಚೆರಿಯಲ್ಲಿ ಹಿಂದೂ ದೇವಸ್ಥಾನಗಳ ಆಡಳಿತವನ್ನು ನಿಯಂತ್ರಿಸುವ ಕಾನೂನುಗಳ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಪರಿಶೀಲನೆ ನಡೆಸಲಿದೆ. 2012ರಲ್ಲಿ ಈ ಅರ್ಜಿಗಳನ್ನು ಸಲ್ಲಿಸಲಾಗಿತ್ತು.

ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನಾ ಮತ್ತು ಸತೀಶ್ ಚಂದ್ರ ಶರ್ಮಾ ಅವರ ಪೀಠವು ಸೋಮವಾರ ಮರುಪರಿಶೀಲನಾ ಅರ್ಜಿಗಳನ್ನು ವಿಚಾರಣೆಗೆ ಒಪ್ಪಿದೆ ಆ ಮೂಲಕಮೂಲಕ 2025ರ ಏಪ್ರಿಲ್‌ನಲ್ಲಿ ನೀಡಿದ್ದ ಆದೇಶವನ್ನು ಹಿಂಪಡೆದಿದೆ.



ಹಿಂದಿನ ಆದೇಶದಲ್ಲಿ, ಅರ್ಜಿದಾರರಿಗೆ ರಿಟ್ ಅರ್ಜಿಗಳನ್ನು ಸಲ್ಲಿಸುವ ಬದಲು ಸಂಬಂಧಪಟ್ಟ ಹೈಕೋರ್ಟ್‌ಗಳನ್ನು ಸಂಪರ್ಕಿಸಿ ಎಂದು ಹೇಳಲಾಗಿತ್ತು.

ತಮಿಳುನಾಡು ಹಿಂದೂ ಧಾರ್ಮಿಕ ಮತ್ತು ದತ್ತಿ ಕಾಯ್ದೆ 1959, ಆಂಧ್ರಪ್ರದೇಶ ಧಾರ್ಮಿಕ ಸಂಸ್ಥೆಗಳು ಮತ್ತು ದತ್ತಿ ಕಾಯ್ದೆ 1987, ಪುದುಚೆರಿ ಹಿಂದೂ ಧಾರ್ಮಿಕ ಸಂಸ್ಥೆಗಳ ಕಾಯ್ದೆ 1972 ಮತ್ತು 1987ರ ತೆಲಂಗಾಣ ಧಾರ್ಮಿಕ ಸಂಸ್ಥೆಗಳು ಮತ್ತು ದತ್ತಿ ಕಾಯ್ದೆಯಲ್ಲಿನ ನಿಬಂಧನೆಗಳನ್ನು 2012ರಲ್ಲಿ ಸಲ್ಲಿಸಲಾಗಿದ್ದ ಅರ್ಜಿಯಲ್ಲಿ ಪ್ರಶ್ನಿಸಲಾಗಿತ್ತು.

ಈ ಮೂರೂ ಕಾಯ್ದೆಯಲ್ಲಿನ ನಿಬಂಧನೆಗಳು ಸಂವಿಧಾನದ 14 (ಸಮಾನತೆಯ ಹಕ್ಕು), 19 (ವೃತ್ತಿ ಸ್ವಾತಂತ್ರ್ಯ), 25, 26 ಮತ್ತು 31ಎ ವಿಧಿಗಳನ್ನು ಉಲ್ಲಂಘಿಸುತ್ತವೆ ಎಂದು ಅರ್ಜಿದಾರರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ತಿ.ನರಸೀಪುರ ರೇಷ್ಮೆ ನೂಲು ತಯಾರಿಕಾ ಘಟಕಕ್ಕೆ ಎರಡು ಹೊಸ ಯಂತ್ರ ಅಳವಡಿಕೆ



ತಿ.ನರಸೀಪುರ ರೇಷ್ಮೆ ನೂಲು ತಯಾರಿಕಾ ಘಟಕದಲ್ಲಿ ಹೊಸದಾಗಿ ಎರಡು ನೂಲು ತೆಗೆಯುವ ಯಂತ್ರ ಅಳವಡಿಸಿರುವುದು.

ಮೈಸೂರು, ಮೇ 19(ಎಂಟಿವೈ)– ತಿ.ನರಸೀಪುರದಲ್ಲಿರುವ ರೇಷ್ಮೆ ನೂಲು ತಯಾರಿಕಾ ಘಟಕಕ್ಕೆ ಹೊಸದಾಗಿ ಎರಡು ನೂಲು ತಯಾರಿಕಾ ಯಂತ್ರವನ್ನು ಅಳವಡಿಸಲಾಗಿದ್ದು, ಮುಂದಿನ ತಿಂಗಳೊಳಗೆ ಹೊಸ ಯಂತ್ರದಿಂದ ನೂಲು ತೆಗೆಯುವ ಕಾರ್ಯ ಆರಂಭಿಸಲಾಗುತ್ತದೆ.

ಈ ನೂಲು ತಯಾರಿಕಾ ಘಟಕದಲ್ಲಿ ಹಿಂದೆ 400 ಹೆನ್ಸ್ ಸಾಮರ್ಥ್ಯದ ಯಂತ್ರಗಳಿದ್ದು, ದಿನಕ್ಕೆ 150ರಿಂದ 180 ಕೆಜಿ ನೂಲು ತಯಾರಿಸಲಾಗುತ್ತಿತ್ತು. ಹೊಸ ಯಂತ್ರದ ಸಾಮರ್ಥ್ಯ ಕಡಿಮೆ ಇರುವುದರಿಂದ ಇದೀಗ ನಾಲ್ಕು ಯಂತ್ರಗಳಿಂದ ದಿನಕ್ಕೆ 250 ಕೆಜಿ ರೇಷ್ಮೆ ನೂಲು ತಯಾರಿಸುವ ಸಾಮರ್ಥ್ಯ ತಿ.ನರಸೀಪುರದ ರೇಷ್ಮೆ ನೂಲು ತಯಾರಿಕಾ ಘಟಕ ಹೊಂದಿದಂತಾಗಿದೆ. ಅಲ್ಲದೆ, ತಿಂಗಳಿಗೆ 4500 ಕೆಜಿ ರೇಷ್ಮೆ ನೂಲು ತಯಾರಿಸಬಹುದು. ಇದರಿಂದ ಮೈಸೂರಿನ ರೇಷ್ಮೆ ಸೀರೆ ತಯಾರಿಕಾ ಘಟಕಕ್ಕೆ ಬೇಡಿಕೆಗೆ ಅನುಗುಣವಾಗಿ ರೇಷ್ಮೆ ನೂಲು ಪೂರೈಸಲು ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಹೊಸ ಯಂತ್ರ ಸಹಕಾರಿಯಾಗಲಿದೆ.

ರೇಷ್ಮೆ ಇಲಾಖೆಗೆ ಸೇರಿದ ಜಾಗದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಿಸದಂತೆ ಆಗ್ರಹಿಸಿ ಪ್ರತಿಭಟನೆ ಮಾಡಿದ್ದ ರೇಷ್ಮೆ ನೂಲು ತಯಾರಿಕಾ ಘಟಕದ ನೌಕರರಿಗೆ ಇದೀಗ ಹೊಸದಾಗಿ ತಂದಿರುವ ಎರಡು ಯಂತ್ರಗಳಿಂದ ರೇಷ್ಮೆ ನೂಲು ತೆಗೆಯುವ ಘಟಕ ಮತ್ತಷ್ಟು ಗಟ್ಟಿಗೊಳ್ಳುತ್ತಿರುವುದು ದೃಢಪಟ್ಟಿದ್ದರಿಂದ ನೌಕರರಲ್ಲಿ ಮಂದಹಾಸ ಮೂಡಿದೆ.

ರೇಷ್ಮೆ ಇಲಾಖೆಯ ಕೇಂದ್ರ ಕಚೇರಿ ಮೂಲಕ ಟೆಂಡರ್ ಪಡೆದಿದ್ದ ಸಂಸ್ಥೆ 200 ಹೆನ್ಸ್ ಸಾಮರ್ಥ್ಯದ ಎರಡು ಯಂತ್ರಗಳನ್ನು ತಿ.ನರಸೀಪುರದ ರೇಷ್ಮೆ ನೂಲು ತಯಾರಿಕಾ ಘಟಕಕ್ಕೆ ಹಸ್ತಾಂತರಿಸಿದೆ. ಹೊಸದಾಗಿ ಸೇರ್ಪಡೆಯಾದ ಎರಡು ಯಂತ್ರಗಳಿಂದ ಇದೀಗ ತಿ.ನರಸೀಪುರದಲ್ಲಿನ ರೇಷ್ಮೆ ನೂಲು ತಯಾರಿಕಾ ಘಟಕದಲ್ಲಿ ನೂಲು ತೆಗೆಯುವ ಯಂತ್ರಗಳ ಸಂಖ್ಯೆ ನಾಲ್ಕಕ್ಕೆ ಏರಿದಂತಾಗಿದೆ.

ಜೋಡಣಾ ಕಾರ್ಯ: ತಾಲೂಕು ಕ್ರೀಡಾಂಗಣ ಸ್ಥಾಪನೆಗಾಗಿ ರೇಷ್ಮೆ ನೂಲು ತಯಾರಿಕಾ ಘಟಕದ 5 ಎಕರೆ ಭೂಮಿಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸಿದ್ದ ಹಿನ್ನೆಲೆಯಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ ನೌಕರರು ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿಯೆ ರೇಷ್ಮೆ ನೂಲು ತಯಾರಿಕಾ ಘಟಕದಲ್ಲಿ ಹೊಸ ಯಂತ್ರ ಜೋಡಣೆಗೆ ಅಗತ್ಯವಾದ ಸಿವಿಲ್ ವರ್ಕ್ ಮಾಡಲಾಗುತ್ತಿತ್ತು. ಇದೀಗ ಕಾಂಕ್ರಿಟ್ ಕಾಮಗಾರಿ ಪೂರ್ಣಗೊಂಡಿದ್ದರಿಂದ ಹೊಸ ಯಂತ್ರದ ಜೋಡಣಾ ಕಾರ್ಯ ನಡೆಸಲಾಗುತ್ತಿದೆ. ಆದರೂ, ಇನ್ನು ತಿಂಗಳ ನಂತರವಷ್ಟೇ ಹೊಸ ಯಂತ್ರಗಳಿಂದ ನೂಲು ತೆಗೆಯುವ ಕಾರ್ಯ ಆರಂಭಿಸಲಾಗುತ್ತದೆ. ಹೊಸ ಯಂತ್ರದಲ್ಲಿ ಕೆಲವು ಸೆಟ್ಟಿಂಗ್ ಮಾಡಬೇಕಾಗಿರುವುದರಿಂದ ತಂತ್ರಜ್ಞರ ತಂಡ ಬಂದು ಹೊಸ ಯಂತ್ರಕ್ಕೆ ಅಗತ್ಯ ಸೆಟ್ಟಿಂಗ್ ಮಾಡಿದ ನಂತರವಷ್ಟೇ ನೂಲು ತಯಾರಿಸುವ ಕಾರ್ಯ ಆರಂಭಿಸಲಾಗುತ್ತದೆ.

ಹೊಸ ಸಿಬ್ಬಂದಿ: ಹೊಸ ಯಂತ್ರದ ಅಳವಡಿಕೆ ಹಿನ್ನೆಲೆಯಲ್ಲಿ ಒಂದೂವರೆ ತಿಂಗಳ ಹಿಂದೆಯೇ 30 ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದಲ್ಲಿ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ. ಇವರು ಈಗಾಗಲೇ ಹಳೆ ಯಂತ್ರದಲ್ಲಿ ನೂಲು ತೆಗೆಯುವ ಕಾರ್ಯದ ಬಗ್ಗೆ ತರಬೇತಿ ಪಡೆಯುತ್ತಿದ್ದು, ಹೊಸ ಯಂತ್ರಗಳ ಅಳವಡಿಕಾ ಕಾರ್ಯ ಪೂರ್ಣಗೊಂಡ ನಂತರ ಅಲ್ಲಿ ಪೂರ್ಣ ಪ್ರಮಾಣದಲ್ಲಿ ಕೆಲಸ ನಿರ್ವಹಿಸಲಿದ್ದಾರೆ.

ಲಾಭದ ಆಸೆಗಾಗಿ ಸಿನಿಮಾಗಳಲ್ಲಿ ಅಶ್ಲೀಲ ದೃಶ್ಯ ಪ್ರದರ್ಶನ

ದ್ಯಾವ್ರಗುಡ್ಡ ಕಾದಂಬರಿ ಬಿಡುಗಡೆ ಕಾರ್ಯಕ್ರಮದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ಬೇಸರ

ಮೈಸೂರು, ಮೇ19(ಬಿಎಲ್‌ಯು)– ಸಿನಿಮಾಗಳಲ್ಲಿ ಲಾಭದ ಆಸೆಗಾಗಿ ಅಶ್ಲೀಲ ದೃಶ್ಯಗಳನ್ನು ತೋರಿಸಲಾಗುತ್ತಿದೆ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ಇಂದು ಪ್ರೊ.ಎನ್.ಕೆ.ಲೋಲಾಕ್ಷಿ ಅವರ 'ದ್ಯಾವ್ರಗುಡ್ಡ' ಕಾದಂಬರಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಬೆತ್ತಲೆ ಹುಡುಗಿಯನ್ನು ತೋರಿಸುವಂತೆ ಜನರು ಯಾವ ನಿರ್ದೇಶಕನ ಬಳಿ ಕೇಳುವುದಿಲ್ಲ. ಆದರೆ ಲಾಭದ ಆಸೆಗಾಗಿ ಅಶ್ಲೀಲ ದೃಶ್ಯಗಳನ್ನು ತೋರಿಸುತ್ತಾರೆ ಎಂದರು.



ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ಪ್ರೊ.ಎನ್.ಕೆ.ಲೋಲಾಕ್ಷಿ ಅವರ "ದ್ಯಾವ್ರಗುಡ್ಡ" ಕಾದಂಬರಿಯನ್ನು ಸಾಹಿತಿ ಬರಗೂರು ರಾಮಚಂದ್ರಪ್ಪ ಬಿಡುಗಡೆ ಮಾಡಿದರು.

ಸಿನಿಮಾ, ಕಲೆ, ಪತ್ರಿಕಾ ಮಾಧ್ಯಮ ಕ್ಷೇತ್ರಗಳು ಉದ್ಯಮವಾದರೆ ಅವುಗಳಿಂದ ನೈಜ ಸಂವೇದನೆ ನಿರೀಕ್ಷೆ ಅಸಾಧ್ಯ. ಆದರೆ ಇವು ಬಂಡವಾಳಶಾಯಿ ನೀತಿಗೆ ಬದ್ಧವಾಗಿರುವುದಲ್ಲದೆ, ಉದ್ದಿಮೆಯಂತೆ ಲಾಭದ ಹಿನ್ನೆಲೆಯಲ್ಲಿ ನಡೆಯುತ್ತದೆ ಎಂದು ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ಜನಪ್ರಿಯ ಮಾಧ್ಯಮಗಳ ಪರಿಕಲ್ಪನೆ ಬಂಡವಾಳಶಾಯಿಗೆ ಬದ್ಧವಾಗಿರುತ್ತದೆ. ಇದರಿಂದ ಲಾಭಕೋರತನ ಇರುತ್ತದೆ. ಇದರಿಂದ ಜನಪ್ರಿಯ ಮಾಧ್ಯಮಗಳು ಸಂವೇದನೆ ಕಳೆದುಕೊಳ್ಳುತ್ತದೆ ಎಂದರು.

ನವ್ಯ ಕಾಲದಲ್ಲಿ ಜನಪ್ರಿಯ ಸಾಹಿತ್ಯವನ್ನು ತಿರಸ್ಕಾರ ಮಾಡಲಾಯಿತು. ಇದರಿಂದ ಸಾಹಿತ್ಯದ ಕೊಂಡಿ ಕಳಚಿತು. ಜನಪ್ರಿಯ ಸಾಹಿತ್ಯ ಶ್ರೇಷ್ಠವಲ್ಲ ಎಂದು ವ್ಯಾಖ್ಯಾನ ಮಾಡಲಾಯಿತು. ಈ ಹಂತದಲ್ಲಿ ಬರೆಯುವುದೆಲ್ಲವೂ ಶ್ರೇಷ್ಠವಾಗಿ ಇರಬೇಕೆಂದು ಪರಿಗಣಿಸಲಾಯಿತು. ಆದರೆ ಬರೆಯುವುದೆಲ್ಲಾ ಶ್ರೇಷ್ಠವಾಗಿರಬೇಕು ಎಂದಾದರೆ ಸಾಹಿತ್ಯದ ಬೆಳವಣಿಗೆ ಅಸಾಧ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಹೆಚ್ಚು ಪುಸ್ತಕ ಬರೆದವರೆಲ್ಲರೂ ಶ್ರೇಷ್ಠ ಕೃತಿ ಬರೆದಿಲ್ಲ. ಇದರಂತೆ ಉತ್ತಮ ಕೃತಿ ಬರೆದವರು ಹೆಚ್ಚು ಪುಸ್ತಕ ಬರೆದಿಲ್ಲ ಎಂದು ಪುಸ್ತಕದ ಶ್ರೇಷ್ಠತೆ ಬಗ್ಗೆ ಬರಗೂರು ರಾಮಚಂದ್ರಪ್ಪ ವ್ಯಾಖ್ಯಾನ ಮಾಡಿದರು.

ಕೃತಿಗಳು ವಿಷಯ ವಸ್ತುವಿನ ಗಂಭೀರತೆ, ಗಾಢತೆ ಹಾಗೂ ನಿರೂಪಣೆಯಲ್ಲಿ ಅಪೇಕ್ಷಿಸುತ್ತದೆ. ಇದೆಲ್ಲವೂ ಒಂದಕ್ಕೊಂದು ಬೆಸುಗೆಯಾದಾಗ ಮಾತ್ರ ಜನಪ್ರಿಯ ಕೃತಿಗಳಾಗುತ್ತದೆ ಎಂದು ತಿಳಿಸಿದರು.

ಯಾವುದೇ ಪುಸ್ತಕಗಳು ಓದುಗರಿಗೆ ಅರ್ಥವಾಗುವಂತೆ ಇರಬೇಕು. ಅಲ್ಲದೆ ಓದುಗನಿಗೆ ಅರ್ಥ ಮಾಡಿಕೊಳ್ಳುವಂತಹ ಅರ್ಥವಂತಿಕೆ ಕೂಡ ಇರಬೇಕು ಎಂದರು.

ಪ್ರೊ.ಲೋಲಾಕ್ಷಿ ಅವರ 'ದ್ಯಾವ್ರಗುಡ್ಡ' ಕಾದಂಬರಿಯಲ್ಲಿ ಗಂಭೀರತೆ, ಮಾನವೀಯತೆಯ ನೆಲೆ ಇದೆ. ಲೋಲಾಕ್ಷಿಯವರು ಮಾನವೀಯವಾಗಿ ಸನ್ನಿವೇಶಗಳನ್ನು ನಿರೂಪಿಸುತ್ತಾ ಹೋಗಿದ್ದಾರೆ. ಕ್ರೌರ್ಯ ಮನಸ್ಸಿಗೆ ಮುಟ್ಟುವಂತೆ ಬರೆದಿದ್ದು, ಕಾದಂಬರಿಯ ಅರ್ಧ ಭಾಗದ ನಂತರ ಸಿನಿಮೀಯ ತಿರುವು ಪಡೆದುಕೊಳ್ಳುತ್ತದೆ ಎಂದು ಕಾದಂಬರಿ ಬಗ್ಗೆ ಬರಗೂರು ರಾಮಚಂದಪ್ಪ ಅವರು ಸೂಚ್ಯವಾಗಿ ಹೇಳಿದರು.

ಕಾದಂಬರಿ ರಚನೆಕಾರರಾದ ಪ್ರೊ.ಲೋಲಾಕ್ಷಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕಿ ಪ್ರೊ.ಕವಿತಾ ರೈ, ಬೆಂಗಳೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಪ್ರೊ.ಶೋಭಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.


ಕಾಣೆಯಾದವರ ಪತ್ತೆಗೆ ಮನವಿ

ಮೈಸೂರು, ಮೇ 19– ಸಿದ್ದಪ್ಪ ಬಿನ್ ಲೇಟ್ ಸ್ವಾಮಿ ಕಾಣೆಯಾಗಿರುವುದಾಗಿ ಬನ್ನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.



ಚಹರೆ: ವಯಸ್ಸು ಸುಮಾರು 74 ವರ್ಷ, 5.2 ಅಡಿ ಎತ್ತರ, ದುಂಡುಮುಖ, ಕಪ್ಪು ಬಿಳಿ ಮಿಶ್ರಿತ ಕೂದಲು, ಸಾಧಾರಣ ಮೈಕಟ್ಟು, ಎಡಗೈಯಲ್ಲಿ ಗಂಟು ಇರುತ್ತದೆ. ತೊದಲು ಮಾತನಾಡುತ್ತಾರೆ. ಮನೆ ಯಿಂದ ಹೋಗುವಾಗ ಬಿಳಿ ಬಣ್ಣದ ಶರ್ಟ್ ಮತ್ತು ಬಿಳಿ ಬಣ್ಣದ ಪಂಚೆ ಧರಿಸಿರುತ್ತಾರೆ. ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ದೂ ಸಂ: 08227–275632 ಅಥವಾ ಬನ್ನೂರು ಪೊಲೀಸ್ ಠಾಣೆ ಸಂಪರ್ಕಿಸಬಹುದು.

ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜುಗೆ ಅಭಿನಂದನೆ...



ಮೈಸೂರು ನಗರ ಜೆಡಿಎಸ್ ಅಧ್ಯಕ್ಷರಾಗಿ ನೇಮಕಗೊಂಡ ಎಸ್‌ಬಿಎಂ ಮಂಜು ಅವರನ್ನು ಜೆಡಿಎಸ್ ಕಚೇರಿಯಲ್ಲಿ ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯ ಸುರೇಶ್ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಮೈಸೂರು ನಗರದ ಜೆಡಿಎಸ್ ಮಾಜಿ ಅಧ್ಯಕ್ಷ ಕೆ.ಟಿ.ಚೆಲುವೇಗೌಡ, ಮೈಲಾಕ್ ಅಂಡ್ ಪೈಂಟ್ ಮಾಜಿ ಅಧ್ಯಕ್ಷ ಕೃಷ್ಣ, ಚಾಮರಾಜ ಕ್ಷೇತ್ರದ ಹಿರಿಯ ಜೆಡಿಎಸ್ ಮುಖಂಡ ಎಚ್.ಕೆ.ರಮೇಶ್, ರವಿ, ನಗರ ಪಾಲಿಕೆ ಮಾಜಿ ಸದಸ್ಯೆ ಪ್ರೇಮಾ ಶಂಕರೇಗೌಡ, ಮಹಿಳಾ ಅಧ್ಯಕ್ಷೆ ಹೇಮಾವತಿ, ಚಾಮರಾಜ ಕ್ಷೇತ್ರದ ಅಧ್ಯಕ್ಷ ಚಂದ್ರಹಾಸ್, ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷ ರಘುರಾಮ್, ಪರಿಶಿಷ್ಟ ಜಾತಿ–ಪಂಗಡದ ಅಧ್ಯಕ್ಷ ಪ್ರಕಾಶ್, ಕೃಷ್ಣಾಚಾರಿ, ಆನಂದ್, ಹನುಮಗೌಡ, ವೆಂಕಟೇಶ್, ದೇವರಾಜ್, ಲಲಿತಾ ಇತರರಿದ್ದರು.

ಬಸವಣ್ಣರ ಪವಿತ್ರ ನೆಲೆ ಅರಿಯಲು ಕಲ್ಯಾಣ ಕರ್ನಾಟಕಕ್ಕೊಮ್ಮೆ ಭೇಟಿ ನೀಡಿ

ಹಳೆ ಮೈಸೂರು ಭಾಗದ ಬಸವ ಪ್ರೇಮಿಗಳಿಗೆ ಪೊಲೀಸ್ ಅಕಾಡೆಮಿ ನಿರ್ದೇಶಕ ಎಸ್.ಎಲ್.ಚೆನ್ನಬಸವಣ್ಣ ಸಲಹೆ

ಮೈಸೂರು, ಮೇ 19(ಎಸ್‌ಪಿಎನ್)– ಹಳೆ ಮೈಸೂರು ಭಾಗದ ಬಸವ ಪ್ರೇಮಿಗಳು ಕಲ್ಯಾಣ ಕರ್ನಾಟಕಕ್ಕೆ ಒಮ್ಮೆ ಭೇಟಿ ನೀಡಿ, ಅಲ್ಲಿನ ಐತಿಹಾಸಿಕ ಸ್ಥಳಗಳನ್ನು ಕಣ್ತುಂಬಿಕೊಳ್ಳಬೇಕು ಎಂದು ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಎಸ್.ಎಲ್.ಚೆನ್ನಬಸವಣ್ಣ ಸಲಹೆ ನೀಡಿದರು.

ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಆವರಣದ ಡಾ.ಶಿವರಾತ್ರಿ ರಾಜೇಂದ್ರ ಭವನದಲ್ಲಿ ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ ಸಹಯೋಗದೊಂದಿಗೆ ಆಯೋಜಿಸಿದ್ದ ಬಸವ ಜಯಂತಿ, ಕಾಯಕ ದಿನಾಚರಣೆ, ದತ್ತಿ ಕಾರ್ಯಕ್ರಮ ಹಾಗೂ ಕಾಯಕಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಬೀದರ್ ಜಿಲ್ಲೆಯ ಬಸವ ಕಲ್ಯಾಣದಲ್ಲಿರುವ 'ಪರುಷ ಕಟ್ಟೆ' 12ನೇ ಶತಮಾನದ ಸಮಾಜ ಸುಧಾರಕ ಬಸವಣ್ಣನವರ ಕಾಲದ ಐತಿಹಾಸಿಕ ಮತ್ತು ಪವಿತ್ರ ಸ್ಥಳವಾಗಿದೆ. ಬಸವ ಪ್ರೇಮಿಗಳು ಈ ಸ್ಥಳಕ್ಕೆ ಒಮ್ಮೆ ಭೇಟಿ ನೀಡಿ, ಇಲ್ಲಿನ ಮಹತ್ವವನ್ನು ತಿಳಿದುಕೊಳ್ಳಬೇಕು. ಸಾಮಾನ್ಯವಾಗಿ 'ಪರುಷ ಕಟ್ಟೆ' ಸ್ಥಳದಲ್ಲಿ ಬಸವಣ್ಣನವರು ಕುಳಿತು ಆಧ್ಯಾತ್ಮಿಕ ಬೋಧನೆ ಮತ್ತು ವಚನಗಳನ್ನು ಬೋಧಿಸುತ್ತಿದ್ದ ಐತಿಹಾಸಿಕ ಸ್ಥಳವಾಗಿದೆ. ಈಗಲೂ ಇಲ್ಲಿನ ಜನರು ಬಸವಣ್ಣನ ಕುರಿತು ಅಪಾರ ಭಕ್ತಿ–ಗೌರವಗಳನ್ನು ತೋರುತ್ತಾರೆ ಎಂದರು.



ಬಸವ ಜಯಂತಿ, ಕಾಯಕ ದಿನಾಚರಣೆ ಹಾಗೂ ದತ್ತಿ ಕಾರ್ಯಕ್ರಮದಲ್ಲಿ ಸ್ನೇಹಬಿಂದು ಚಾರಿಟಬಲ್ ಟ್ರಸ್ಟ್ ಕಾರ್ಯನಿರ್ವಾಹಕ ಟ್ರಸ್ಟಿ ಮೇರಿ ಲೋಬೋ, ಬಾಲಾಜಿ ಆಟೋಟೆಕ್ ಎಸ್.ಕನಿಕದಾಸ್ ಅವರಿಗೆ ಕಾಯಕ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

12ನೇ ಶತಮಾನದಲ್ಲಿ ಬಸವಣ್ಣನವರು ಪರುಷ ಕಟ್ಟೆಯ ಮೇಲೆ ಕುಳಿತು ತಮ್ಮ ಶಿಷ್ಯರಿಗೆ, ಜನಸಾಮಾನ್ಯರಿಗೆ ವಚನಗಳನ್ನು ಬೋಧಿಸುತ್ತಿದ್ದ ಹಾಗೂ ಜನಸಾಮಾನ್ಯರ, ಬಡವರ ಕಷ್ಟಗಳನ್ನು ಆಲಿಸಿ ಪರಿಹಾರ ಸೂಚಿಸುತ್ತಿದ್ದ ಜಾಗವಾಗಿತ್ತು. ಪರುಷಕಟ್ಟೆಯು ಬಸವಕಲ್ಯಾಣದ ಉತ್ತರ ಭಾಗದಲ್ಲಿರುವ ಬಸವೇಶ್ವರ ದೇವಸ್ಥಾನದ ಸಮೀಪದಲ್ಲಿದ್ದು, ಬೀದರ್ ಜಿಲ್ಲೆಗೆ ಭೇಟಿ ನೀಡಿದಾಗ ಈ ಸ್ಥಳಕ್ಕೂ ಭೇಟಿ ನೀಡುವಂತೆ ಸಲಹೆ ನೀಡಿದರು.

ಸಮ ಸಮಾಜ ಐತಿಹಾಸಿಕ ಮೈಲಿಗಲ್ಲು: 12ನೇ ಶತಮಾನದ ಬಸವಣ್ಣ ನೇತೃತ್ವದ ವಚನ ಕ್ರಾಂತಿ, ಒಂದು ವ್ಯವಸ್ಥೆಯ ವಿರುದ್ಧದ ಚಳವಳಿಯಾಗಿತ್ತು. ಈ ಚಳವಳಿ ನಮ್ಮ ಜೀವನ ಪದ್ಧತಿ, ಕಾಯಕದ ಮಹತ್ವ, ಸಮ–ಸಮಾಜ ನಿರ್ಮಾಣದ ಕುರಿತು ಐತಿಹಾಸಿಕ ಮೈಲಿಗಲ್ಲು ಎಂದೇ ಪರಿಗಣಿಸಬಹುದು. ವಚನ ಚಳವಳಿಯ ನಂತರ ಗೌರವಯುತ ವೃತ್ತಿ ಜೀವನಕ್ಕೆ ಒತ್ತು ನೀಡಿದ ಪ್ರಸಂಗವನ್ನು ಉಲ್ಲೇಖಿಸಿದರಲ್ಲದೆ, ಪ್ರತಿಯೊಬ್ಬರು ಸ್ವಾಭಿಮಾನ ಬದುಕು ಕಟ್ಟಿಕೊಳ್ಳಲು ಈ ವಚನ ಚಳವಳಿಯ ಕೊಡುಗೆ ಅಪಾರ ಎಂದರು.


> "ಸ್ಲಂಗಳು ಈಗಿನ ವ್ಯವಸ್ಥೆಯ, ರಾಜಕೀಯ ಪಕ್ಷಗಳ ವೋಟ್ ಬ್ಯಾಂಕ್ ಆಗಿವೆಯೇ ಹೊರತು. ಇಲ್ಲಿನ ಜನರ ಬದುಕು ಮಾತ್ರ ಸುಧಾರಣೆಯಾಗಿಲ್ಲ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 79 ವರ್ಷಗಳ ಕಳೆದರೂ ಇಲ್ಲಿನ ಜನರ ಜೀವನ ಮಟ್ಟ ಸುಧಾರಿಸಿಲ್ಲ. ಗುಣಮಟ್ಟದ ಶಿಕ್ಷಣ, ಆರೋಗ್ಯ, ಮೂಲ ಸೌಕರ್ಯಗಳಿಂದ ವಂಚಿತರಾಗುತ್ತಿದ್ದಾರೆ. ಇಂತಹ ವರ್ಗದವರನ್ನ ಗುರುತಿಸಿ, ನಮ್ಮ ಸಂಸ್ಥೆ ವತಿಯಿಂದ ಚಿಕಿತ್ಸೆ, ಆರೋಗ್ಯ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.
>
> –ಮೇರಿ ಲೋಬೊ,
> ಕಾಯಕಶ್ರೀ ಪ್ರಶಸ್ತಿ ಪುರುಸ್ಕೃತರು

'ಕಾಯಕ ಶ್ರೀ' ಪ್ರಶಸ್ತಿ ಪ್ರದಾನ: ಈ ವೇಳೆ ಶಿವಲಿಂಗಮ್ಮ, ಗೊ.ರು.ಪರಮೇಶ್ವರಪ್ಪ, ಗೊರುಚ ಹಾಗೂ ಗೊಂಡೇದಹಳ್ಳಿ ಪಾರ್ವತಮ್ಮ ರೇವಣ್ಣ ದತ್ತಿ ಹೆಸರಿನಲ್ಲಿ ಕೊಡಮಾಡುವ 'ಕಾಯಕ ಶ್ರೀ' ಪ್ರಶಸ್ತಿಯನ್ನು ಸ್ನೇಹಬಿಂದು ಚಾರಿಟಬಲ್ ಟ್ರಸ್ಟ್ ಕಾರ್ಯ ನಿರ್ವಾಹಕ ಟ್ರಸ್ಟಿ ಮೇರಿ ಲೋಬೋ ಹಾಗೂ ಜಿ.ಪಿ. ಚಂದ್ರಧರ, ಜಿ.ಪಿ.ಸತೀಶ್, ಡಾ.ಮನೋಹ್ ಕುಮಾರ್, ಜಿ.ಆರ್.ರಾಜಶೇಖರಪ್ಪ, ಜಿ.ಆರ್.ರವಿರಾಜ್ ದತ್ತಿ ಹೆಸರಿನಲ್ಲಿ ಕೊಡಮಾಡುವ ಮೈಸೂರಿನ ಬಾಲಾಜಿ ಆಟೋಟೆಕ್ ಎಸ್.ಕನಿಕದಾಸ್ ಅವರಿಗೆ 'ಕಾಯಕಶ್ರೀ' ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು. ವೇದಿಕೆಯಲ್ಲಿ ಕುಂದೂರು ಮಠದ ಡಾ.ಶರತ್‌ಚಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ ಅಧ್ಯಕ್ಷ ಡಾ.ಜಯಪ್ಪ ಹೊನ್ನಾಳಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶೋಭಾರಾಣಿ ಜೈಪ್ರಕಾಶ್, ಕಾರ್ಯದರ್ಶಿ ನಂದೀಶ್ವರ್, ಸಂಚಾಲಕ ಲೋಕೇಶಪ್ಪ, ಗೀತಾ ಈಶ್ವರ್ ಉಪಸ್ಥಿತರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು, ಮೇ 19– ಮೇಗಳಾಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾಮಗಾರಿ ಕೆಲಸದ ನಿಮಿತ್ತ ಮೇ 21ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಇನಾಂ ಉತ್ತನಹಳ್ಳಿ, ಎಂ.ಸಿ.ಹುಂಡಿ, ಎಂ.ಜಿ.ಹುಂಡಿ, ಕೀಳನಪುರ, ಮೇಗಳಾಪುರ, ದುದ್ದಗೆರೆ, ಮಾಧವಗೆರೆ, ಮಾದೇವಿ ಕಾಲೋನಿ, ಪಿ.ಜಿ ಹುಂಡಿ, ಚಟ್ಟನಹಳ್ಳಿ, ಚಟ್ಟನಹಳ್ಳಿ ಪಾಳ್ಯ, ಹೊಸಹಳ್ಳಿ, ಕುಪ್ಪೇಗಾಲ, ಸಿದ್ದರಾಮನಹುಂಡಿ, ಯಡಕೊಳ, ರಂಗನಾಥಪುರ, ಶ್ರೀನಿವಾಸಪುರ, ಕಡವೆಕಟ್ಟೆಹುಂಡಿ, ರಾಜಶ್ರೀ ಇಂಡಸ್ಟ್ರೀಸ್, ಜಾಗ್ವಾರ್ ಸಿಮೆಂಟ್, ಶಿವಶಂಕರ ಪೋಲ್ ಫ್ಯಾಕ್ಟರಿ, ಸುತ್ತ–ಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಎ.ಎಂ. ಸತೀಶ್ ಅವರ ಮಾರ್ಗದರ್ಶನದಲ್ಲಿ ಸಾಯಿ ಚಕಿತ್ ಎಂ.ಆರ್ ಅವರು ಜೀವ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಶೇ.47ರಷ್ಟು ಸಂಸದರ ವಿರುದ್ಧ ಕ್ರಿಮಿನಲ್ ಕೇಸ್: ಆತಂಕಕಾರಿ

ರಾಜ್ಯ ಮಟ್ಟದ ವಿಚಾರ ಮಂಥನ ಕಾರ್ಯಕ್ರಮದಲ್ಲಿ ನಾಡೋಜ ಡಾ.ವೂಡೇ ಕೃಷ್ಣ ಕಳವಳ

ಮಂಡ್ಯ, ಮೇ 19– ಸಾರ್ವಜನಿಕ ಜೀವನದಲ್ಲಿ ಮೌಲ್ಯಗಳು ಕುಸಿದು ಹೋಗಿವೆ. ಲೋಕಸಭೆಯಲ್ಲಿರುವ ಒಟ್ಟು ಸದಸ್ಯರ ಪೈಕಿ ಶೇ.47ರಷ್ಟು ಸಂಸದರು ಒಂದಲ್ಲಾ ಒಂದು ಕ್ರಿಮಿನಲ್ ಕೇಸ್ ಎದುರಿಸುತ್ತಿರುವುದು ಆತಂಕಕಾರಿ ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ.ಕೃಷ್ಣ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಪರಿಸರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ, ರಾಷ್ಟ್ರೀಯ ಸೇವಾ ಯೋಜನೆ ಕೃಷಿ ಮಹಾವಿದ್ಯಾಲಯ, ವಿ.ಸಿ.ಫಾರಂ, ಜಿಲ್ಲಾ ಯುವ ಪರಿಷತ್‌ನಿಂದ ನಡೆದ ಯುವ ಮನಸ್ಸುಗಳಿಗೆ ಗಾಂಧಿ ರಾಜ್ಯ ಮಟ್ಟದ ವಿಚಾರ ಮಂಥನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹಿಂಸೆ, ಅರಾಜಕತೆ, ಭ್ರಷ್ಟಾಚಾರ ತಾಂಡವಾಡುತ್ತಿರುವ ಪ್ರಸ್ತುತ ದಿನಗಳಲ್ಲಿ ಜಗತ್ತಿಗೆ ಅಹಿಂಸೆ, ವಿಶ್ವ ಭ್ರಾತೃತ್ವ, ಗ್ರಾಮ ಸ್ವರಾಜ್ಯ, ಸಮಾನತೆ, ಸರಳತೆಯ ಪಾಠ ಹೇಳಿಕೊಟ್ಟ ಮಹಾತ್ಮ ಗಾಂಧೀಜಿ ಇಂದಿಗೂ ಪ್ರಸ್ತುತ ಎಂದು ತಿಳಿಸಿದರು.

ಸಮಾಜ, ಸಾಮಾಜಿಕ, ನೈತಿಕ ಸ್ವಾತಂತ್ರ್ಯ ಹಾಗೂ ಗಾಂಧೀಜಿ ಅವರ ಜೀವನ ಸಂದೇಶವನ್ನು ವಿವೇಚನಾತ್ಮಕವಾಗಿ ಚಿಂತಿಸಿದಲ್ಲಿ ಮೂಲಭೂತವಾದಿಗಳ, ಕೋಮುವಾದಿಗಳ ವಿರುದ್ಧ ಹೋರಾಟ ನಡೆಸಬಹುದು. ಬಹುತ್ವದ ಚಿಂತನೆ ನಮ್ಮ ಶಕ್ತಿಯಾಗಿದೆ. ಗಾಂಧೀ ಪ್ರಪಂಚಕ್ಕೆ ಬೆಳಕಾದವರು. ರಾಜಕಾರಣ, ಸಾರ್ವಜನಿಕ ಜೀವನದಲ್ಲಿ ಅಧಿಕಾರ ಹಿಡಿಯುವುದು ದೊಡ್ಡ ಕೆಲಸವಾಗಿದೆ. ಸಮಾಜ ಓಟಿನ ಮೇಲೆ ನಿಂತಿದೆ. ಓಟು ಪಡೆಯಲು ವಾಮಮಾರ್ಗ ಅನುಸರಿಸುತ್ತಿರುವುದರ ಬಗ್ಗೆ ಸಮಾಜದಲ್ಲಿ ಕಾಣುತ್ತಿದ್ದೇವೆ. ಇದರ ಬಗ್ಗೆ ಚಿಂತಿಸಬೇಕಾಗಿದೆ ಎಂದು ತಿಳಿಸಿದರು.



ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ.ಕೃಷ್ಣ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಯಾವ ನಾಯಕರಿಗೂ ರಾಷ್ಟ್ರದ ಹಿತ ಬೇಕಿಲ್ಲ. ಪಕ್ಷದಲ್ಲಿ ದೊಡ್ಡ ನಾಯಕರು ಇರಬಹುದು. ಗೆಲ್ಲುವ ಜ್ಞಾನ ಇರಬಹುದು. ಅವರು ಅಧಿಕಾರ ಹೇಗೆ ಹಿಡಿಯಬೇಕು ಎನ್ನುವ ದೃಷ್ಟಿಯಲ್ಲಿ ಸಮಾಜದಲ್ಲಿ ಕೆಲಸ ಮಾಡುತ್ತಾರೆ. ಆದರೆ ಸಮಾಜ ಜೋಡಿಸುವ ಕೆಲಸ ಮಾಡಬೇಕಾಗಿದೆ ಎಂದು ಹೇಳಿದರು. ಅನ್ಯಾಯದ ವಿರುದ್ಧ ಎದ್ದು ನಿಲ್ಲುವುದೇ ನಿಜವಾದ ಗಾಂಧಿ ತತ್ವ, ಗಾಂಧೀಜಿಯವರ ಜೀವನ ಚರಿತ್ರೆ ಆತ್ಮಕಥೆ ಬರೆದು ಪ್ರಕಟಗೊಂಡು ನೂರು ವರ್ಷ ತುಂಬಿದೆ. ಇದನ್ನು ಓದಿ ಲಕ್ಷಾಂತರ ಜನರಿಗೆ ಯುವಕರಿಗೆ, ಭಾರತೀಯರಿಗೆ ಸ್ಫೂರ್ತಿಯಾಗಿದೆ. ಪ್ರಪಂಚದಾದ್ಯಂತ ಜನರು ಗಾಂಧೀಜಿಯವರ ಆತ್ಮಕಥೆ ಓದಿ ಅದರಿಂದ ಪ್ರಭಾವಿತರಾಗಿದ್ದಾರೆ. ವಿದ್ಯಾರ್ಥಿಗಳು ನೀವು ಓದಬೇಕು ಎಂದು ತಿಳಿಸಿದರು.

ವೇದಿಕೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ವಿ.ಧರಣೇಂದ್ರಯ್ಯ, ಕವಿ ಕೆ.ಪಿ.ಮೃತ್ಯುಂಜಯ, ಅಕ್ಕ ಮಹಾದೇವಿ ವಿವಿ ವಿಶೇಷ ಅಧಿಕಾರಿ ಡಾ.ವಿಷ್ಣು ಎಂ.ಶಿಂಧೆ ಸೇರಿದಂತೆ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.

> ಯುವಕ ಸಂಘಗಳು ಹಾಗೂ ಯುವತಿ ಮಂಡಳಿಗಳು ಭಾವೈಕ್ಯತೆ ಮೂಡಿಸುವ ಕೆಲಸ ಮಾಡುತ್ತಿದ್ದವು. ಇತ್ತೀಚಿನ ದಿನಗಳಲ್ಲಿ ಜಾತಿ ಹಾಗೂ ಅಭಿಮಾನಿಗಳ ಹೆಸರಿನಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಯುವಕ ಸಂಘಗಳು ಸ್ಥಾಪನೆಯಾಗಿ ಯುವಕರು ಪಲ್ಲಟಗೊಳ್ಳುವ ಸಂದರ್ಭದಲ್ಲಿ ಯುವ ಮನಸ್ಸು ಗಾಂಧಿ ವಿಚಾರವಾದವು ಅಗತ್ಯ ಮತ್ತು ಅನಿವಾರ್ಯತೆ ಇದ್ದು ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ.
> – ಮಂಗಲ ಎಂ.ಯೋಗೀಶ್, ಪರಿಸರ ರೂರಲ್ ಡೆವಲಪ್ ಮೆಂಟ್ ಸೊಸೈಟಿ ಅಧ್ಯಕ್ಷ.

ದೇಣಿಗೆ ಕೇಳುವ ನೆಪದಲ್ಲಿ ಕಳ್ಳತನ: ಕೈಚಳಕ ಸಿಸಿ ಕ್ಯಾಮರಾದಲ್ಲಿ ಸೆರೆ

ಮಂಡ್ಯ, ಮೇ 19– ದೇಣಿಗೆ ಕೇಳುವ ನೆಪದಲ್ಲಿ ವಿಶೇಷಚೇತನರಂತೆ ನಟಿಸಿ ಮೊಬೈಲ್, ಪರ್ಸ್ ಇನ್ನಿತರೆ ವಸ್ತುಗಳನ್ನು ಕಳ್ಳತನ ಮಾಡುವ ಗ್ಯಾಂಗ್ ಪತ್ತೆಯಾಗಿದ್ದು, ಇವರ ಕೈಚಳಕ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಮಂಡ್ಯ, ಮೈಸೂರಿನಲ್ಲಿ ಈ ರೀತಿಯ ಐನಾತಿ ಗ್ಯಾಂಗ್ ಸಕ್ರೀಯವಾಗಿರುವುದು ತಿಳಿದು ಬಂದಿದ್ದು, ಮಂಡ್ಯ ನಗರದ ವಿ.ವಿ.ರಸ್ತೆಯಲ್ಲಿರುವ ಪ್ರಧಾನ ಅಂಚೆ ಕಚೇರಿ ಹಾಗೂ ಮಂಡ್ಯ ತಾಲೂಕಿನ ಕಾಳೇನಹಳ್ಳಿ ಗ್ರಾಮದ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ ಕಳ್ಳತನ ಮಾಡಿರುವ ದೃಶ್ಯ ಸಿಸಿ ಕ್ಯಾಮರಾ ಮೂಲಕ ಪತ್ತೆಯಾಗಿದೆ.

ವಿವರ: ಬಡ, ಅನಾಥ ಮಕ್ಕಳಿಗೆ ಆರ್ಥಿಕ ಸಹಾಯ ನೀಡಿ ಅಥವಾ ಇನ್ನಿತರೆ ಆರ್ಥಿಕ ಸಹಾಯದ ಮೊರೆ ಕೋರಿ ಕಿವುಡರು, ಮೂಗರು, ಕುರುಡರು ಅಥವಾ ವಿಶೇಷಚೇತನರ ರೀತಿ ಬ್ಯಾಂಕ್, ಅಂಚೆ ಕಚೇರಿ, ಜುವೆಲ್ಲರಿ ಶಾಪ್, ಮೊಬೈಲ್ ಅಂಗಡಿ ಹಾಗೂ ಜನನಿಬಿಡ ಕೇಂದ್ರಗಳಿಗೆ ಭೇಟಿ ನೀಡುವ ಈ ಗ್ಯಾಂಗ್ ಜನರ ಗಮನ ಬೇರೆಡೆಗೆ ಸೆಳೆದು ಮೊಬೈಲ್ ಅಥವಾ ಇನ್ನಿತರೆ ಬೆಲೆ ಬಾಳುವ ವಸ್ತುಗಳನ್ನು ದೋಚುತ್ತಿರುವುದು ಕಂಡು ಬಂದಿದೆ.

ದೇಣಿಗೆ ಕೇಳುವ ನೆಪದಲ್ಲಿ ಪತ್ರ ಹಿಡಿದು ಬರುವ ಕಳ್ಳರು ಮೊಬೈಲ್ ಕದ್ದು ಹೊರಗೆ ಬರುತ್ತಿದ್ದಂತೆ ಸಹಚರನ ಬೈಕ್‌ನಲ್ಲಿ ಪರಾರಿಯಾಗುವ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕಾಳೇನಹಳ್ಳಿಯ ಕರ್ನಾಟಕ ಗ್ರಾಮೀಣ ಬ್ಯಾಂಕ್‌ಗೆ ಬರುವ ಕಳ್ಳನೊಬ್ಬ ಜನರು ಕೂರುವ ಕೌಂಟರ್ ಬಳಿಯ ಚೇರ್ ಮೇಲೆ ಕುಳಿತುಕೊಂಡು ಅಲ್ಲಿ ಬಂದ ಜನರ ಬಳಿ ದೇಣಿಗೆ ಕೇಳುವಂತೆ ನಟಿಸಿ, ಪೇಪರ್ ಅಡ್ಡ ಇಟ್ಟು ಟೇಬಲ್ ಮೇಲಿದ್ದ ಮೊಬೈಲ್ ಎಗರಿಸಿದ್ದಾನೆ. ಇದೇ ರೀತಿಯ ಕೃತ್ಯ ಮಂಡ್ಯ ನಗರದ ಪ್ರಧಾನ ಅಂಚೆ ಕಚೇರಿಯಲ್ಲೂ ನಡೆದಿದೆ.

ಇದೇ ರೀತಿಯ ಘಟನೆ ಮೈಸೂರಿನ ಚಿನ್ನದಂಗಡಿಯೊಂದರಲ್ಲಿ ನಡೆದಿದೆ ಎನ್ನಲಾಗಿದ್ದು, ಮಂಡ್ಯ ಪಶ್ಚಿಮ ಮತ್ತು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಕುಖ್ಯಾತ ಗ್ಯಾಂಗ್‌ನ ಕಳ್ಳರನ್ನು ಬಂಧಿಸಲು ಬಲೆ ಬೀಸಿದ್ದಾರೆ.

ವೈಯಕ್ತಿಕವಾಗಿ, ಜಾನುವಾರುಗಳಿಗೆ ವಿಮೆ ಮಾಡಿಸಿ

ಮನ್‌ಮುಲ್ ನಿರ್ದೇಶಕ ಡಾಲು ರವಿ

ಕೆ.ಆರ್.ಪೇಟೆ, ಮೇ 19– ಹಾಲು ಉತ್ಪಾದಕರು ಕಡ್ಡಾಯವಾಗಿ ವೈಯುಕ್ತಿಕವಾಗಿ ಹಾಗೂ ತಮ್ಮ ಜಾನುವಾರುಗಳಿಗೆ ವಿಮಾ ಪಾಲಿಸಿ ಮಾಡಿಸುವ ಮೂಲಕ ಮುಂದೆ ಆಗಬಹುದಾದ ಆರ್ಥಿಕ ತೊಂದರೆಗಳಿಂದ ಹೊರಬಂದು ನೆಮ್ಮದಿಯ ಜೀವನ ನಡೆಸುವಂತೆ ಮನ್‌ಮುಲ್ ನಿರ್ದೇಶಕ ಡಾಲು ರವಿ ಕಿವಿಮಾತು ಹೇಳಿದರು.

ಪಟ್ಟಣದ ಮೈಮುಲ್ ಉಪ ಕಚೇರಿಯಲ್ಲಿ ಮರಣ ಹೊಂದಿದ ರಾಸುಗಳಿಗೆ ಒಕ್ಕೂಟದಿಂದ ನೀಡುವ ಅನುದಾನದ ಚೆಕ್, ಆಕಸ್ಮಿಕವಾಗಿ ಮರಣ ಹೊಂದಿದ ಹಾಲು ಉತ್ಪಾದಕರಿಗೆ ಚೆಕ್, ಸಂಘದ ನೂತನ ಕಟ್ಟಡಕ್ಕೆ ಅನುದಾನದ ಚೆಕ್ ವಿತರಿಸಿ ಅವರು ಮಾತನಾಡಿದರು.

ಗ್ರಾಮದಲ್ಲಿ ಹಾಲಿನ ಡೇರಿ ಕಟ್ಟಡ ನಿರ್ಮಿಸಿದರೇ ಸಾಕು ಎಂಬ ಭಾವನೆ ಇರುತ್ತದೆ. ಅದನ್ನು ಉಳಿಸಿ ಬೆಳೆಸುವ ಕರ್ತವ್ಯ ಪ್ರತಿಯೊಬ್ಬರ ಹಕ್ಕಾಗಿರುತ್ತದೆ. ಡೈರಿ ಗ್ರಾಮದ ಆಸ್ತಿ ಹಾಗೂ ಶಕ್ತಿಯಾಗಿದೆ. ಸಂಘಕ್ಕೆ ಗುಣಮಟ್ಟದ ಹಾಲನ್ನು ಸರಬರಾಜು ಮಾಡಬೇಕು. ಸಂಘದಲ್ಲಿ ಯಾವುದೇ ಕಾರಣಕ್ಕೂ ರಾಜಕಾರಣ ಬೆರಸಬಾರದು. ಒಂದು ವೇಳೆ ರಾಜಕೀಯ ಬೆರಸಿದರೆ ಸಂಘವು ಹಾಳಾಗುವುದರಲ್ಲಿ ಸಂಶಯವಿಲ್ಲ. ದೇಶದ ಆರ್ಥಿಕ ಪ್ರಗತಿಯಲ್ಲಿ ಹೈನುಗಾರಿಕೆ ಮುಂಚೂಣಿಯಲ್ಲಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಜೊತೆಗೆ ಹೈನುಗಾರಿಕೆಯನ್ನು ಮುಖ್ಯ ಉಪ ಕಸುಬಾಗಿಸಿಕೊಂಡು ಅದರಲ್ಲೂ ಮಹಿಳೆಯರು, ಯುವಕರು, ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿರುವುದರಿಂದ ನಮ್ಮ ಜಿಲ್ಲೆಯಲ್ಲಿ ಅತಿ ಹೆಚ್ಚು ಹಾಲು ಉತ್ಪಾದನೆಯಾಗುತ್ತಿದೆ. ಆದ್ದರಿಂದ ಸಂಘವನ್ನು ಮುಂದಿನ ಪೀಳಿಗೆಗೆ ಉಳಿಸಲು ಬೆಳೆಸುವ ಕೆಲಸವನ್ನು ನಾವೆಲ್ಲರೂ ಮಾಡಬೇಕೆಂದು ಸಲಹೆ ನೀಡಿದರು.

ಮನ್‌ಮುಲ್ ನಿರ್ದೇಶಕ ಎಂ.ಬಿ.ಹರೀಶ್ ಮಾತನಾಡಿ, ಸಂಘದಲ್ಲಿ ಯಾವುದೇ ಕಾರಣಕ್ಕೂ ರಾಜಕಾರಣ ಬೆರಸಬೇಡಿ. ಗುಣಮಟ್ಟದ ಹಾಲನ್ನು ಸರಬರಾಜು ಮಾಡುವ ಮೂಲಕ ವೈಯುಕ್ತಿಕ ಹಾಗೂ ಸಂಘದ ಅಭಿವೃದ್ಧಿ ಕಡೆ ಗಮನ ಹರಿಸಿ. ಮಂಡ್ಯ ಜಿಲ್ಲಾ ಹಾಲು ಒಕ್ಕೂಟದಿಂದ ಸಿಗುವ ಸೌಲಭ್ಯಗಳನ್ನು ಹಾಲು ಉತ್ಪಾದಕರು ಸದುಪಯೋಗಪಡಿಸಿಕೊಳ್ಳುವಂತೆ ಮನವಿ ಮಾಡಿದರು.

ಈ ವೇಳೆ ಮನ್‌ಮುಲ್ ಉಪ ವ್ಯವಸ್ಥಾಪಕ ಪ್ರಸಾದ್, ಮಧು, ಸಂಧ್ಯಾ, ಜಗದೀಶ್, ಶಶಿಕುಮಾರ್ ಇತರರಿದ್ದರು.



ಮನ್‌ಮುಲ್ ನಿರ್ದೇಶಕ ಡಾಲು ರವಿ ಚೆಕ್‌ಗಳನ್ನು ವಿತರಿಸಿದರು.

ಪತ್ರ ಬರೆದಿಟ್ಟು ಅಪ್ರಾಪ್ತ ಸಹೋದರಿಯರು ನಾಪತ್ತೆ

ಶ್ರೀರಂಗಪಟ್ಟಣ, ಮೇ 19– ತಾಯಿ ಬೈದಿದ್ದಕ್ಕೆ ಮನನೊಂದ ಅಪ್ರಾಪ್ತ ಸಹೋದರಿಯರಿಬ್ಬರು ಪತ್ರ ಬರೆದಿಟ್ಟು ನಾಪತ್ತೆಯಾಗಿರುವ ಘಟನೆ ತಾಲೂಕಿನ ಕಾಳೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಾಮಚಂದ್ರ ಎಂಬುವರ ಮಕ್ಕಳಾದ ಸುಜಾತ (16) ಹಾಗೂ ರುಕ್ಮಿಣಿ (14) ನಾಪತ್ತೆಯಾದ ಮಕ್ಕಳಾಗಿದ್ದು, ತಾಯಿ ಬೈದಿದ್ದಕ್ಕೆ ಮನೆ ಬಿಟ್ಟು ಹೋಗಿದ್ದಾರೆಂದು ತಿಳಿದು ಬಂದಿದೆ.

ಪತ್ರದಲ್ಲಿ 'ಅಮ್ಮ–ಅಪ್ಪ ಸಾರಿ ನಿಮ್ಮ ಕಣ್ಣು ಮುಂದೆ ಸಾಯೋಕೆ ಆಗಲ್ಲ ಅಂತಾ ನಾವು ದೂರ ಹೋಗಿ ಸಾಯುತ್ತಿದ್ದೇವೆ ಸಾರಿ' ಎಂದು ಬರೆದಿದ್ದಾರೆ. ಈ ಪತ್ರ ಆಧರಿಸಿ ನಾಪತ್ತೆ ಯಾದ ಮಕ್ಕಳ ಶೋಧ'ಕ್ಕೆ ಪೋಷಕರು ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಸಿಎಸ್ಟಿ ಕಪ್ ಸೀಜನ್-2 ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ

ಶ್ರೀರಂಗಪಟ್ಟಣದ ಮಜ್ಜಿಗೆಪುರ ತಂಡ ಚಾಂಪಿಯನ್

ಪಾಂಡವಪುರ, ಮೇ 19– ತಾಲೂಕಿನ ಬನ್ನಂಗಾಡಿ ಗ್ರಾಮದಲ್ಲಿ ಫ್ರೆಂಡ್ಸ್ ಕ್ರಿಕೆಟರ್ಸ್ ವತಿಯಿಂದ ನಡೆದ ಸಿಎಸ್ಟಿ ಕಪ್ ಸೀಜನ್ –2 ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಚಾಂಪಿಯನ್ ಆದ ಶ್ರೀರಂಗಪಟ್ಟಣ ತಾಲೂಕಿನ ಮಜ್ಜಿಗೆಪುರ ತಂಡ ಆಕರ್ಷಕ ಟ್ರೋಫಿಯೊಂದಿಗೆ 33 ಸಾವಿರ ರೂ. ಬಹುಮಾನ ತನ್ನದಾಗಿಸಿಕೊಂಡಿತು.

ಎರಡನೇ ದಿನದ ಕ್ರಿಕೆಟ್ ಪಂದ್ಯಾವಳಿಗೆ ಜೆಡಿಎಸ್ ಯುವ ನಾಯಕ ಸಿ.ಪಿ.ಶಿವರಾಜ್ ಪುಟ್ಟರಾಜು ಬ್ಯಾಟ್ ಬೀಸುವ ಮೂಲಕ ಚಾಲನೆ ನೀಡಿದರು. ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಅತಿಥೇಯ ಬನ್ನಂಗಾಡಿ ಮತ್ತು ಶ್ರೀರಂಗಪಟ್ಟಣ ತಾಲೂಕಿನ ಮಜ್ಜಿಗೆಪುರ ಗ್ರಾಮಗಳ ತಂಡಗಳು ಎದುರಾದವು. ಈ ವೇಳೆ ಮಜ್ಜಿಗೆಪುರ ತಂಡ ಜಯಗಳಿಸುವ ಮೂಲಕ ಚಾಂಪಿಯನ್ ಆಗಿ ಹೊರಹೊಮ್ಮಿದರೇ, ಅತಿಥೇಯ ಬನ್ನಂಗಾಡಿ ತಂಡ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟು ಆಕರ್ಷಕ ಟ್ರೋಫಿಯೊಂದಿಗೆ 22 ಸಾವಿರ ರೂ. ಪಡೆದರೇ, ಮೈಸೂರಿನ ಜಾಲಿಬಾಯ್ಸ್ ತಂಡ ತೃತೀಯ ಸ್ಥಾನ ಪಡೆಯಿತು.



ಬನ್ನಂಗಾಡಿ ಗ್ರಾಮದಲ್ಲಿ ನಡೆದ ಸಿಎಸ್ಟಿ ಕಪ್ ಸೀಜನ್ –2 ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಸಿ.ಪಿ.ಶಿವರಾಜು ಅವರು ಕ್ರೀಡಾಪಟುಗಳಿಗೆ ಶುಭ ಕೋರಿದರು.

ಜೆಡಿಎಸ್ ಯುವ ಮುಖಂಡ ಸಿ.ಪಿ.ಶಿವರಾಜು ಪುಟ್ಟರಾಜು ಮಾತನಾಡಿ, ಬನ್ನಂಗಾಡಿ ಗ್ರಾಮದ ಯುವಕರು ಸಿಎಸ್ಟಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸುವ ಮೂಲಕ ಕ್ರೀಡೆಗೆ ಉತ್ತೇಜನ ನೀಡುತ್ತಿದ್ದಾರೆ. ಯುವ ಸಮುದಾಯ ಹೆಚ್ಚಾಗಿ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಕ್ರೀಡಾಕೂಟಗಳಲ್ಲಿ ಕ್ರೀಡಾಪಟುಗಳು ಕ್ರೀಡಾಸ್ಫೂರ್ತಿ ಮೆರೆಯಬೇಕು. ಕ್ರೀಡೆಯಲ್ಲಿ ಸೋಲು ಗೆಲುವು ಸಾಮಾನ್ಯ ಎರಡನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಕ್ರೀಡೆಯಲ್ಲಿ ಭಾಗವಹಿಸುವ ಮನಸ್ಥಿತಿ ಬೆಳೆಸಿಕೊಳ್ಳಬೇಕು ಎಂದರು.

ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಅಲ್ಪಳ್ಳಿ ಗೋವಿಂದಯ್ಯ, ಬಿ.ಎಸ್.ಶ್ರೀನಿವಾಸ್, ಬಿ.ಹೆಚ್.ಪ್ರಸನ್ನ, ಮಹೇಂದ್ರ, ಬಿ.ಪಿ.ಸಂತೋಷ, ಆಕಾಶ್, ರಕ್ಷಿತ್, ಸಚ್ಚಿನ್, ಗೌತಮ್, ಪವನ್ ಸೇರಿದಂತೆ ಹಲವರಿದ್ದರು.

ಮೂರನೇ ಪುಟದಿಂದ

ಕೋಟಿಯಲ್ಲಿ 'ಪುರಭವನ' ಪುನರುಜ್ಜೀವನ

ಘಟಾನುಘಟಿಗಳು ಭಾಗಿ: ಪುರಭವನದ ಆವರಣದಲ್ಲಿ ಈ ಹಿಂದೆ ನಡೆದ ಕಾರ್ಯಕ್ರಮ, ಸಮಾವೇಶದಲ್ಲಿ ಘಟಾನುಘಟಿ ನಾಯಕರು ಪಾಲ್ಗೊಂಡಿದ್ದು, ಪುರಭವನದ ಇತಿಹಾಸದಲ್ಲಿ ದಾಖಲಾಗಿದೆ. ಅದರಲ್ಲಿ ಮಾಜಿ ಪ್ರಧಾನಿಗಳಾದ ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿರುವುದು ಗಮನಾರ್ಹ.

ಈ ಹಿಂದೆಯೇ ಪ್ರಯತ್ನ: 2011ರ ಏ.29ರಂದು ಮೈಸೂರು ಮಹಾನಗರ ಪಾಲಿಕೆ 17.66 ಕೋಟಿ ರೂ. ವೆಚ್ಚದಲ್ಲಿ ಪುರಭವನ ನವೀಕರಣ ಕಾಮಗಾರಿ ನಡೆಸಲು ಆಂಧ್ರ ಮೂಲದ ಕಂಪನಿಯೊಂದಕ್ಕೆ ಟೆಂಡರ್ ನೀಡಿತ್ತು. 2012ರ ಏ.28ರೊಳಗೆ ಕಾಮಗಾರಿ ಪೂರ್ಣಗೊಳಿಸುವ ಗುರಿ ಇತ್ತು. ಆದರೆ ಶೇ.30 ಕೆಲಸ ಮಾಡಿದ್ದ ಆ ಸಂಸ್ಥೆ ಕೆಲ ಕಾರಣದಿಂದ ಕಾಮಗಾರಿ ಸ್ಥಗಿತಗೊಳಿಸಿ ಪಲಾಯನಗೈದಿತ್ತು ಆ ಸಂಸ್ಥೆಯನ್ನು ಮೈಸೂರು ಮಹಾನಗರ ಪಾಲಿಕೆ ಕಪ್ಪುಪಟ್ಟಿಗೆ ಸೇರಿಸಿದೆ.

ನ್ಯಾಯಾಲಯದಲ್ಲಿ ಪ್ರಕರಣ: ಕಪ್ಪುಪಟ್ಟಿಗೆ ಸೇರಿಸಿದ್ದ ಹಿನ್ನೆಲೆಯಲ್ಲಿ ಗುತ್ತಿಗೆದಾರ ಟೌನ್‌ಹಾಲ್ ಕಾಮಗಾರಿ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣ ಇಂದಿಗೂ ಇತ್ಯರ್ಥವಾಗದ ಕಾರಣ ಪುರಭವನದ ಕಟ್ಟಡ ದುರಸ್ತಿ ಸಾಧ್ಯವಾಗಿರಲಿಲ್ಲ. ಆದರೆ, ಇದೀಗ ಕಟ್ಟಡವನ್ನು ಸಂರಕ್ಷಿಸಲೇಬೇಕಾದ ಅನಿವಾರ್ಯತೆ ಹಿನ್ನೆಲೆಯಲ್ಲಿ ಪಾಲಿಕೆ ಕ್ರಮ ಕೈಗೊಂಡಿರುವುದು ಸಾರ್ವಜನಿಕ ವಲಯದಲ್ಲಿ ಪ್ರಶಂಸೆ ವ್ಯಕ್ತವಾಗಿದೆ.

ಪಿಆರ್‌ನಿಂದ ವಿಶ್ವ ಗುರು ಆಗಲು ಸಾಧ್ಯವಿಲ್ಲ

ಪ್ರಧಾನಿ, ಜನ ಸಾಮಾನ್ಯರ ಮೇಲೆ ಹೊರೆಯನ್ನು ವರ್ಗಾಯಿಸಿದ್ದಾರೆ ಎಂದು ಟೀಕಿಸಿದ್ದಾರೆ. ರಷ್ಯಾದಿಂದ ತೈಲ ಖರೀದಿಸಲು ಪ್ರಧಾನಿ ಮೋದಿ ಅಮೆರಿಕವನ್ನು ಬೇಡಿಕೊಂಡಿದ್ದಾರೆ. ಆ ಮೂಲಕ ಭಾರತೀಯರ ಗೌರವಕ್ಕೆ ಧಕ್ಕೆ ತರುತ್ತಿದ್ದಾರೆ. ಹಿಂದಿನ ಯಾವ ಸರ್ಕಾರವು ಈ ಮಟ್ಟಕ್ಕೆ ಇಳಿದಿರಲಿಲ್ಲ. ಹಾಗೊಂದು ವೇಳೆ ತೈಲ ಖರೀದಿ ಮಾಡುತ್ತಿದ್ದರೆ ಈ ಹೊರೆಯನ್ನು ಜನರ ಮೇಲೆ ಏಕೆ ಹೊರಿಸಬೇಕು ಎಂದು ಪ್ರಶ್ನಿಸಿದ್ದಾರೆ. ನೈಜ ಪ್ರಶ್ನೆಗಳಿಂದ ಓಡಿ ಹೋಗಲು ಸಾಧ್ಯವಿಲ್ಲ. ನೀವು ಹೊಣೆ ಹೊತ್ತುಕೊಳ್ಳಬೇಕು. ಯಾವ ಮಾವಿನ ಹಣ್ಣುಗಳನ್ನು ತಿನ್ನುತ್ತೀರಿ , ಯಾವ ಟಾನಿಕ್ ಕುಡಿಯುತ್ತೀರಿ ಎಂದು ತಿಳಿದುಕೊಳ್ಳಲು ಜನಸಾಮಾನ್ಯರಿಗೆ ಆಸಕ್ತಿಯಿಲ್ಲ ಎಂದಿದ್ದಾರೆ.

ಈ ಬಿಕ್ಕಟ್ಟಿನ ಪರಿಸ್ಥಿತಿ ನಿಯಂತ್ರಿಸಲು ಕ್ರಮ ಕೈಗೊಂಡರೆ ಮಾತ್ರ ಪ್ರಧಾನ ಸೇವಕ ಎಂದೆನಿಸಿಕೊಳ್ಳಲು ಸಾಧ್ಯ ಇಲ್ಲದಿದ್ದರೆ ನೀವು ಪ್ರಚಾರಕ ಅಷ್ಟೇ ಎಂದು ಟೀಕಿಸಿದ್ದಾರೆ.

'3 ವರ್ಷಗಳ ಸಾಧನಾ ಸಮರ್ಪಣಾ'

ಮೋದಿಯವರು ಪ್ರಧಾನಿ ಆಗುವ ಮೊದಲು ದೇಶದಲ್ಲಿ ಡೀಸೆಲ್, ಪೆಟ್ರೋಲ್, ಚಿನ್ನದ ಬೆಲೆ ಎಷ್ಟಿತ್ತು. ಈಗ ಅದು ಆಕಾಶಕ್ಕೆ ಏರಿದೆ. ಟ್ರಂಪ್ ಬಾಲ ಹಿಡಿದು ಸುತ್ತುತ್ತಿದ್ದ ಮೋದಿಯವರೇ ಈ ಬೆಲೆ ಏರಿಕೆಗೆ ಕಾರಣ. ಮೋದಿ ದರ್ಬಾರಿನಲ್ಲಿ ಅಂಬಾನಿ ಮತ್ತು ಅದಾನಿ ಮಾತ್ರ ಲಾಭ ಮಾಡಿಕೊಂಡು ಈಗ ಇವರ ಆಸ್ತಿ 8 ಲಕ್ಷ ಕೋಟಿಗೆ ಏರಿಕೆಯಾಗಿದೆ. ಬಡವರು ಮತ್ತು ಮಧ್ಯಮ ವರ್ಗದವರ ಆದಾಯ ಮತ್ತು ಬದುಕು ನೆಲಕಚ್ಚಿದ್ದನ್ನು ವಿವರಿಸಿದರು.

ಮೋದಿ... ಮೋದಿ... ಎಂದು ಕುಣಿಯುತ್ತಿದ್ದ ಭಾರತದ ಬಡ ಜನರು ಮತ್ತು ಮಧ್ಯಮ ವರ್ಗದವರಿಗೆ ಭ್ರಮನಿರಸನವಾಗಿದೆ ಎಂದರು.

ತಲಾ ಆದಾಯದಲ್ಲಿ ಕನ್ನಡಿಗರು ಇಡೀ ದೇಶದಲ್ಲೇ ನಂಬರ್ ಒನ್ ಇದ್ದಾರೆ. ಇಡೀ ದೇಶದ ಜಿಎಸ್‌ಟಿಗೆ ನಮ್ಮ ಕೊಡುಗೆ ಅಪಾರ ಇದೆ. ದೇಶದ ತಲಾ ಆದಾಯಕ್ಕಿಂತ ರಾಜ್ಯದ ಆದಾಯ ಹೆಚ್ಚಾಗಿರುವ ರೀತಿಯಲ್ಲಿ ನಾವು ಪ್ರಗತಿ ಸಾಧಿಸಿದ್ದೇವೆ.

ನಾವು ನುಡಿದಂತೆ ನಡೆದು ಸಾಬೀತು ಪಡಿಸಿರುವುದರಿಂದ ಮತ್ತೆ 2028ರ ವಿಧಾನ ಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ಶತಸಿದ್ಧ. ಕುವೆಂಪು ಅವರ 'ಸರ್ವ ಜನಾಂಗದ ಶಾಂತಿಯ ತೋಟ' ಎನ್ನುವ ಆಶಯದ ನಾಡನ್ನು ಇನ್ನಷ್ಟು ಗಟ್ಟಿಯಾಗಿ ರೂಪಿಸುತ್ತೇವೆ. ಸಂವಿಧಾನಬದ್ಧ ಅಭಿವೃದ್ಧಿ ಮಾರ್ಗದಲ್ಲಿ ನಾಡನ್ನು ಮುನ್ನಡೆಸುತ್ತೇವೆ ಎಂದು ಭರವಸೆ ನೀಡಿದರು.

ನೀಟ್ ಪರೀಕ್ಷೆ ರದ್ದಾಗಿ 22 ಲಕ್ಷ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟ ಆಡಿ, ಹಲವು ವಿದ್ಯಾರ್ಥಿಗಳ ಆತ್ಮಹತ್ಯೆಗೆ ಮೋದಿ ಸರ್ಕಾರ ಕಾರಣ ಎಂದು ದೂರಿದರು. ಸಿಇಟಿ ಮಾದರಿಯಲ್ಲಿ ಪರೀಕ್ಷೆ ನಡೆಸಿ ಎನ್ನುವ ನಮ್ಮ ಸಲಹೆ ಯನ್ನು ತಿರಸ್ಕರಿಸಿ ನೀಟ್ ನಲ್ಲಿ ಅದ್ವಾನ ಮಾಡಿದ್ದಾರೆ. ವರ್ಷಕ್ಕೆ 2 ಕೋಟಿ ಉದ್ಯೋಗದ ಭರವಸೆ ನೀಡಿದ್ದ ಮೋದಿಯ ಅಚ್ಛೇ ದಿನ ಬರಲಿಲ್ಲ. ನೀಟ್ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಯದ ಮೋದಿ ಸರ್ಕಾರ, ರೈತರ ಆದಾಯವನ್ನೂ ದುಪ್ಪಟ್ಟು ಮಾಡಲಿಲ್ಲ. ಕಪ್ಪು ಹಣ ತರಲಿಲ್ಲ. ಹೀಗಾಗಿ ಬಿಜೆಪಿ–ಆರ್ ಎಸ್ ಎಸ್ ಸರ್ಕಾರ ಸಂಪೂರ್ಣ ವಿಫಲವಾಗಿ ದೇಶದ ಸಾಲ ವನ್ನು 220 ಲಕ್ಷ ಕೋಟಿಗೆ ಹೆಚ್ಚಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ನಾವು ನೆಮ್ಮದಿಯ ನಾಡು ಕಟ್ಟುವ ಸರ್ಕಾರ ಕೊಟ್ಟಿದ್ದೇವೆ. ಮೋದಿ ದೇಶದ ನೆಮ್ಮದಿ ಕಸಿಯುವ ಸರ್ಕಾರ ಕೊಟ್ಟಿದ್ದಾರೆ ಎಂದರು.

ತೀವ್ರ ಗಾಯಗೊಂಡಿದ್ದ ಜೈ ಮಾರ್ತಾಂಡ ಸಾವು

ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾದ್ದು. ಕಂಜನ್‌ನ ಚೂಪಾದ ದಂತದ ಬಲವಾದ ತಿವಿತದಿಂದ ಹೊಟ್ಟೆ, ಪಕ್ಕೆಲುಬು, ಕುತ್ತಿಗೆ, ಕಿಬ್ಬೊಟ್ಟೆ ಬಳಿ ಗಂಭೀರವಾಗಿ ಗಾಯಗೊಂಡಿದ್ದ ಜೈ ಮಾರ್ತಾಂಡ ಆನೆಗೆ ಪಶುವೈದ್ಯ ಡಾ.ಮುಜೀಬ್ ಚಿಕಿತ್ಸೆ ನೀಡಿದ್ದರು. ದಂತದ ತಿವಿತದಿಂದ ಉಂಟಾಗಿದ್ದ ಆಳವಾದ ಗಾಯದಿಂದ ರಾತ್ರಿಯಿಡಿ ನರಳಾಡಿ, ಮುಂಜಾನೆ ವೇಳೆಗೆ ತೀವ್ರವಾಗಿ ನಿತ್ರಾಣಗೊಂಡಿದೆ. ವೈದ್ಯರು ಚಿಕಿತ್ಸೆ ಮುಂದುವರೆಸಿದ್ದರಾದರೂ ಕೆಲ ಗಂಟೆಗಳ ನಂತರ ಕುಸಿದು ಬಿದ್ದು, ಅಸುನೀಗಿದೆ.

ನೀರಲ್ಲೇ ನರಳಾಟ: ಕಂಜನ್ ದಾಳಿಗೆ ತುತ್ತಾಗಿದ್ದ ಜೈ ಮಾರ್ತಾಂಡ, ನೋವು ತಾಳಲಾರದೆ ನೀರಿನಲ್ಲೇ ನರಳಿದೆ. ಅದರ ಮೂಕರೋದನೆ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಮಾವುತ, ಕಾವಾಡಿಗೆ ಆಘಾತ: ಜೈ ಮಾರ್ತಾಂಡ ಸಾವನ್ನಪ್ಪಿದ ಸುದ್ದಿ ಕೇಳುತ್ತಿದ್ದಂತೆ ಶಿಬಿರದ ಮಾವುತರು ಹಾಗೂ ಕಾವಾಡಿಗಳಲ್ಲಿ ದುಃಖ ಮನೆ ಮಾಡಿದೆ. ಅದರಲ್ಲೂ ಕಳೆದ ನಾಲ್ಕು ವರ್ಷದಿಂದ ಜೈ ಮಾರ್ತಾಂಡ ಆನೆಯ ಉಸ್ತುವಾರಿ ಹೊತ್ತಿದ್ದ ಮಾವುತ ಮತ್ತು ಕಾವಾಡಿಗಳಾದ ಗೌಸ್ ಮತ್ತು ನವೀನ ಎದೆ ಬಡಿದುಕೊಂಡು ರೋದಿಸಲಾರಂಭಿಸಿದರು. ಕುಟುಂಬದ ಸದಸ್ಯರನ್ನು ಕಳೆದುಕೊಂಡಂತೆ ಬಿಕ್ಕಿಬಿಕ್ಕಿ ಅಳುತ್ತಲೇ ಆನೆಗೆ ವಿದಾಯ ಹೇಳಿದರು.

ಕ್ಯಾಂಪ್‌ನಲ್ಲಿ ನೀರವ ಮೌನ: ದುರಂತದ ಹಿನ್ನೆಲೆಯಲ್ಲಿ ಪ್ರವಾಸಿಗರ ಪ್ರವೇಶವನ್ನು ಎರಡು ದಿನ ನಿರ್ಬಂಧಿಸಿರುವುದರಿಂದ ದುಬಾರೆ ಕ್ಯಾಂಪ್ ಭಣಗುಡುತ್ತಿದೆ. ಅಲ್ಲದೆ, ಜೈ ಮಾರ್ತಾಂಡ ಆನೆ ಮೃತಪಟ್ಟಿದ್ದರಿಂದ ಕ್ಯಾಂಪ್‌ನಲ್ಲಿ ನೀರವ ಮೌನ ಆವರಿಸಿದೆ. ಎಲ್ಲಾ ಆನೆಗಳ ಮಾವುತರು ಜೈ ಮಾರ್ತಾಂಡ ಆನೆಯ ಅಂತ್ಯಕ್ರಿಯೆ ಯಲ್ಲಿ ಪಾಲ್ಗೊಂಡು ಅಂತಿಮ ನಮನ ಸಲ್ಲಿಸಿದರು.

ಮರಣೋತ್ತರ ಪರೀಕ್ಷೆ: ಕ್ಯಾಂಪ್ ಬಳಿಯೇ ಜೈ ಮಾರ್ತಾಂಡ ಆನೆ ಮೃತಪಟ್ಟ ಹಿನ್ನೆಲೆಯಲ್ಲಿ ಅದರ ಕಳೇಬರವನ್ನು ಕ್ರೇನ್ ಮೂಲಕ ಲಾರಿಯಲ್ಲಿಟ್ಟು ಅರಣ್ಯದೊಳಗೆ ಸಾಗಿಸಿ, ಮರಣೋತ್ತರ ಪರೀಕ್ಷೆ ಬಳಿಕ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಜಾಗ್ರತೆ ಇಲ್ಲ: ಆನೆಗಳ ಮಾವುತರು ಹಾಗೂ ಕಾವಾಡಿಗಳು ಸದಾ ಜಾಗ್ರತೆಯಿಂದ ಇರಬೇಕು. ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಈ ಬಗ್ಗೆ ನಿಗಾ ವಹಿಸಿರಬೇಕು. ದುಬಾರೆಯಲ್ಲಿ ನಡೆದ ದುರಂತಕ್ಕೆ ಇವರೆಲ್ಲಾ ಕಾರಣರಾಗುತ್ತಾರೆ. ಆನೆಗಳು ಯಾವ ಸಂದರ್ಭದಲ್ಲಿ ಹೇಗೆ ವರ್ತಿಸುತ್ತವೆ, ರೋಷ ಬಂದಾಗ ಹೇಗೆ ವರ್ತಿಸುತ್ತವೆ ಎಂಬ ಅರಿವು ಮಾವುತರು ಹಾಗೂ ಕಾವಾಡಿಗಳಿಗೆ ಇರಬೇಕು. ಅದರಲ್ಲೂ ಜನ ಆನೆಗಳ ಹತ್ತಿರವಿರುವಾಗ ಮೈಯೆಲ್ಲಾ ಕಣ್ಣಾಗಿ ಗಮನಿಸಬೇಕು. ಆದರೆ, ನಿರ್ಲಕ್ಷ್ಯ ವಹಿಸಿದ್ದರಿಂದ ಪ್ರವಾಸಿ ಮಹಿಳೆ ಹಾಗೂ ಆನೆಯ ಬಲಿಯಾಗಿದೆ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದ್ದಾರೆ.



ಜೈ ಮಾರ್ತಾಂಡ.

ಮೌನಕ್ಕೆ ಶರಣಾದ ಆನೆಗಳು

ಜೈ ಮಾರ್ತಾಂಡ ಆನೆ ಸಾವನ್ನಪ್ಪಿದ್ದರಿಂದ ಸಹವರ್ತಿ ಆನೆಗಳು ಮೌನಕ್ಕೆ ಶರಣಾಗಿದ್ದವು. ಸಂಘ ಜೀವಿಯೂ ಆಗಿರುವ ಆನೆಗಳು ಸೂಕ್ಷ್ಮ ಗ್ರಹಿಕೆಯುಳ್ಳವು. ಜೊತೆಯಲ್ಲಿದ್ದ ಆನೆಯ ಸಾವಿನ ಸುಳಿವು ಅರಿತಂತಿದ್ದವು. ಅದರಲ್ಲೂ ನಿನ್ನೆ ರೌದ್ರಾವತಾರ ತಾಳಿದ್ದ ಕಂಜನ್ ಪಶ್ಚಾತಾಪದ ವರ್ತನೆ ತೋರಿತು ಎಂದು ಕ್ಯಾಂಪ್‌ನಲ್ಲಿರುವ ಮಾವುತರು ತಿಳಿಸಿದ್ದಾರೆ.

> ಯಾವುದೇ ಪ್ರಾಣಿಯ ಸ್ವಭಾವವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಹಾಗೆಯೇ ಆನೆಗಳ ಸ್ವಭಾವ ಒಂದಕ್ಕೊಂದು ಭಿನ್ನವಾಗಿರುತ್ತದೆ. ಕೆಲವು ಆನೆಗಳು ತುಂಟತನದಿಂದ ವರ್ತಿಸಿದರೆ, ಇನ್ನೂ ಕೆಲವು ಜನ್ಮತಃ ಒರಟು ಸ್ವಭಾವ ಹೊಂದಿರುತ್ತವೆ. ದುಬಾರೆಯಲ್ಲಿ ನಿನ್ನೆ ನಡೆದ ಘಟನೆ ಬಹಳ ದುಃಖಕರ. ನಡೆಯಬಾರದ ಘೋರ ದುರಂತ ನಡೆದು ಹೋಗಿದೆ. ಮುಂದೆ ಹೀಗಾಗದಂತೆ ಕ್ರಮ ವಹಿಸಬೇಕು. ಆನೆಗಳಿಗೆ ಸ್ನಾನ ಮಾಡಿಸುವಾಗ ಅಂತರವಿರಬೇಕು. ಜನ ಸ್ವಲ್ಪ ದೂರದಲ್ಲಿ ನಿಂತು ವೀಕ್ಷಿಸುವಂತೆ ವ್ಯವಸ್ಥೆ ಮಾಡುವುದು ಉತ್ತಮ.
> –ಡಾ.ನಾಗರಾಜ್, ಆನೆ ವೈದ್ಯ

ಜನಸಾಮಾನ್ಯರಿಗೆ ಮುಂದಿನ ದಿನಗಳಲ್ಲಿ ಕಠಿಣ ದಿನಗಳು ಬರಲಿವೆ

ನವದೆಹಲಿ, ಮೇ 19– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶೀಘ್ರದಲ್ಲೇ ದೇಶಕ್ಕೆ ದೊಡ್ಡ ಆರ್ಥಿಕ ಆಘಾತ ಎದುರಾಗಲಿದೆ ಎಂದು ಮಂಗಳವಾರ ಹೇಳಿದ್ದಾರೆ. ಆದರೆ ಅದಾನಿ, ಅಂಬಾನಿ ಅಥವಾ ಮೋದಿಗೆ ಅದು ಎಫೆಕ್ಟ್ ಆಗುವುದಿಲ್ಲ, ಬದಲಾಗಿ ಯುವಕರು, ಕಾರ್ಮಿಕರು ಮತ್ತು ಸಣ್ಣ ವ್ಯಾಪಾರಿಗಳ ಮೇಲೆ ತೀವ್ರ ಪರಿಣಾಮ ಬೀರುತ್ತದೆ ಎಂದು ಹೇಳಿದ್ದಾರೆ.



ಇಂದು ರಾಯ್‌ಬರೇಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ಮುಂದೆ ತುಂಬಾ ಕಠಿಣಾತಿ ಕಠಿಣ ದಿನಗಳು ಬರುತ್ತಿವೆ ಎಂದು ವ್ಯಾಪಾರಿಗಳಿಗೆ ಎಚ್ಚರಿಸಿದರು. ಹಲವು ವರ್ಷಗಳಿಂದ ನಾವು ನೋಡಿರದ ದೊಡ್ಡ ಆರ್ಥಿಕ ಆಘಾತ ಎದುರಾಗಲಿದೆ ಎಂದು ರಾಹುಲ್ ಗಾಂಧಿ ಹೇಳಿದರು. ಪ್ರಧಾನಿ ಮೋದಿ ಅವರು ತಾವೇ ಹೇಳಿದ ಕಠಿಣ ಕ್ರಮಗಳ ಕರೆಯನ್ನು ಅವರೇ ಪಾಲಿಸುತ್ತಿಲ್ಲ ಎಂದು ರಾಹುಲ್ ಗಾಂಧಿ ಆರೋಪಿಸಿದರು. ನರೇಂದ್ರ ಮೋದಿ ಅವರು ದೇಶದ ಜನತೆಗೆ ವಿದೇಶ ಪ್ರವಾಸ ಹೋಗಬೇಡಿ ಎಂದು ಹೇಳುತ್ತಿದ್ದಾರೆ. ಆದ್ರೆ ಅವರೇ ಪ್ರಪಂಚದಾದ್ಯಂತ ಸುತ್ತುತ್ತಿದ್ದಾರೆ. ಇದು ನಮ್ಮ ಪ್ರಧಾನಿಯವರ ನಡೆ ಎಂದು ರಾಹುಲ್ ಗಾಂಧಿ ಟೀಕಿಸಿದರು.

ದರ ಮತ್ತೆ 90 ಪೈಸೆ ಹೆಚ್ಚಳ

ಏರಿಕೆಯಾಗಿದೆ. ಇದಕ್ಕೂ ಮೊದಲು ಮೇ 15ರಂದು ಲೀಟರ್‌ಗೆ 3ರೂಪಾಯಿ ದರ ಏರಿಕೆ ಮಾಡಲಾಗಿತ್ತು. ಮುಂಬೈನಲ್ಲಿ ಪೆಟ್ರೋಲ್ ದರವು 91 ಪೈಸೆ ಏರಿಕೆಯಾಗಿ ಲೀಟರ್‌ಗೆ 107.59 ರೂಪಾಯಿಗೆ ತಲುಪಿದರೆ, ಡೀಸೆಲ್ ದರವು 94 ಪೈಸೆ ಏರಿಕೆಯಾಗಿ 94.08 ರೂಪಾಯಿಗೆ ತಲುಪಿದೆ. ಕೊಲ್ಕತ್ತಾದಲ್ಲಿ ಪೆಟ್ರೋಲ್ ದರದಲ್ಲಿ ಅತಿ ಹೆಚ್ಚು ಏರಿಕೆ ದಾಖಲಾಗಿದ್ದು, ದರವು 96 ಪೈಸೆ ಏರಿಕೆಯಾಗಿ ಲೀಟರ್‌ಗೆ 109.70 ರೂಪಾಯಿಗೆ ತಲುಪಿದೆ. ಅಲ್ಲಿನ ಡೀಸೆಲ್ ದರವು 94 ಪೈಸೆ ಏರಿಕೆಯಾಗಿ 96.07 ರೂಪಾಯಿಗೆ ತಲುಪಿದೆ. ಚೆನ್ನೈನಲ್ಲಿ ಪೆಟ್ರೋಲ್ ದರವು 82 ಪೈಸೆ ಏರಿಕೆಯಾಗಿ ಲೀಟರ್‌ಗೆ 104.49 ರೂಪಾಯಿಗೆ ತಲುಪಿದರೆ, ಡೀಸೆಲ್ ದರವು 86 ಪೈಸೆ ಏರಿಕೆಯಾಗಿ 96.11 ರೂಪಾಯಿಗೆ ಏರಿಕೆಯಾಗಿದೆ.

ಮೆಡಿಕಲ್ ಶಾಪ್‌ಗಳ ಬಂದ್‌ಗೆ ಕರೆ

ಅಧ್ಯಕ್ಷ ಆರ್. ರಘುನಾಥ ರೆಡ್ಡಿ, ಬೆಂಗಳೂರಿನ ಸುಮಾರು 6,500 ಚಿಲ್ಲರೆ ವ್ಯಾಪಾರಿಗಳು ಸೇರಿದಂತೆ ಕರ್ನಾಟಕದಲ್ಲಿ ಸುಮಾರು 26,000 ಮೆಡಿಕಲ್ ಶಾಪ್‌ಗಳು ಬಂದ್ ಆಗುವ ನಿರೀಕ್ಷೆಯಿದೆ ಎಂದು ಹೇಳಿದರು. ಇ–ಫಾರ್ಮಸಿಗಳ ಮೂಲಕ ಔಷಧಿ ಮಾರಾಟ ಮಾಡುವುದು ಕಾನೂನಿನಲ್ಲಿ ಅವಕಾಶ ಇಲ್ಲ. ನಮಗೆ ಹೈಕೋರ್ಟ್ ಆದೇಶಗಳೂ ಇವೆ, ಆದರೆ ಅವುಗಳನ್ನು ಪಾಲಿಸುತ್ತಿಲ್ಲ ಎಂದು ರೆಡ್ಡಿ ಹೇಳಿದರು. ಇ–ಫಾರ್ಮಸಿಗಳು, ರಿಯಾಯಿತಿಗಳನ್ನು ನೀಡುತ್ತಿವೆ. ಇವು ಶೇಕಡಾ 16–20 ರ ನಿಯಂತ್ರಿತ ಮಾರ್ಜಿನ್ ರಚನೆಗೆ ಅಡ್ಡಿಪಡಿಸುತ್ತಿವೆ ಮತ್ತು ಸಣ್ಣ ಚಿಲ್ಲರೆ ವ್ಯಾಪಾರಿಗಳನ್ನು ಕಡಿಮೆ ಮಾಡುತ್ತಿವೆ ಎಂದು ರೆಡ್ಡಿ ಆರೋಪಿಸಿದರು.

ಸಮಾಧಿ ಮೇಲೆ ಸರ್ಕಾರದ ಸಮರ್ಪಣಾ ಸಮಾವೇಶ

ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಎರಡು ವರ್ಷಗಳಲ್ಲಿ ಒಟ್ಟು 5,394 ಅನ್ನದಾತರು ಜೀವ ಕಳೆದುಕೊಂಡಿದ್ದಾರೆ. ಕರ್ನಾಟಕ ರೈತರ ಆತ್ಮಹತ್ಯೆ ಪ್ರಕರಣದಲ್ಲಿ ಎರಡನೇ ಸ್ಥಾನದಲ್ಲಿದೆ. ಇದನ್ನು ಕಾಂಗ್ರೆಸ್ ಸರ್ಕಾರ ಜಾಣ್ಮೆಯಿಂದ ಮುಚ್ಚಿಟ್ಟಿದೆ. ರೈತರ ಆತ್ಮಹತ್ಯೆ ಪ್ರಕರಣಗಳ ಸಮರ್ಪಣೆಗಾಗಿ ತುಮಕೂರಿನಲ್ಲಿ ಸಮಾವೇಶ ಮಾಡಿದ್ದಾರಾ ಎಂದು ತೀಕ್ಷ್ಣವಾಗಿ ಪ್ರಶ್ನಿಸಿದರು.

ಕೇವಲ ಹತ್ತು ನಿಮಿಷಗಳ ಕಾಲ ಮಳೆ ಬಂದರೆ ಸಾಕು ಬೆಂಗಳೂರಿನ ಎಲ್ಲೆಡೆ ನೀರು ನಿಲ್ಲುತ್ತದೆ. ಈ ಸಮಾವೇಶಕ್ಕೆ ಸರ್ಕಾರ ಕೋಟ್ಯಾಂತರ ರೂಪಾಯಿ ದುಂದು ವೆಚ್ಚ ಮಾಡಿದೆ. ಜನರನ್ನೂ ಸರಕಾರವೇ ಕರೆತರಬೇಕು. ಆ ಕೆಲಸವನ್ನು ಟಾರ್ಗೆಟ್ ನಿಗದಿಪಡಿಸಿ ಅಧಿಕಾರಿಗಳಿಗೆ ವಹಿಸಿದ್ದಾರೆ. ಕಾರ್ಯಕ್ರಮಗಳಲ್ಲಿ ಜನ ಸೇರಿಸಲು ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಈ ಸರಕಾರ ರೈತರ ಜೀವನದ ಮೇಲೆ ಸಮಾಧಿ ಕಟ್ಟಿ, ಅದರ ಮೇಲೆ ತಮ್ಮ ವೈಭವ ಪ್ರದರ್ಶನ ಮಾಡುತ್ತಿದೆ. ಇದನ್ನು ಜನ ಕ್ಷಮಿಸುವುದಿಲ್ಲ ಎಂದು ಕಿಡಿಕಾರಿದರು.

ಒಂದೆಡೆ ರೈತರು ನಿತ್ಯವೂ ಸಾಯುತ್ತಿದ್ದರೆ, ಇವರು ಗ್ಯಾರಂಟಿ ಹೆಸರಿನಲ್ಲಿ ಹಬ್ಬ ಮಾಡುತ್ತಿದ್ದಾರೆ. ಇವರ ಗ್ಯಾರಂಟಿಗಳು ಉತ್ತಮವಾಗಿದ್ದಿದ್ದರೆ ರೈತರು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಸಮಾವೇಶದ ಹೆಸರಿನಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದ ಹಲವಾರು ವಿಚಾರಗಳನ್ನು ಹೆಚ್ಚು ಪ್ರಚಾರ ಮಾಡುತ್ತಿದ್ದಾರೆ. ಕಳೆದ ವರ್ಷ ಕೂಡ ಹಕ್ಕು ಪತ್ರಗಳ ಬಗ್ಗೆಯೇ ಹೆಚ್ಚು ಚರ್ಚೆ ಮಾಡಿದ್ದರು. ಆದರೆ ರೈತರು ಕಂದಾಯ ಇಲಾಖೆ ಬಗ್ಗೆಯೇ ಹೆಚ್ಚು ದೂರು, ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾರೆ. 6ನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಕೊಡುತ್ತಿದ್ದೇವೆ ಎಂದು ಇವರು ಪುಕ್ಕಟೆ ಪ್ರಚಾರ ಪಡೆಯುತ್ತಿದ್ದಾರೆ. ಆದರೆ ರಾಜ್ಯದಲ್ಲಿ ನಡೆಯುತ್ತಿರುವ ಸರಣಿ ರೈತ ಆತ್ಮಹತ್ಯೆ ಪ್ರಕರಣಗಳು ಇವರ ಯೋಗ್ಯತೆಯನ್ನು ಸಾರಿ ಸಾರಿ ಹೇಳುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಟೌನ್ ಶಿಪ್ ಬಗ್ಗೆ ಚರ್ಚೆಗೆ ಸಿದ್ಧ: ಬಿಡದಿ ಟೌನ್ ಶಿಪ್ ವಿಚಾರವಾಗಿ ಚರ್ಚೆಗೆ ಪಂಥಾಹ್ವಾನ ನೀಡಿರುವ ರಾಜ್ಯದ ಉಪ ಮುಖ್ಯಮಂತ್ರಿಯ ಸವಾಲನ್ನು ಸ್ವೀಕರಿಸಿದ ಕೇಂದ್ರ ಸಚಿವರು, ಚರ್ಚೆ ಮಾಡಲು ನಾನು ಸಿದ್ಧನಿದ್ದೇನೆ. ಎಲ್ಲಿಗೆ ಬೇಕಾದರೂ ಬರಲಿ. ಬಿಡದಿಯಲ್ಲಿ ಮೂರೂವರೆ ಸಾವಿರ ಜನ ತಕರಾರು ಅರ್ಜಿ ಕೊಟ್ಟಿದ್ದಾರೆ. ರೈತರನ್ನು ರೌಡಿಗಳು ಮತ್ತು ಪೊಲೀಸರ ಮೂಲಕ ಬೆದರಿಸುವ ಕೆಲಸ ಮಾಡುತ್ತಿದ್ದಾರೆ. ಯೋಜನೆಯಿಂದ ಒಳ್ಳೆಯದು ಆಗುವುದಿದ್ದರೆ ರೈತರೇ ಸಂತೋಷವಾಗಿ ಭೂಮಿ ಕೊಡುತ್ತಿದ್ದರು. ರೈತರ ಹಿತಕ್ಕೆ ತಕ್ಕಂತೆ ಸರ್ಕಾರ ವರ್ತಿಸಬೇಕು ಎಂದು ಸಚಿವರು ಹೇಳಿದರು.

ಅಖಂಡ ಶ್ರೀನಿವಾಸ ಮೂರ್ತಿ ಜೆಡಿಎಸ್‌ಗೆ: ಪುಲಿಕೇಶಿನಗರದ ಮಾಜಿ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಅವರ ಮನೆಗೆ ಭೇಟಿ ನೀಡಿದ್ದರ ಬಗ್ಗೆ ಪ್ರತಿಕ್ರಿಯಿಸಿ, ಇದೊಂದು ಗೌರವಪೂರ್ವಕ ಭೇಟಿ. ಜೆಡಿಎಸ್ ಪಕ್ಷ ಸೇರಲು ಅವರು ಉತ್ಸುಕರಾಗಿದ್ದಾರೆ. ಸದ್ಯದಲ್ಲೇ ದಿನಾಂಕ ನಿಗದಿ ಮಾಡಿ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುತ್ತೇವೆ ಎಂದು ತಿಳಿಸಿದರು.

ಸುದೀರ್ಘ ಚರ್ಚೆ: ಪಕ್ಷದ ಕಚೇರಿಗೆ ಆಗಮಿಸುವುದಕ್ಕೂ ಮುನ್ನ ಬೆಂಗಳೂರಿನ ಕಾವಲ್ ಭೈರಸಂದ್ರದಲ್ಲಿರುವ ಅಖಂಡ ಶ್ರೀನಿವಾಸಮೂರ್ತಿ ಮನೆಗೆ ಭೇಟಿ ನೀಡಿದ್ದ ಕೇಂದ್ರ ಸಚಿವ ಕುಮಾರಸ್ವಾಮಿ, ಸುದೀರ್ಘ ಚರ್ಚೆ ನಡೆಸಿದರು. ಈ ವೇಳೆ ಕೋಲಾರ ಲೋಕಸಭಾ ಕ್ಷೇತ್ರದ ಸಂಸದ ಮಲ್ಲೇಶ್ ಬಾಬು, ಗ್ರೇಟರ್ ಬೆಂಗಳೂರು ಜೆಡಿಎಸ್ ಅಧ್ಯಕ್ಷ ಹೆಚ್.ಎಂ.ರಮೇಶ ಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಚೌಡರೆಡ್ಡಿ ತೂಪಲ್ಲಿ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಂಗಳವಾರ ಮಾಜಿ ಶಾಸಕ ಅಖಂಡ ಶ್ರೀನಿವಾಸ್ ಮೂರ್ತಿ ಮನೆಗೆ ಭೇಟಿ ನೀಡಿದ್ದರು.

ಮೈಸೂರು ಮಿತ್ರ ಬುಧವಾರ 20 ಮೇ 2026

ಶ್ರೀ ಕೃಷ್ಣಮಿತ್ರ ಮಂಡಳಿಯ ಸುವರ್ಣ ಸಂಭ್ರಮ

ಹಿರಿಯ ಪತ್ರಕರ್ತ ರವೀಂದ್ರ ಜೋಷಿಗೆ 'ಶ್ರೀಕೃಷ್ಣಾನುಗ್ರಹ ಪ್ರಶಸ್ತಿ' ಪ್ರದಾನ



ಶ್ರೀ ಸುಬುಧೇಂದ್ರ ತೀರ್ಥ ಶ್ರೀ ಪಾದಂಗಳವರು, ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರ ಸಾನ್ನಿಧ್ಯದಲ್ಲಿ ಹಿರಿಯ ಪತ್ರಕರ್ತ ರವೀಂದ್ರ ಜೋಷಿ ದಂಪತಿಗೆ 'ಶ್ರೀ ಕೃಷ್ಣಾನುಗ್ರಹ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು.

ಮೈಸೂರು, ಮೇ 19(ಎಸ್‌ಪಿಎನ್)– ಮಂತ್ರಾಲಯ ಶ್ರೀ ರಾಘವೇಂದ್ರ ಮಠದ ಶ್ರೀ ಸುಬುಧೇಂದ್ರ ತೀರ್ಥ ಶ್ರೀ ಪಾದಂಗಳವರು, ಉಡುಪಿ ಪೇಜಾವರ ಅಧೋಕ್ಷಜ ಮಠದ ಪೀಠಾಧಿಪತಿಗಳೂ ಆದ ಶ್ರೀ ಕೃಷ್ಣ ಟ್ರಸ್ಟ್ ಅಧ್ಯಕ್ಷರಾದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರ ಸಾನ್ನಿಧ್ಯದಲ್ಲಿ ಹಿರಿಯ ಪತ್ರಕರ್ತ ರವೀಂದ್ರ ಜೋಷಿ ದಂಪತಿಗೆ ಈ ಸಾಲಿನ 'ಶ್ರೀ ಕೃಷ್ಣಾನುಗ್ರಹ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು.

ಮೈಸೂರು ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮ ಆವರಣದಲ್ಲಿ ಶ್ರೀ ಕೃಷ್ಣಮಿತ್ರ ಮಂಡಳಿ ಹಾಗೂ ಶ್ರೀ ಕೃಷ್ಣ ಟ್ರಸ್ಟ್ ಸಹಯೋಗದೊಂದಿಗೆ ಏರ್ಪಡಿಸಿದ್ದ ಶ್ರೀಕೃಷ್ಣ ಮಿತ್ರ ಮಂಡಳಿಯ 50ನೇ ಸುವರ್ಣ ಸಂಭ್ರಮದ ಅಂಗವಾಗಿ ಎರಡು ದಿನಗಳ ಕಾರ್ಯಕ್ರಮವನ್ನು ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ರಾಷ್ಟ್ರವಾದಿ ಪತ್ರಕರ್ತರು, ನೇರ–ನಿಷ್ಠುರವಾದಿ ಪತ್ರಕರ್ತರ ಸಾಲಿನಲ್ಲಿ ರವೀಂದ್ರ ಜೋಷಿಯವರ ಸಾಧನೆ ಅಮೋಘ. ಜೋಷಿ ಅವರು ತಮ್ಮ ಡಿಜಿಟಲ್ ಮಾಧ್ಯಮದ ಮೂಲಕ ಲಕ್ಷಾಂತರ ರಾಷ್ಟ್ರ ಭಕ್ತರ ದನಿಯಾಗಿ ಕೆಲಸ ಮಾಡುತ್ತಿದ್ದಾರೆ. ಎಂದರು.

ಹಿರಿಯ ಪತ್ರಕರ್ತ ರವೀಂದ್ರ ಜೋಷಿ ಶ್ರೀಕೃಷ್ಣಾನುಗ್ರಹ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನ ಪುತ್ತೂರು ಜಗದೀಶ್ ಆಚಾರ್ಯ ಮತ್ತು ತಂಡದಿಂದ ಭಕ್ತಿ ಸುಧೆ ಗಾಯನ ಜರುಗಿತು. ಈ ವೇಳೆ ಶ್ರೀ ಕೃಷ್ಣಮಿತ್ರ ಮಂಡಳಿ ಅಧ್ಯಕ್ಷ ಎನ್.ಗೋಪಾಲಕೃಷ್ಣನ್, ಉಪಾಧ್ಯಕ್ಷ ಶ್ರೀವತ್ಸರಾವ್, ಕಾರ್ಯದರ್ಶಿ ಪಿ.ಜಿ.ಗುರುಪ್ರಸಾದ್, ಸಹ ಕಾರ್ಯದರ್ಶಿ ಸುರೇಶ್ ಎಸ್.ರಾವ್, ರಾಘವೇಂದ್ರರಾವ್, ಸದಸ್ಯರಾದ ಪುಟ್ಟಣ್ಣ ಭಟ್, ಪಿ.ಜಯರಾಮಭಟ್, ಪಿ.ಜಿ.ಪ್ರವೀಣ್, ಬಿ.ಎಸ್.ರಾಘವೇಂದ್ರ ಪ್ರಸಾದ್, ಸುಬ್ರಮಣ್ಯ ಆರ್.ತಂತ್ರಿ, ಪಿ.ಎಸ್.ರಮೇಶ್, ಎಚ್.ಆರ್.ಮುರಳಿಧರ್ ಭಟ್, ರಾಘವೇಂದ್ರ ತಂತ್ರಿ, ಕೆ.ಎಸ್.ಪದ್ಮಾನಾಭ್ ಹಾಗೂ ಶ್ರೀ ಕೃಷ್ಣ ಟ್ರಸ್ಟ್‌ನ ಉಪಾಧ್ಯಕ್ಷ ರವಿಶಾಸ್ತ್ರಿ, ಕಾರ್ಯದರ್ಶಿ ಕೆ.ವಿ.ಶ್ರೀಧರ್, ಸಹ ಕಾರ್ಯದರ್ಶಿ ಕಿರಣ್ ತಂತ್ರಿ, ಖಜಾಂಚಿ ಶ್ರೀಕಾಂತ್ ರಾವ್, ಸದಸ್ಯರಾದ ಪಿ.ಎಸ್.ಶೇಖರ್, ಪದ್ಮನಾಭ್ ಭಟ್, ಬಾಲಕೃಷ್ಣಭಟ್, ಸತ್ಯಪ್ರಕಾಶ್, ವಾಸುದೇವ್‌ರಾವ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಛಾಯಾಗ್ರಾಹಕ ಪತ್ರಕರ್ತರ ಸಂಘದಿಂದ ಪ್ರತಿಭಾವಂತ ಮಕ್ಕಳಿಗೆ ಡಾ.ಕೆ.ಬಿ.ಗಣಪತಿ, ರಾಜಶೇಖರ ಕೋಟಿ ಸ್ಮರಣಾರ್ಥ ಪ್ರತಿಭಾ ಪುರಸ್ಕಾರ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ವತಿಯಿಂದ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಹಾಗೂ 'ಆಂದೋಲನ' ಸಂಸ್ಥಾಪಕ ಸಂಪಾದಕರಾದ ರಾಜಶೇಖರ ಕೋಟಿ ಅವರ ಸ್ಮರಣಾರ್ಥ ಪ್ರತಿಭಾ ಪುರಸ್ಕಾರ ನೀಡಿ, ಅಭಿನಂದಿಸಲಾಯಿತು.

ಮೈಸೂರು, ಮೇ 19(ಜಿಎ)–ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಹಾಗೂ 'ಆಂದೋಲನ' ಸಂಸ್ಥಾಪಕ ಸಂಪಾದಕರಾದ ರಾಜಶೇಖರ ಕೋಟಿ ಅವರ ಸ್ಮರಣಾರ್ಥ ಪ್ರತಿಭಾ ಪುರಸ್ಕಾರ ನೀಡಿ, ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ವಿಕ್ರಮ್ ಮುತ್ತಣ್ಣ, 'ಆಂದೋಲನ' ಸಂಪಾದಕರಾದ ರವಿ ಕೋಟಿ ಹಾಗೂ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ 'ಡಾ.ಕೆ.ಬಿ.ಗಣಪತಿ' ಮತ್ತು 'ರಾಜಶೇಖರ್ ಕೋಟಿ' ಪ್ರತಿಭಾ ಪುರಸ್ಕಾರ ಪ್ರದಾನ ಮಾಡಿದರು.

ನಂತರ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಎಷ್ಟೇ ಪತ್ರಿಕೆಗಳು ಬರಲಿ, ಎಷ್ಟೇ ಜನ ಪತ್ರಿಕೆಗಳನ್ನು ಆರಂಭಿಸಲಿ. ಆದರೆ, ಮೈಸೂರಿನ ಪತ್ರಿಕೋದ್ಯಮ ಅಂದರೆ, ಮೊದಲು ಹೇಳುವುದು ರಾಜಶೇಖರ ಕೋಟಿ, ಡಾ.ಕೆ.ಬಿ.ಗಣಪತಿ ಅವರ ಹೆಸರನ್ನ. ಅಂತಹ ಒಂದು ಅಸ್ಮಿತೆಯನ್ನು ಮೈಸೂರು ಪತ್ರಿಕೋದ್ಯಮದಲ್ಲಿ ಎರಡು ಜೀವಗಳು ಉಳಿಸಿ ಹೋಗಿವೆ. ಕೇವಲ ಅವರು ಹೆಸರು ಉಳಿಸಿ ಹೋಗಿದ್ದಲ್ಲ, ಕನ್ನಡ ಪತ್ರಿಕೋದ್ಯಮಕ್ಕೆ, ಆಂಗ್ಲ ಪತ್ರಿಕೋದ್ಯಮಕ್ಕೆ ನೂರಾರು ಪತ್ರಕರ್ತರನ್ನು ಕೊಡುಗೆಯಾಗಿ ಕೊಟ್ಟಿದ್ದಾರೆ. ಇಂದು ಬೇರೆ ರಾಜ್ಯ, ದೇಶಗಳಲ್ಲಿ ಏನಾದರೂ ಯಶಸ್ವಿ ಪತ್ರಕರ್ತರು ಕೆಲಸ ಮಾಡುತ್ತಿದ್ದರೆ, ಅವರಿಗೆ ಈ ಎರಡು ಪತ್ರಿಕೆಗಳ ನಂಟಿರುತ್ತದೆ ಎಂದು ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘ 92 ವರ್ಷಗಳನ್ನ ಪೂರೈಸಿದೆ. ದೇಶದಲ್ಲೇ ಅತ್ಯಂತ ಮಾದರಿ ಹಾಗೂ ಹಿರಿಯ ಸಂಘಗಳಲ್ಲಿ ಒಂದಾಗಿದೆ. ಈ ಸಂಘವನ್ನು ಕಟ್ಟಿ ಬೆಳೆಸಲು 'ಆಂದೋಲನ' ಸಂಸ್ಥಾಪಕ ಸಂಪಾದಕರಾದ ರಾಜಶೇಖರ ಕೋಟಿ, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾಗಿದ್ದಂತಹ ಕೆ.ಬಿ.ಗಣಪತಿ ಪತ್ರಿಕೋದ್ಯಮದ ಇಬ್ಬರು ದಿಗ್ಗಜರು ಸಾಕಷ್ಟು ಕೊಡುಗೆ ನೀಡಿದ್ದಾರೆ ಎಂದರು.

ಈ ಹಿಂದೆ ಗಣಪತಿಯವರು ಮತ್ತು ಕೋಟಿಯವರನ್ನು ಒಂದೇ ವೇದಿಕೆ ಮೇಲೆ ನೋಡುವಂತಹ ಅವಕಾಶವು ನಮಗೆ ಸಿಕ್ಕಿತು. ಹಾಗೇ ಇಂದು ಅವರಿಬ್ಬರ ಸುಪುತ್ರರೊಡನೆ ವೇದಿಕೆ ಹಂಚಿಕೊಳ್ಳುವ ಅವಕಾಶ ಸಿಕ್ಕಿದೆ. ಎರಡು ತಲೆಮಾರುಗಳು ಮೈಸೂರು ಜಿಲ್ಲಾ ಪತ್ರಕರ್ತರ ಸಂಘಕ್ಕೆ ಸಾಕ್ಷಿ ಪ್ರಜ್ಞೆಗಳಾಗಿರುವುದು ನಿಜವಾಗಿಯೂ ವೈಯಕ್ತಿಕವಾಗಿ ತುಂಬಾ ಸ್ಮರಣೀಯವಾದಂತಹ ಕ್ಷಣವಾಗಿದ್ದು, ಈ ಹಿನ್ನೆಲೆಯಲ್ಲಿ ಜಿಲ್ಲಾ ಪತ್ರಕರ್ತ ಸಂಘಕ್ಕೆ ಇಂದು ವಿಶೇಷವಾದಂತಹ ದಿನ ಎಂದು ತಿಳಿಸಿದರು.

ಮೈಸೂರಿನ ಪತ್ರಿಕಾ ಛಾಯಾಗ್ರಾಹಕರು ಕ್ರಿಯಾಶೀಲರು, ದೇಶದ ಯಾವುದೇ ಮೂಲೆಗಳಲ್ಲಿ ಅದು ರಾಜ್ಯಮಟ್ಟದ್ದಾಗಿರಲಿ, ಅಂತರ ರಾಜ್ಯದ್ದಾಗಿರಲಿ ಇಲ್ಲವೆ ರಾಷ್ಟ್ರೀಯ ಮಟ್ಟದ್ದಾಗಿರಲಿ, ಕೌಶಲ್ಯ, ಪ್ರತಿಭೆಯನ್ನು ಮೆರೆದು ಪ್ರಶಸ್ತಿಗಳ ಪಡೆದುಕೊಂಡಂತಹವರು. ವೃತ್ತಿಪರತೆಯನ್ನು ಕಾಪಾಡಿಕೊಂಡು ಬಂದಿರುವಂತಹವರು. ಆ ಕಾರಣಕ್ಕಾಗಿ ಪ್ರತಿ ವರ್ಷ ಹತ್ತಾರು ಪ್ರಶಸ್ತಿಗಳು ಪತ್ರಿಕಾ ಛಾಯಾಗ್ರಾಹಕರಿಗೆ ಲಭಿಸುತ್ತಿವೆ ಎಂದರು.

ಪತ್ರಕರ್ತರಿಗೆ ತರಬೇತಿ: 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ವಿಕ್ರಮ್ ಮುತ್ತಣ್ಣ ಮಾತನಾಡಿ, ನಮ್ಮ ತಂದೆ ಕೆ.ಬಿ.ಗಣಪತಿ ಹಾಗೂ ರವಿಕೋಟಿ ಅವರ ತಂದೆ ರಾಜಶೇಖರ ಕೋಟಿ ಅವರ ಹೆಸರಿನಲ್ಲಿ ಮಕ್ಕಳಿಗೆ ಪುರಸ್ಕಾರ ನೀಡುತ್ತಿರುವುದು ಸಂತಸದ ವಿಚಾರ. ಮುಂದಿನ ದಿನಗಳಲ್ಲಿ ಪತ್ರಕರ್ತರಿಗೆ, ತರಬೇತಿ ಕಾರ್ಯಕ್ರಮ ಆಯೋಜಿಸುವಂತೆಯೂ ಸಲಹೆ ನೀಡಿದರು.

ಪ್ರತಿಭಾವಂತ ಮಕ್ಕಳಿಗೆ ಅಭಿನಂದನೆ: ಆಂದೋಲನ ಪತ್ರಿಕೆ ಸಂಪಾದಕ ರವಿ ಕೋಟಿ ಮಾತನಾಡಿ, ಇಂದು ಆಯೋಜಿಸಿರುವ ಕಾರ್ಯಕ್ರಮ ಉತ್ತಮವಾದುದು. ಮುಂದಿನ ವರ್ಷ ನಾವು ನಿಮ್ಮೊಟ್ಟಿಗೆ ಸೇರಿಕೊಳ್ಳುತ್ತೇವೆ. ಇಂದು ಪುರಸ್ಕಾರ ಪಡೆದ ಎಲ್ಲಾ ಮಕ್ಕಳಿಗೂ ಅಭಿನಂದನೆಗಳು ಎಂದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಎಂ.ರಂಜನ, ಎ.ಆರ್. ಅಪ್ರಮೇಯ, ಎನ್.ಎಸ್.ಮೈತ್ರಿಯಾ, ಎಸ್.ಮೇಘನ, ಎಂ.ಸಿಂಚನ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ 'ಲಾಗೈಡ್' ಮಾಸ ಪತ್ರಿಕೆ ಸಂಪಾದಕರೂ, ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಕಾನೂನು ಸಲಹೆಗಾರರಾದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್, ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ಪ್ರಗತಿ ಗೋಪಾಲ ಕೃಷ್ಣ, ಉಪಾಧ್ಯಕ್ಷ ಕೆ.ಹೆಚ್.ಚಂದ್ರು, ಪ್ರಧಾನ ಕಾರ್ಯದರ್ಶಿ ಎಂ.ಎನ್.ಲಕ್ಷ್ಮಿನಾರಾಯಣ ಯಾದವ್, ಖಜಾಂಚಿ ಎಸ್.ಉದಯ್ ಶಂಕರ್, ಕಾರ್ಯಕಾರಿ ಸಮಿತಿ ಸದಸ್ಯರಾದ ಅನುರಾಗ್ ಬಸವರಾಜು, ಎಂ.ಎ.ಶ್ರೀರಾಮ್, ನಾಗೇಶ್ ಪಾಣತ್ತಲೆ, ಎಸ್.ಆರ್.ಮಧುಸೂಧನ್, ಗವಿಮಠ ರವಿ, ಟಿ.ಅನೂಪ್ ರಾಘವ್, ಹಂಪಾ ನಾಗರಾಜು, ನಿಶಾಂತ್ ಪಾಲ್, ಕೃಷ್ಣೋಜಿರಾವ್, ಎ.ನಂದನ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಹುಟ್ಟುಹಬ್ಬದ ಶುಭಾಶಯ






ಮೈಸೂರಿನ ಹೆಸರಾಂತ ಪ್ರಥಮ ದರ್ಜೆ ಗುತ್ತಿಗೆದಾರರು ಹಾಗೂ ವೈಶಾಖ್ ಗ್ರೂಫ್ ಆಫ್ ಹೋಟೆಲ್ಸ್‌ನ ಮಾಲೀಕರಾದ ಗೋವಿಂದೇಗೌಡ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ದಂಪತಿಯನ್ನು ಕುಟುಂಬವರ್ಗ ಹಾಗೂ ಅಭಿಮಾನಿಗಳು ಅದ್ದೂರಿಯಾಗಿ ಸನ್ಮಾನಿಸಿ, ಶುಭಾಶಯ ಕೋರಿದರು. ಈ ವೇಳೆ ಅಶೋಕ್, ಅರುಣ್, ವೀಣಾ ಅಶೋಕ್, ವಿದ್ಯಾ ಅರುಣ್, ಪ್ರವೀಣ್ ಓಂ ಶಕ್ತಿ ಶ್ರೀನಿವಾಸ್, ಹರೀಶ್, ಜಗದೀಶ್ ಇನ್ನಿತರರು ಉಪಸ್ಥಿತರಿದ್ದರು.

ಅರಮನೆ ಎದುರೇ ಎಣ್ಣೆ ಪಾರ್ಟಿ?

ಜಾರ್ಖಂಡ್ ರಾಜಧಾನಿ ರಾಂಚಿ ನೋಂದಣಿ ಸಂಖ್ಯೆ ಹೊಂದಿರುವ ಕಾರು ನಿಲ್ಲಿಸಿಕೊಂಡು ಮದ್ಯ ಸೇವನೆ ; ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್



ಮೈಸೂರು,ಮೇ 19(ಪಿಎಂ)– ಸರಿರಾತ್ರಿ ಹೊತ್ತಲ್ಲಿ ಮೈಸೂರು ಅರಮನೆ ಎದುರೇ ಎಣ್ಣೆ ಹಾಕಬೇಕೇ? ಹೌದು, ಮೈಸೂರು ಅರಮನೆಯ ಜಯಮಾರ್ತಾಂಡ ದ್ವಾರದ ಎದುರು ರಸ್ತೆಯಲ್ಲಿ ಕಾರು ನಿಲ್ಲಿಸಿಕೊಂಡು ರಾತ್ರಿ ವೇಳೆ ಮೂವರು ವ್ಯಕ್ತಿಗಳು ಮದ್ಯಪಾನ ಮಾಡಿದ್ದಾರೆ ಎನ್ನಲಾದ ದೃಶ್ಯಾವಳಿ ಇರುವ ವಿಡಿಯೋವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಜಾರ್ಖಂಡ್ ರಾಜಧಾನಿ ರಾಂಚಿ ನೋಂದಣಿ ಸಂಖ್ಯೆ ಹೊಂದಿರುವ ಕಾರಿನ ಬಳಿ ಮದ್ಯದ ಟಿನ್ ಮಾದರಿ ಬಾಟಲ್‌ಗಳನ್ನು ಹಿಡಿದುಕೊಂಡು ಕುಡಿಯುತ್ತಿದ್ದು, ಜೊತೆಗೆ ಸಿಗರೇಟ್ ಅನ್ನೂ ಒಬ್ಬ ವ್ಯಕ್ತಿ ಸೇವನೆ ಮಾಡುತ್ತಿರುವ ವಿಡಿಯೋ ಇದಾಗಿದೆ.

ಈ ಮೂವರು ವ್ಯಕ್ತಿಗಳು ಈ ರೀತಿ ಕುಡಿಯುತ್ತಿರುವ ದೃಶ್ಯವನ್ನು ಯಾರೋ ತಮ್ಮ ಕಾರಿನಲ್ಲಿ ಕುಳಿತು ವಿಡಿಯೋ ಮಾಡಿದ್ದಾರೆ. ಅರಮನೆ ಮುಂದೆ ಈ ರೀತಿ ಎಣ್ಣೆ ಪಾರ್ಟಿ ಮಾಡಿರುವುದನ್ನು ನೋಡಿದ ಜನತೆ, ಇಲ್ಲಿ ಹೇಳೋರೂ ಇಲ್ಲ ಕೇಳೋರೂ ಇಲ್ಲದಂತೆ ಆಗಿದೆಯೇ ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಈ ವಿಡಿಯೋ ನೋಡಿ ಸಾಮಾಜಿಕ ಜಾಲತಾಣದಲ್ಲೇ ವ್ಯಾಪಕವಾದ ಟೀಕಾ ಪ್ರಹಾರ ವ್ಯಕ್ತವಾಗುತ್ತಿದೆ.

ಕಾರಿನಲ್ಲಿ ಬಂದು ಮದ್ಯ ಸೇವನೆ ಮಾಡಿದ ಇವರು ನಂತರದಲ್ಲಿ ಇಲ್ಲಿಂದ ಕಾರಿನಲ್ಲಿ ನಿರ್ಗಮಿಸುವಾಗ ಇವರಲ್ಲೇ ಒಬ್ಬರು ಕಾರು ಚಾಲನೆ ಮಾಡಿರುವುದನ್ನು ತಳ್ಳಿ ಹಾಕಲಾಗದು. ಕುಡಿದ ಮತ್ತಿನಲ್ಲಿ ವಾಹನ ಚಾಲನೆ ಮಾಡಿ ಅಪಘಾತ ಮಾಡಿದರೆ ಅದಕ್ಕೆ ಹೊಣೆ ಯಾರೆಂಬ ಚರ್ಚೆಯೂ ನಡೆಯುತ್ತಿದೆ. ಈ ವಿಡಿಯೋ ಹಿನ್ನೆಲೆಯಲ್ಲಿ ಮೈಸೂರು ನಗರ ಪೊಲೀಸರ ವಿರುದ್ಧ ಸಾರ್ವಜನಿಕರು ಕಿಡಿಕಾರುತ್ತಿದ್ದಾರೆ. ಅಮಾಯಕರು, ಬಡವರ ವಿರುದ್ಧ ಮಾತ್ರ ಈ ಪೊಲೀಸರು ದರ್ಪ ತೋರುತ್ತಾರೆ. ಇಂತಹ ವ್ಯಕ್ತಿಗಳಿಗೆ ಮಾತ್ರ ಏನೂ ಮಾಡಲಾರರು ಎಂಬ ಟೀಕೆ ವ್ಯಾಪಕವಾಗಿ ಕೇಳಿಬರುತ್ತಿದೆ.

ಅಧಿಕ ರಕ್ತದೊತ್ತಡ ನಮ್ಮ ನಡುವಿನ ನಿಶ್ಯಬ್ದ ಕೊಲೆಗಾರ

ಮೈಸೂರು ಜಯದೇವ ಹೃದ್ರೋಗ ಸಂಸ್ಥೆ ಮುಖ್ಯಸ್ಥರಾದ ಡಾ.ಕೆ.ಎಸ್.ಸದಾನಂದ ಎಚ್ಚರಿಕೆ



ಜೆಎಸ್‌ಎಸ್ ಆಸ್ಪತ್ರೆ, ವೈದ್ಯಕೀಯ ವಿಭಾಗ ಆಯೋಜಿಸಿದ್ದ ವಿಶ್ವ ಅಧಿಕ ರಕ್ತದೊತ್ತಡ ದಿನಾಚರಣೆ ಕಾರ್ಯಕ್ರಮವನ್ನು ಜಯದೇವ ಆಸ್ಪತ್ರೆ ಮುಖ್ಯಸ್ಥ ಡಾ.ಸದಾನಂದ ಉದ್ಘಾಟಿಸಿದರು.

ಮೈಸೂರು, ಮೇ 19–ಅಧಿಕ ರಕ್ತದೊತ್ತಡ ನಮ್ಮ ನಡುವಿನ ನಿಶ್ಯಬ್ದ ಕೊಲೆಗಾರ ಎಂದು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ಹೇಳಿದರು.

ಜೆಎಸ್‌ಎಸ್ ಆಸ್ಪತ್ರೆ ಮತ್ತು ವೈದ್ಯಕೀಯ ವಿಭಾಗ ಆಯೋಜಿಸಿದ್ದ ವಿಶ್ವ ಅಧಿಕ ರಕ್ತದೊತ್ತಡ ದಿನಾಚರಣೆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಅಧಿಕ ರಕ್ತದೊತ್ತಡ ಅಥವಾ ಹೈಪರ್ ಟೆನ್ಷನ್ ನಮಗೆ ಯಾವುದೇ ಸ್ಪಷ್ಟ ಮುನ್ಸೂಚನೆಗಳನ್ನು ನೀಡದೆ ಅದು ಪ್ರತಿದಿನ ನಿಮ್ಮ ಹೃದಯ, ಮೆದುಳು, ಮೂತ್ರಪಿಂಡ ಮತ್ತು ಕಣ್ಣುಗಳನ್ನು ಸದ್ದಿಲ್ಲದೆ ಹಾನಿಗೊಳಿಸುತ್ತದೆ ಮತ್ತು ಮುಂದೆ ಹೃದಯಘಾತ ಹಾಗೂ ಪಾರ್ಶ್ವ ವಾಯುವಿಗೆ ಕಾರಣವಾಗುತ್ತದೆ, ಆದ್ದರಿಂದ ಪ್ರತಿಯೊಬ್ಬರು ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಬೇಕು ಮುಂಚಿತವಾಗಿ ರೋಗವನ್ನು ಪತ್ತೆಹಚ್ಚಿ ಅದಕ್ಕೆ ಸೂಕ್ತ ಚಿಕಿತ್ಸೆಯನ್ನು ಪಡೆದುಕೊಂಡರೆ ಈ ಕಾಯಿಲೆಯನ್ನು ನಿಯಂತ್ರಿಸಬಹುದು ಎಂದು ಹೇಳಿದರು.

ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಸಿ.ಪಿ.ಮಧು ಮಾತನಾಡಿ, ವಿಶ್ವ ಅಧಿಕ ರಕ್ತದೊತ್ತಡ ದಿನದ ಧ್ಯೇಯವಾಕ್ಯ ಒಟ್ಟಿಗೆ ಅಧಿಕ ರಕ್ತದೊತ್ತಡ ನಿಯಂತ್ರಿಸುವುದು ಮತ್ತು ನಿಮ್ಮ ರಕ್ತದೊತ್ತಡವನ್ನು ನಿಯಮಿತವಾಗಿ ಪರಿಶೀಲಿಸಿ, ಮೂಕ ಕೊಲೆಗಾರನನ್ನು ಸೋಲಿಸಿ ಎಂಬುದಾಗಿದೆ. ಈ ಅಭಿಯಾನವು ಅಧಿಕ ರಕ್ತದೊತ್ತಡ ನಿರ್ವಹಿಸುವುದು ಸಾಮೂಹಿಕ ಜವಾಬ್ದಾರಿ ಹಾಗೂ ಆರಂಭಿಕ ಪತ್ತೆಗೆ ನಿಯಮಿತ ರಕ್ತದೊತ್ತಡ ಮೇಲ್ವಿಚಾರಣೆ ಅತ್ಯಗತ್ಯ ಎಂದರು.

ಆಸ್ಪತ್ರೆಯ ಉಪನಿರ್ದೇಶಕಿ ಡಾ.ಸುಮನ, ಉಪವೈದ್ಯಕೀಯ ಅಧೀಕ್ಷಕ ಡಾ.ಪ್ರಸಾದ್ ಎಂ.ಸಿ. ಜೆಎಸ್‌ಎಸ್ ಆಸ್ಪತ್ರೆಯ ವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ.ಎಂ.ಸುರೇಶಬಾಬು, ಪ್ರಾಧ್ಯಾಪಕ ಡಾ.ವೈ.ಎಸ್.ರವಿಕುಮಾರ್ ಹಾಗೂ ಮೆಡಿಸಿನ್ ವಿಭಾಗದ ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು, ನರ್ಸಿಂಗ್ ವಿದ್ಯಾರ್ಥಿಗಳು ಹಾಜರಿದ್ದರು.

ನಾಲ್ವರು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರಕಾರ ಆದೇಶ

ಬೆಂಗಳೂರು, ಮೇ 19– ರಾಜ್ಯ ಸರಕಾರವು ನಾಲ್ವರು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಮಂಗಳವಾರ ಆದೇಶ ಹೊರಡಿಸಿದೆ. ಸ್ಥಳ ನಿಯುಕ್ತಿಯ ನಿರೀಕ್ಷೆಯಲ್ಲಿದ್ದ ಹರ್ಷ ಗುಪ್ತ ಅವರನ್ನು, ರಾಜ್ಯ ಮೇಲ್ಮನವಿ ಪ್ರಾಧಿಕಾರದ ಮುಖ್ಯಸ್ಥರನ್ನಾಗಿ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾಧಿಕಾರಿ ನಾಗರಾಜ ಎನ್.ಎಂ. ಅವರನ್ನು ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿಯ ಒಂಬುಡ್ಸ್‌ಮನ್, ಕಲಬುರಗಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭನ್ವರ್ ಸಿಂಗ್ ಮೀನಾ ಅವರನ್ನು ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ನಿರ್ದೇಶಕ ರಾಹುಲ್ ಶರಣಪ್ಪ ಸಂಕನೂರ್ ಅವರನ್ನು ಕಲಬುರಗಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ.

ದೇಶ – ವಿದೇಶ

ಋಷಿಕೇಶ್ ಸಮೀಪ ಹಳಿ ತಪ್ಪಿದ ಉಜ್ಜಯಿನಿ ಎಕ್ಸ್‌ಪ್ರೆಸ್ ಬೋಗಿಗಳು



ಉತ್ತರಾಖಂಡ: ಇಲ್ಲಿನ ಋಷಿಕೇಶ್‌ನ ಯೋಗ ನಗರಿ ರೈಲು ನಿಲ್ದಾಣದ ಸಮೀಪ ಸೋಮವಾರ ರಾತ್ರಿ ಉಜ್ಜಯಿನಿ ಎಕ್ಸ್‌ಪ್ರೆಸ್ ರೈಲಿನ ಮೂರು ಬೋಗಿಗಳು ಹಳಿ ತಪ್ಪಿದ್ದು, ಅದೃಷ್ಟವಶಾತ್ ಹೆಚ್ಚಿನ ಅನಾಹುತ ಸಂಭವಿಸಿಲ್ಲ. ಈ ಘಟನೆ ರಾತ್ರಿ ಸುಮಾರು 9.30ರ ವೇಳೆಗೆ ಖಂಡ್ ಗ್ರಾಮ ಪ್ರದೇಶದಲ್ಲಿ ಸಂಭವಿಸಿದ್ದು, ಈ ವೇಳೆ ರೈಲಿನಲ್ಲಿ ಯಾವುದೇ ಪ್ರಯಾಣಿಕರು ಇರಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಾಥಮಿಕ ತನಿಖೆ ಪ್ರಕಾರ, ನಿರ್ವಹಣಾ ಕಾರ್ಯಾಚರಣೆಗಳ ವೇಳೆ ಸಂಭವಿಸಿದ ಬ್ರೇಕ್ ವೈಫಲ್ಯವೇ ಹಳಿ ತಪ್ಪುವಿಕೆಗೆ ಕಾರಣವಾಗಿರಬಹುದು ಎಂದು ತಿಳಿದುಬಂದಿದೆ. ಆದರೆ, ಇಂತಹ ಪರಿಸ್ಥಿತಿಯಲ್ಲಿ ಸಂಪೂರ್ಣ ರೈಲು ಚಲನೆಯಾಗಿರುವುದು ಹಲವು ಪ್ರಶ್ನೆಗಳಿಗೆ ಕಾರಣವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಹಿರಿಯ ರೈಲ್ವೆ ಅಧಿಕಾರಿಗಳು ಅಪಘಾತ ಸ್ಥಳಕ್ಕೆ ಹಳಿ ತಪ್ಪಿದ ಸುಮಾರು ಎರಡೂವರೆ ಗಂಟೆಗಳ ಬಳಿಕ ತಲುಪಿದ್ದು, ಅಷ್ಟರಲ್ಲಿ ಸಾರ್ವಜನಿಕರು ದೊಡ್ಡ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಬಳಿಕ ರೈಲ್ವೆ ಪೊಲೀಸ್ ಸಿಬ್ಬಂದಿ ಜನರನ್ನು ತೆರವುಗೊಳಿಸಿ, ಪರಿಶೀಲನೆ ನಡೆಸಿದರು. ಘಟನೆ ಕುರಿತು ರೈಲ್ವೆ ಇಲಾಖೆ ತನಿಖೆ ಆರಂಭಿಸಿದೆ.

ಮಸೀದಿ ಮೇಲೆ ಗುಂಡಿನ ದಾಳಿ ಮಾಡಿ ಆತ್ಮಹತ್ಯೆಗೆ ಶರಣಾದ ಅಪ್ರಾಪ್ತರು



ಅಮೆರಿಕ: ಇಲ್ಲಿನ ಸ್ಯಾನ್ ಡಿಯಾಗೋ ಮಸೀದಿಯ ಮೇಲೆ ಹದಿಹರೆಯದ ಅಪ್ರಾಪ್ತರ ಗುಂಪು ಮನಬಂದಂತೆ ಗುಂಡಿನ ದಾಳಿ ನಡೆಸಿದ್ದು, ಈ ಘಟನೆಯಲ್ಲಿ ಮೂವರು ಸಾವನ್ನಪ್ಪಿದ್ದಾರೆ.

ದಾಳಿ ಬಳಿಕ ಗುಂಡಿನ ದಾಳಿ ನಡೆಸಿದವರು ತಮಗೆ ತಾವೇ ಗುಂಡಿಕ್ಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಘಟನೆಯನ್ನು ದ್ವೇಷಾಪರಾಧದ ಘಟನೆ ಎಂದು ಪರಿಗಣಿಸಿ ಪೊಲೀಸರು ತನಿಖೆ ನಡೆಸಿದ್ದಾರೆ. ಗುಂಡಿನ ದಾಳಿ ನಡೆಸಿದವರಲ್ಲಿ ಓರ್ವ ಅಪ್ರಾಪ್ತನಾಗಿದ್ದು, ದಾಳಿಗೂ ಮುನ್ನ ಆತನ ತಾಯಿ ಪೊಲೀಸರಿಗೆ ಕರೆ ಮಾಡಿ, ನನ್ನ ಮಗ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಆತ ಮನೆಯಲ್ಲಿದ್ದ ಶಸ್ತ್ರಾಸ್ತ್ರ ಮತ್ತು ನನ್ನ ವಾಹನದೊಂದಿಗೆ ಕಣ್ಮರೆಯಾಗಿದ್ದಾನೆ ಎಂದು ಕಳವಳ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆ ಆತನ ಶೋಧಕ್ಕೆ ಪೊಲೀಸರು ಮುಂದಾಗಿದ್ದರು. ಈ ಬೆನ್ನಲ್ಲೇ ಈ ದುರಂತ ನಡೆದಿದೆ. ಘಟನೆಯಲ್ಲಿ ಶಂಕಿತರಲ್ಲಿ ದಾಳಿ ನಡೆಸಿದ ಮೂವರು, ಇಬ್ಬರು ಭದ್ರತಾ ಸಿಬ್ಬಂದಿ ಹಾಗೂ ಸಾರ್ವಜನಿಕರೊಬ್ಬರು ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಇಸ್ಲಾಂ ಧರ್ಮದ ಬಗ್ಗೆ ತಿಳಿದುಕೊಳ್ಳಲು ಮುಸ್ಲಿಮೇತರರ ಗುಂಪು ಸೋಮವಾರ ಬೆಳಗ್ಗೆ ಮಸೀದಿಗೆ ಪ್ರವಾಸ ಕೈಗೊಂಡಿದ್ದ ಸಂದರ್ಭದಲ್ಲಿ ಈ ಘಟನೆ ನಡೆದಿದೆ.

ಮೂಲೆಗುಂಪಾಗಿದ್ದ ಐಪಿಎಸ್ ಅಧಿಕಾರಿಗೆ ಮಹತ್ವದ ಜವಬ್ದಾರಿ



ಪಶ್ಚಿಮ ಬಂಗಾಳ: ಈ ಹಿಂದಿನ ಟಿಎಂಸಿ ಸರ್ಕಾರದ ಅವಧಿಯಲ್ಲಿ ಮೂಲೆಗುಂಪಾಗಿದ್ದ ಹಿರಿಯ ಐಪಿಎಸ್ ಅಧಿಕಾರಿ ದಮಯಂತಿ ಸೇನ್ ಅವರನ್ನು ನೂತನ ಬಿಜೆಪಿ ಸರ್ಕಾರವು ಮಹಿಳೆಯರ ಮೇಲಿನ ದೌರ್ಜನ್ಯ ತನಿಖಾ ಆಯೋಗದ ಪ್ರಮುಖ ಜವಾಬ್ದಾರಿಗೆ ನೇಮಕ ಮಾಡಿದೆ. ಕಳೆದ 15 ವರ್ಷಗಳ ಟಿಎಂಸಿ ಆಡಳಿತಾವಧಿಯಲ್ಲಿ ನಡೆದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ಸಮುದಾಯದ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯಗಳ ತನಿಖೆಗಾಗಿ ರಚಿಸಲಾಗಿರುವ ಈ ವಿಶೇಷ ಆಯೋಗದ ಸದಸ್ಯ ಕಾರ್ಯದರ್ಶಿಯಾಗಿ ದಮಯಂತಿ ಸೇನ್‌ರನ್ನು ನೇಮಕ ಮಾಡಿರುವುದಾಗಿ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಸೋಮವಾರ ಅಧಿಕೃತವಾಗಿ ಘೋಷಿಸಿದ್ದಾರೆ.

ದಮಯಂತಿ ಸೇನ್, 2012ರಲ್ಲಿ ನಡೆದ ಕೋಲ್ಕತಾದ ಪಾರ್ಕ್ ಸ್ಟ್ರೀಟ್ ಗ್ಯಾಂಗ್ ರೇಪ್ ಪ್ರಕರಣದ ತನಿಖೆ ನಡೆಸುವ ಮೂಲಕ ದೇಶಾದ್ಯಂತ ದೊಡ್ಡ ಮಟ್ಟದಲ್ಲಿ ಸುದ್ದಿಯಾಗಿದ್ದರು. ಆದರೆ, ಅಂದಿನ ಸಿಎಂ ಮಮತಾ ಬ್ಯಾನರ್ಜಿ ಈ ಘಟನೆಯನ್ನು ತಮ್ಮ ಸರ್ಕಾರದ ತೇಜೋವಧೆ ಮಾಡಲು ಹೆಣೆದ ಕಟ್ಟುಕಥೆ ಎಂದು ಸಾರ್ವಜನಿಕವಾಗಿ ತಳ್ಳಿಹಾಕಿದ್ದರು. ರಾಜಕೀಯ ಒತ್ತಡಗಳ ನಡುವೆಯೂ ಆರೋಪಿಗಳನ್ನು ಪತ್ತೆಹಚ್ಚಿ, ಅತ್ಯಾಚಾರ ನಡೆದಿರುವುದನ್ನು ಸಾಕ್ಷ್ಯಾಧಾರಗಳ ಸಮೇತ ಸಾಬೀತುಪಡಿಸಿತ್ತು.

ಪಾಕಿಸ್ತಾನದ ರಸ್ತೆ–ವೃತ್ತಗಳಿಗೆ ಮತ್ತೆ ಹಿಂದೂ–ಸಿಖ್ ಹೆಸರು!



ಪಾಕಿಸ್ತಾನ: ಇಲ್ಲಿನ ಪ್ರಮುಖ ನಗರ ಲಾಹೋರ್‌ನ ಪ್ರಮುಖ ಬೀದಿಗಳಿಗಿದ್ದ ಇಸ್ಲಾಮಿಕ್ ಹೆಸರುಗಳನ್ನು ಬದಲಿಸಿ ಕೃಷ್ಣ ನಗರ, ರಾಮಗಲ್ಲಿ ಎನ್ನುವ ಫಲಕಗಳನ್ನು ಹಾಕಲಾಗುತ್ತಿದೆ. ದಶಕಗಳ ಹಿಂದೆ ಹಿಂದೂ–ಸಿಖ್ ಹೆಸರುಗಳನ್ನೆಲ್ಲಾ ಅಳಿಸಿಹಾಕಿದ್ದ ಪಾಕಿಸ್ತಾನ ಈಗ ಇದ್ದಕ್ಕಿದ್ದಂತೆ ತನ್ನ ನಿಲುವು ಬದಲಿಸಿಕೊಂಡಿದೆ. 1990ರ ದಶಕದಲ್ಲಿ ಲಾಹೋರ್‌ನ ಕೃಷ್ಣನಗರ, ಸಂತ ನಗರವನ್ನು ಸೇರಿಸಿ ಇಸ್ಲಾಂಪುರ ಎಂದು ಬದಲಾಯಿಸಲಾಗಿತ್ತು. ಆದರೆ ಈಗ, ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಸಿಎಂ ಮರಿಯಮ್ ನವಾಜ್ ನೇತೃತ್ವದ ಸರ್ಕಾರ, ಇಸ್ಲಾಂಪುರ ಎನ್ನುವ ಹೆಸರನ್ನೇ ಅಧಿಕೃತವಾಗಿ ಅಳಿಸಿಹಾಕಿ, ಮತ್ತೆ ಕೃಷ್ಣನಗರ, ಸಂತನಗರ ಎಂದು ಮರುನಾಮಕರಣ ಮಾಡುತ್ತಿದೆ. ಹಾಗೆಯೇ ಮುಸ್ತಫಾಬಾದ್ ಅನ್ನು ಧರಂಪುರ, ಮೌಲಾನಾ ಜಾಫರ್ ಅಲಿ ಖಾನ್ ಚೌಕ್‌ವನ್ನು ಲಕ್ಷ್ಮೀ ಚೌಕ್, ಬಾಬ್ರಿ ಮಸೀದಿ ಚೌಕ್ ಅನ್ನು ಜೈನ್‌ಮಂದಿರ ಚೌಕ್, ಗಾಜಿಯಾಬಾದ್ ಅನ್ನು ಕುಮ್ಹಾರ್‌ಪುರ, ಹಮೀದ್ ನಿಜಾಮಿ ರೋಡ್ ಅನ್ನು ಟೆಂಪಲ್ ಸ್ಟ್ರೀಟ್ ಎಂದು ಬದಲಿಸಲಾಗಿದೆ. ಅಲ್ಲದೆ, ಹಲವು ರಸ್ತೆಗಳಿಗಿದ್ದ ಬ್ರಿಟಿಷ್ ಕಾಲದ ಹೆಸರನ್ನೂ ಮರುನಾಮಕರಣ ಮಾಡಲಾಗುತ್ತಿದೆ. ಲಾಹೋರ್‌ನ ಐತಿಹಾಸಿಕ, ಸಾಂಸ್ಕೃತಿಕ ಅಸ್ಮಿತೆಯನ್ನ ಮರುಸ್ಥಾಪಿಸುವುದಷ್ಟೇ ಇದರ ಉದ್ದೇಶ ಎಂದು ಅಲ್ಲಿನ ಸರ್ಕಾರ ಸಮರ್ಥಿಸಿಕೊಂಡಿದೆ.

ದೇಶದ 18 ಮಹಾನಗರಗಳಲ್ಲಿ 'ವಾಟರ್ ಮೆಟ್ರೋ' ಸಾರಿಗೆಗೆ ಚಿಂತನೆ



ನವದೆಹಲಿ: ಕೊಚ್ಚಿಯಲ್ಲಿ 'ವಾಟರ್ ಮೆಟ್ರೋ' ಯಶಸ್ಸು ಕಂಡ ಬೆನ್ನಲ್ಲೇ ದೇಶದ 18 ಮಹಾನಗರಗಳಲ್ಲಿ ಈ ವಿಶೇಷ ಸಾರಿಗೆ ಯೋಜನೆ ರೂಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಈ ಸಂಬಂಧ ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ಸಚಿವಾಲಯ ತಯಾರಿ ನಡೆಸಿದ್ದು, ಈಗಾಗಲೇ ಕರಡು ರಾಷ್ಟ್ರೀಯ ಜಲ ಮೆಟ್ರೋ ನೀತಿಯನ್ನೂ ಸಿದ್ಧಪಡಿಸಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಮೊದಲ ಹಂತದಲ್ಲಿ ಉತ್ತರ ಪ್ರದೇಶದ ವಾರಣಾಸಿ, ಅಯೋಧ್ಯೆ ಮತ್ತು ಪ್ರಯಾಗ್‌ರಾಜ್, ಶ್ರೀನಗರ ಮತ್ತು ಪಾಟ್ನಾ, ಎರಡನೇ ಹಂತದಲ್ಲಿ ಅಸ್ಸಾಂನ ತೇಜ್‌ಪುರ ಮತ್ತು ದಿಬ್ರುಗಢದಲ್ಲಿ ಈ ಸಾರಿಗೆ ವ್ಯವಸ್ಥೆ ಪರಿಚಯಿಸಲು ಯೋಜಿಸಲಾಗಿದೆ. ಅಗ್ಗದ ಮತ್ತು ಮಾಲಿನ್ಯ ಮುಕ್ತ ಸಾರಿಗೆ ವಿಧಾನವಾಗಿರುವ ವಾಟರ್ ಮೆಟ್ರೋ, ರಸ್ತೆಗಳಲ್ಲಿನ ದಟ್ಟಣೆಯನ್ನು ಕಡಿಮೆ ಮಾಡುತ್ತದೆ. ಕೊಚ್ಚಿಯಲ್ಲಿ 2023ರ ಏಪ್ರಿಲ್ 25ರಂದು ಪ್ರಾರಂಭವಾದ ವಾಟರ್ ಮೆಟ್ರೋ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದ್ದರು. ಸ್ಥಳೀಯರಿಗೆ ಸುರಕ್ಷಿತ ಹಾಗೂ ಕೈಗೆಟುಕುವ ದರದಲ್ಲಿ ಪ್ರಯಾಣ ಸೌಕರ್ಯ ಒದಗಿಸುವುದರ ಜೊತೆಗೆ ಪ್ರವಾಸೋದ್ಯಮವನ್ನೂ ಉತ್ತೇಜಿಸುತ್ತಿದೆ.

ಜಿಲ್ಲೆಯಾದ್ಯಂತ ಇಂದು ಔಷಧಿ ಅಂಗಡಿಗಳ ಬಂದ್

ಮಡಿಕೇರಿ, ಮೇ 19–ಆನ್‌ಲೈನ್ ಔಷಧಿಗಳ ಮಾರಾಟವನ್ನು ಸ್ಥಗಿತಗೊಳಿಸುವಂತೆ ಆಗ್ರಹಿಸಿ ಮೇ 20 ರಂದು ನಡೆಯಲಿರುವ ಔಷಧಿ ವ್ಯಾಪಾರಸ್ಥರ ರಾಷ್ಟ್ರೀಯ ಮಟ್ಟದ ಪ್ರತಿಭಟನೆಯ ಭಾಗವಾಗಿ ಜಿಲ್ಲಾ ವ್ಯಾಪ್ತಿಯ ಎಲ್ಲಾ ಔಷಧಿ ಅಂಗಡಿಗಳು ಬಂದ್ ಆಗಲಿವೆ.

ಜಿಲ್ಲಾ ವ್ಯಾಪ್ತಿಯಲ್ಲಿ 200 ಔಷಧ ವ್ಯಾಪಾರಸ್ಥರಿದ್ದಾರೆ. ಇವರೆಲ್ಲರೂ ತಮ್ಮ ಔಷಧಿ ಅಂಗಡಿಗಳನ್ನು ಸಾಂಕೇತಿಕವಾಗಿ 1 ದಿನ ಬಂದ್ ಮಾಡಿ ಪ್ರತಿಭಟನೆ ನಡೆಸಲಿದ್ದಾರೆ ಎಂದು ರಾಷ್ಟ್ರೀಯ ಸಂಘಟನೆಯ ಸಂಘಟನಾ ಕಾರ್ಯದರ್ಶಿ ಅಂಬೇಕಲ್ ಕೆ.ಜೀವನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಪ್ರತಿಭಟನೆಯ ಸಂದರ್ಭ ಸಾರ್ವಜನಿಕರಿಗೆ ಯಾವುದೇ ಅನಾನುಕೂಲತೆ ಉಂಟಾಗಬಾರದು ಎನ್ನುವ ಉದ್ದೇಶದಿಂದ ಆಸ್ಪತ್ರೆಗಳಲ್ಲಿ ಇರುವ


ಔಷಧಿ ವ್ಯಾಪಾರಸ್ಥರು ಬಂದ್ ನಡೆಸುವ ಹಿನ್ನೆಲೆಯಲ್ಲಿ ಸುದ್ದಿಗೋಷ್ಠಿ ನಡೆಸಿದರು.

ಔಷಧಿ ಅಂಗಡಿಗಳಿಗೆ ಬಂದ್‌ನಿಂದ ವಿನಾಯಿತಿ ನೀಡಲಾಗಿದೆ ಎಂದು ಹೇಳಿದರು.

ಆದೇಶ ಹಿಂಪಡೆಯಿರಿ: ಕೊರೋನಾ ಮಹಾಮಾರಿ ರಾಷ್ಟ್ರ ಮಟ್ಟದಲ್ಲಿ ಕಾಣಿಸಿಕೊಂಡು ಆತಂಕವನ್ನು ಸೃಷ್ಟಿಸಿದ್ದ ಸಂದರ್ಭ ಕೇಂದ್ರ ಸರ್ಕಾರ ಆನ್‌ಲೈನ್‌ನಲ್ಲಿ ಔಷಧಿ ವ್ಯಾಪಾರಕ್ಕೆ ಅವಕಾಶವನ್ನು ಒದಗಿಸಿತು. ಅದನ್ನೇ ಆಧಾರವಾಗಿಸಿಕೊಂಡು ಇಂದಿಗೂ ಆನ್‌ಲೈನ್‌ನಲ್ಲಿ ಔಷಧಿ ವ್ಯಾಪಾರ ನಡೆಸಲಾಗುತ್ತಿದೆ. ಆದರೆ, ಇಂತಹ ವ್ಯಾಪಾರ ಗ್ರಾಹಕರ ಹಿತಕ್ಕೆ ವಿರುದ್ಧವಾಗಿದೆ. ಆನ್‌ಲೈನ್ ಮೂಲಕ ಔಷಧಿ ಖರೀದಿಸಿದ ಗ್ರಾಹಕರು ಯಾವುದೇ ಸಮಸ್ಯೆಗಳಿಗೆ ಒಳಗಾದಲ್ಲಿ ದೂರು ನೀಡಲು ಸಾಧ್ಯವಾಗುವುದಿಲ್ಲ. ತಕ್ಷಣವೆ ಆನ್‌ಲೈನ್ ಔಷಧಿ ವ್ಯಾಪಾರಕ್ಕೆ ನೀಡಿರುವ ಆದೇಶವನ್ನು ಹಿಂದಕ್ಕೆ ಪಡೆಯುವಂತೆ ಆಗ್ರಹಿಸಿದರು.

ವಿನಾಯಿತಿ ಸ್ಥಗಿತಗೊಳಿಸಿ: ಔಷಧಿ ವ್ಯಾಪಾರಸ್ಥರೆಲ್ಲರೂ ನ್ಯಾಷನಲ್ ಪ್ರೈಸಿಂಗ್ ಅಥಾರಿಟಿ ನಿಗದಿಪಡಿಸಿದ ದರದಂತೆ ಮಾರಾಟ ಮಾಡುವ ವ್ಯಾಪಾರಸ್ಥರಿಗೆ ಕಮಿಷನ್ ಶೇ.17 ರಿಂದ 20ರಷ್ಟಿರುತ್ತದೆ. ಆದರೆ, ಆನ್‌ಲೈನ್ ಮೂಲಕ ಔಷಧಿ ಮಾರಾಟ ಮಾಡುವ ದೊಡ್ಡ ಕಂಪನಿಗಳು ಶೇ.45 ರಿಂದ 50ರಷ್ಟು ರಿಯಾಯಿತಿಯನ್ನು ಗ್ರಾಹಕರಿಗೆ ನೀಡಲು ಸಾಧ್ಯವಿಲ್ಲ. ಇದನ್ನು ತಕ್ಷಣ ಸ್ಥಗಿತಗೊಳಿಸಬೇಕೆಂದು ಆಗ್ರಹಿಸಿದರು. ಇದಕ್ಕೂ ಮಿಗಿಲಾಗಿ ದೊಡ್ಡ ಪ್ರಮಾಣದಲ್ಲಿ ಗುಣಮಟ್ಟವನ್ನು ಖಾತರಿಪಡಿಸದ ನಕಲಿ ಔಷಧಿಗಳ ಮಾರಾಟ ವ್ಯಾಪಕವಾಗಿ ನಡೆಯುತ್ತಿದೆ. ಇವುಗಳ ಮೇಲೆ ಕಡಿವಾಣ ಹಾಕಬೇಕೆಂದು ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವುದಾಗಿ ತಿಳಿಸಿದರು.

ಜಿಲ್ಲಾ ಔಷಧಿ ವ್ಯಾಪಾರಸ್ಥರ ಸಂಘದ ಉಪಾಧ್ಯಕ್ಷ ಅಂಬೆಕಲ್ಲು ವಿನೋದ್, ಕಾರ್ಯದರ್ಶಿ ಡಿ.ಐ.ಪುರುಷೋತ್ತಮ, ಜಂಟಿ ಕಾರ್ಯದರ್ಶಿ ಕೆ.ವಸಂತ ಕುಮಾರ್, ಖಜಾಂಚಿ ಪ್ರಸಾದ್ ಗೌಡ, ಆಡಳಿತ ಮಂಡಳಿ ಸದಸ್ಯ ತಿಲಕ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇಂದು ತಾಲೂಕು 12ನೇ ಕನ್ನಡ ಸಾಹಿತ್ಯ ಸಮ್ಮೇಳನ


ಸಾಹಿತ್ಯ ಸಮ್ಮೇಳನ ನಡೆಯುವ ಸ್ಥಳದಲ್ಲಿ ಭರದ ಸಿದ್ಧತಾ ಕಾರ್ಯ.


ಮಡಿಕೇರಿ, ಮೇ 19–ತಾಲೂಕು ಮಟ್ಟದ 12ನೇ ಕನ್ನಡ ಸಾಹಿತ್ಯ ಸಮ್ಮೇಳನವು ನಾಳೆ (ಮೇ 20) ನಡೆಯಲಿದ್ದು, ಕಡಂಗ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನ ಸರ್ವಾಲಂಕಾರಗೊಂಡಿದ್ದು, ಮೈಸೂರಿನ ಪತ್ರಕರ್ತ ಸಾಹಿತಿ ಐತಿಚಂಡ ರಮೇಶ್ ಉತ್ತಪ್ಪ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದಾರೆ.

ಬೆಳಗ್ಗೆ 8 ಗಂಟೆಗೆ ಧ್ವಜಾರೋಹಣ, 8.30 ಗಂಟೆಗೆ ನೆನಪಿನ ಪ್ರವೇಶ ದ್ವಾರ ಉದ್ಘಾಟನೆ, 9 ಗಂಟೆಗೆ ಕಡಂಗದ ವಿಜಯ ಪ್ರೌಢಶಾಲೆಯಿಂದ ಸಮ್ಮೇಳನ ನಡೆಯುವ ಜಿಎಂಪಿ ಶಾಲಾ ಮೈದಾನದವರೆಗೆ ವಿವಿಧ ಕಲಾ ತಂಡಗಳೊಂದಿಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಯಲಿದೆ. ನಂತರ ವಿವಿಧ ಕಲಾತಂಡಗಳ ಉದ್ಘಾಟನೆ, ಮುಖ್ಯ ದ್ವಾರ, ಪುಸ್ತಕ ಮಳಿಗೆ, ಸ್ತ್ರೀ ಶಕ್ತಿ ಮಳಿಗೆ ಸಭಾಂಗಣ ಮತ್ತು ವೇದಿಕೆ ಉದ್ಘಾಟನೆ ನಡೆಯಲಿದೆ.

ಬೆಳಗ್ಗೆ 10 ಗಂಟೆಗೆ ಹರದಾಸ ಅಪ್ಪನೆರವಂಡ ಅಪ್ಪಚ್ಚ ಕವಿ ವೇದಿಕೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ಕಡಂಗ ಪಟ್ಟಣದಲ್ಲಿ ಕನ್ನಡ ಬಾವುಟಗಳು ರಾರಾಜಿಸುತ್ತಿದ್ದು, ಸಾಹಿತ್ಯ ಹಬ್ಬದ ಕಳೆ ಕಂಡು ಬರುತ್ತಿದೆ. ವಿಜಯ ಪ್ರೌಢಶಾಲೆಯಿಂದ ಸಮ್ಮೇಳನ ನಡೆಯುವ ಜಿಎಂಪಿ ಶಾಲಾ ಮೈದಾನದವರೆಗೆ ಸಾಹಿತ್ಯ ಲೋಕದ ದಿಗ್ಗಜರು ಹಾಗೂ ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾವಚಿತ್ರಗಳನ್ನು ಅಳವಡಿಸಲಾಗಿದೆ. ಸಭಾ ಕಾರ್ಯಕ್ರಮ ನಡೆಯುವ ಮೈದಾನದಲ್ಲಿ ಬೃಹತ್ ವೇದಿಕೆಯನ್ನು ಸಿದ್ಧಪಡಿಸಲಾಗಿದೆ.

ಬಳಿಕ ಬೆಳಗ್ಗೆ 10 ಗಂಟೆಗೆ ಹರದಾಸ ಅಪ್ಪನೆರವಂಡ ಅಪ್ಪಚ್ಚ ಕವಿ ವೇದಿಕೆಯಲ್ಲಿ ಸಭಾ ಕಾರ್ಯಕ್ರಮ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು, ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ.ಮಂತರ್ ಗೌಡ, ಸಂಸದ ಯದುವೀರ್, ಮಂಡೇಪಂಡ ಸುಜಾ ಕುಶಾಲಪ್ಪ, ಕೆ.ಜಿ.ಬೋಪಯ್ಯ, ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್, ಹಿಂದಿನ ಸಮ್ಮೇಳನಾಧ್ಯಕ್ಷ ಡಾ.ವಿಜಯ್ ಪೂಣಚ್ಚ ತಂಬಂಡ, ಸಿ.ಎಸ್.ಅರುಣ್ ಮಾಚಯ್ಯ, ತೀತಿರ ಧರ್ಮಜ ಉತ್ತಪ್ಪ, ಮಂದ್ರಿರ ಮೋಹನ್ ದಾಸ್, ಜಿಲ್ಲಾ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ತಾಲೂಕು ಅಧ್ಯಕ್ಷ ಕಡ್ಲೇರ ತುಳಸಿ ಮೋಹನ್, ಅಂಬೆಕಲ್ಲು ನವೀನ್ ಭಾಗವಹಿಸಲಿದ್ದಾರೆ.

ಕೆರೆಯಲ್ಲಿ ಸಿಲುಕಿ ಕಾಡಾನೆ ಪರದಾಟ



ಮಡಿಕೇರಿ, ಮೇ 19–ಆಹಾರ ಅರಸಿಕೊಂಡು ತೋಟಕ್ಕೆ ಬಂದ ಕಾಡಾನೆ ಕೆರೆಯಲ್ಲಿ ಸಿಲುಕಿ ಪರದಾಡಿದ ಘಟನೆ ವಿರಾಜಪೇಟೆ ಸಮೀಪದ ಚೆಂಬೆಬೆಳ್ಳೂರಿನಲ್ಲಿ ನಡೆದಿದೆ. ಕಾಡಾನೆ ರಾತ್ರಿ ಕೆರೆಗೆ ನೀರು ಕುಡಿಯಲು ಇಳಿದು ಬಳಿಕ ಹೊರ ಬರಲಾಗದೆ ಅಲ್ಲೇ ಉಳಿದಿದೆ. ತೋಟದ ಕಾರ್ಮಿಕರು ಮಾಲೀಕರಿಗೆ ಮಾಹಿತಿ ನೀಡಿದರು. ಮಾಲಿಕರು ಅರಣ್ಯ ಅಧಿಕಾರಿಗಳಿಗೆ ಮಾಹಿತಿ ನೀಡಿದಾಗ ಸ್ಥಳಕ್ಕಾಗಮಿಸಿದ ಅರಣ್ಯ ಸಿಬ್ಬಂದಿಗಳು ಜೆಸಿಬಿ ಮೂಲಕ ಕೆರೆ ದಂಡೆಯ ಒಂದು ಬದಿಯನ್ನು ಅಗೆದು, ಕಾಡಾನೆ ಹೊರ ಬರಲು ದಾರಿ ಮಾಡಿದ್ದಾರೆ. ಬಳಿಕ ಕಾಡಾನೆ ಕೆರೆಯಿಂದ ಹೊರ ಬಂದು ತೋಟದೊಳಗೆ ನುಸುಳಿ ಮರೆಯಾಗಿದೆ. ಈ ಕಾಡಾನೆಯನ್ನು ಕಾಡಿಗೆ ಅಟ್ಟಲಾಗಿದೆ ಎಂದು ಅರಣ್ಯ ಇಲಾಖೆ ಮಾಹಿತಿ ನೀಡಿದೆ.

ಆಟ್‌ಪಾಟ್ ಶಿಬಿರ ಆಚಾರ, ವಿಚಾರಕ್ಕೆ ಬುನಾದಿ


ಶಿಬಿರಾರ್ಥಿ ಚಿಣ್ಣರು ಉಮ್ಮತ್ತಾಟ್ ಪ್ರದರ್ಶನ ನೀಡುತ್ತಿರುವುದು

ನಾಪೋಕ್ಲು, ಮೇ 19–(ದುಗ್ಗಳ) ಕೊಡವ ಜನಾಂಗದ ಆಚಾರ, ವಿಚಾರ ಪದ್ಧತಿ, ಪರಂಪರೆ, ಸಂಸ್ಕೃತಿ ವಿಭಿನ್ನವಾಗಿದ್ದು ಆಟ್‌ಪಾಟ್ ಶಿಬಿರಗಳ ಮೂಲಕ ಯುವ ಜನಾಂಗ ಅದನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಕೆಲಸ ಮಾಡಬೇಕಿದೆ ಎಂದು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ ಹೇಳಿದರು.

ಇಲ್ಲಿನ ಕೊಡವ ಸಮಾಜದ ಹರದಾಸ ಅಪ್ಪನೆರವಂಡ ಅಪ್ಪಚ್ಚ ಕವಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಆಟ್‌ಪಾಟ್ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು, ಕೊಡವ ಜನಾಂಗದ ಭಾಷೆ, ಸಂಸ್ಕೃತಿ, ಆಚಾರ, ವಿಚಾರಗಳು ವಿಭಿನ್ನವಾಗಿವೆ. ಎಲ್ಲಾ ಸಮುದಾಯದವರು ಮೆಚ್ಚುವಂತಹ ಸಂಸ್ಕೃತಿಯಾಗಿದೆ. ಶಿಬಿರಾರ್ಥಿಗಳು ಶಿಬಿರದಲ್ಲಿ ಕಲಿತ ಉತ್ತಮ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಕೊಡವ ಜನಾಂಗ ಸಮುದಾಯಕ್ಕೆ ಉತ್ತಮವಾದುದನ್ನು ಬಯಸಬೇಕು. ಭಾಷೆ, ಸಂಸ್ಕೃತಿಯನ್ನು ಮೂಲೆ ಗುಂಪು ಮಾಡಬಾರದು ಎಂದರು.

ಪದ್ಮಶ್ರೀ ಪುರಸ್ಕೃತೆ ಐಮುಡಿಯಂಡ ರಾಣಿ ಮಾಚಯ್ಯ ಮಾತನಾಡಿ, ಕೊಡವ ಸಂಸ್ಕೃತಿಯನ್ನು ಎಲ್ಲೆಡೆ ಪಸರಿಸುವಂತಹ ಕೆಲಸವನ್ನು ಮಾಡಬೇಕಿದೆ ದೇಶದಲ್ಲಿ ಕೊಡವ ಜನಾಂಗಕ್ಕೆ ಉತ್ತಮ ಹೆಸರಿದ್ದು, ಕಲೆ ಸಂಸ್ಕೃತಿಗೆ ದೇಶದ ಯಾವ ಮೂಲೆಯಲ್ಲಾದರೂ ಉತ್ತಮ ಗೌರವ ಲಭಿಸುತ್ತದೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

ಅಧ್ಯಕ್ಷತೆ ವಹಿಸಿದ್ದ ಕೊಡವ ಸಮಾಜದ ಅಧ್ಯಕ್ಷ ಮುಂಡಂಡ ಸಿ.ನಾಣಯ್ಯ ಮಾತನಾಡಿ, ಶಿಬಿರ ಕೇವಲ ವೇದಿಕೆಯ ಭಾಷಣಗಳಿಗೆ, ಮಾಧ್ಯಮಗಳ ಪ್ರಸಾರಕ್ಕೆ ಸೀಮಿತವಾಗಬಾರದು. ಜನಾಂಗದ ಸಂಸ್ಕೃತಿಯನ್ನು ಅನುಷ್ಠಾನಕ್ಕೆ ತರಬೇಕಿದೆ. ಆದರೆ ಇದರಲ್ಲಿ ನಿರೀಕ್ಷೆಯಷ್ಟು ಯಶಸ್ವಿಯಾಗಲು ಸಾಧ್ಯವಾಗಿಲ್ಲ ಎಂದು ತಮ್ಮ ಬೇಸರ ವ್ಯಕ್ತಪಡಿಸಿದರು. ತರಬೇತಿದಾರರಾದ ಚೇನಂಡ ಮಧು ಮಾಚಯ್ಯ, ಬೋಪಣ್ಣ ಬೊಳ್ಳಮ್ಮ ನಾಣಯ್ಯ, ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಕೊಡವ ಸಮಾಜ ಕಾರ್ಯದರ್ಶಿ ಕುಲ್ಲೇಟಿರ ಅಜಿತ್ ನಾಣಯ್ಯ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವೇದಿಕೆಯಲ್ಲಿ ಕೊಡವ ಸಮಾಜದ ಉಪಾಧ್ಯಕ್ಷ ಕರವಂಡ ಲವ ನಾಣಯ್ಯ, ಖಜಾಂಚಿ ಚೌರಿರ ಉದಯ, ತರಬೇತಿದಾರರಾದ ಚೇಯಕ ಪೂವಂಡ ದೇವಯ್ಯ, ಪಾಡೇಯಂಡ ಕಟ್ಟಿ ಕುಶಾಲಪ್ಪ ಸಮಾಜದ ಹಾಗೂ ಪೊಮ್ಮಕ್ಕಡ ಪರಿಷತ್ತಿನ ನಿರ್ದೇಶಕರು ಉಪಸ್ಥಿತರಿದ್ದರು.

ಅಕ್ರಮ ವಲಸಿಗರನ್ನು ಮತದಾರರ ಪಟ್ಟಿಯಿಂದ ಕೈಬಿಡಲು ಸಿಎನ್‌ಸಿ ಆಗ್ರಹ




ಮಡಿಕೇರಿ, ಮೇ 19–ಮತದಾರರ ಪಟ್ಟಿಯಿಂದ ಅಕ್ರಮ ವಲಸಿಗ ನುಸುಳುಕೋರರನ್ನು ಕೈಬಿಡಬೇಕು ಮತ್ತು ಕೊಡವರನ್ನು ದೃಢೀಕರಿಸಬೇಕು ಎಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ರಾಜ್ಯ ಮುಖ್ಯ ಚುನಾವಣಾಧಿಕಾರಿಗಳಿಗೆ ಮನವಿ ಸಲ್ಲಿಸಿದೆ.

ಕರ್ನಾಟಕದಲ್ಲಿ ಮತದಾರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ ಸಂದರ್ಭ ಕೊಡಗು ಭೂಪ್ರದೇಶದಲ್ಲಿರುವ ಅಕ್ರಮ ವಲಸಿಗ ನುಸುಳುಕೋರರನ್ನು ಮತದಾರರ ಪಟ್ಟಿಯಿಂದ ಕೈಬಿಡಬೇಕು. ಕೊಡವರು ಹಾಗೂ ಇಲ್ಲಿ ನೆಲೆಸಿರುವ ಇತರ ನಾಗರಿಕರ ನಡುವಿನ ವ್ಯತ್ಯಾಸವನ್ನು ಗುರುತಿಸಬೇಕು ಎಂದು ಅಧ್ಯಕ್ಷ ಎನ್.ಯು ನಾಚಪ್ಪ ಕೋರಿದ್ದಾರೆ. ಮತ ಬ್ಯಾಂಕ್ ರಾಜಕಾರಣಿಗಳಿಂದಾಗಿ ನುಸುಳುಕೋರರು ಆಧಾರ್, ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ ಮತ್ತು ಇತರ ವಾಸಸ್ಥಳ ಪ್ರಮಾಣಪತ್ರಗಳನ್ನು ಪಡೆಯಲು ಪ್ರೋತ್ಸಾಹಿಸಿದ್ದಲ್ಲದೆ, ಭೂ ಮಂಜೂರಾತಿ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಅವರಿಗೆ ಟಿಕೆಟ್‌ಗಳನ್ನು ಸಹ ನೀಡಲಾಗಿದೆ ಎಂದು ಆರೋಪಿಸಿದ್ದಾರೆ.

ಕೊಡವರ ಭವಿಷ್ಯಕ್ಕಾಗಿ ಶಾಸನ ರೂಪಿಸಲು ಮತ್ತು ಸಾಂವಿಧಾನಿಕ ವ್ಯವಸ್ಥೆಯ ಮೂಲಕ ಐತಿಹಾಸಿಕ ನಿರಂತರತೆ, ಅನ್ಯೋನ್ಯತೆ ಮತ್ತು ಅಸ್ತಿತ್ವಕ್ಕೆ ಶಾಸನಬದ್ಧ ದೃಢೀಕರಣಕ್ಕಾಗಿ, ಸರ್ವೋಚ್ಛ ಶಾಸನ ಸಭೆಗಳಲ್ಲಿ ಎಂದರೆ ಸಂಸತ್ತು ಮತ್ತು ವಿಧಾನಸಭೆಯಲ್ಲಿ ಧ್ವನಿ ಹಾಗೂ ಸ್ಥಾನವನ್ನು ಆಶಿಸುತ್ತೇವೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಕಟ್ಟುನಿಟ್ಟಿನ ಮಾರ್ಗಸೂಚಿ ಪಾಲಿಸುವಂತೆ ಜಿಲ್ಲಾಡಳಿತಕ್ಕೆ ಸೂಚನೆ



ಮಡಿಕೇರಿ, ಮೇ 19–ಜಿಲ್ಲೆಯ ಪ್ರಸಿದ್ಧ ದುಬಾರೆ ಆನೆ ಶಿಬಿರದಲ್ಲಿ ಸಾಕಾನೆಗಳ ಕಾದಾಟದ ವೇಳೆ ಪ್ರವಾಸಿ ಮಹಿಳೆಯೊಬ್ಬರು ಮೃತಪಟ್ಟಿರುವ ಘಟನೆ ಅತ್ಯಂತ ದುರಾದೃಷ್ಟಕರ. ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ದುಬಾರೆ ಶಿಬಿರದಲ್ಲಿ ಕಟ್ಟುನಿಟ್ಟಿನ ಮಾರ್ಗಸೂಚಿ ಪಾಲಿಸುವಂತೆ ಜಿಲ್ಲಾಡಳಿತಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್ ಬೋಸರಾಜು ಸೂಚನೆ ನೀಡಿದ್ದಾರೆ.


ಘಟನೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ಅರಣ್ಯ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ, ಪ್ರಾಥಮಿಕ ಮಾಹಿತಿ ಪಡೆದು ಕೊಂಡಿದ್ದೇನೆ. ಘಟನೆಗೆ ನಿಖರ ಕಾರಣಗಳೇನು ಮತ್ತು ಪ್ರವಾಸಿ ಮಾರ್ಗಸೂಚಿ ನಿರ್ವಹಣೆಯಲ್ಲಿ ಏನಾದರೂ ಲೋಪವಾಗಿದೆಯೇ ಎಂಬ ಬಗ್ಗೆ ಸಮಗ್ರ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಸಚಿವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಆನೆ ಶಿಬಿರಗಳಲ್ಲಿ ಕಟ್ಟುನಿಟ್ಟಾಗಿ ಪ್ರವಾಸಿಗರ ನಿರ್ವಹಣೆಗೆ ಮಾರ್ಗಸೂಚಿ ಜಾರಿಗೆ ತರಲು ಸಚಿವರು ನಿರ್ದೇಶಿಸಿದ್ದಾರೆ. ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಮಾರ್ಗಸೂಚಿಗಳನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸುವಂತೆ ನಿಗಾವಹಿಸಬೇಕು ಎಂದು ಹೇಳಿದ್ದಾರೆ

ಕಾಡುಪ್ರಾಣಿಗಳ ನಡವಳಿಕೆಯನ್ನು ಹಾಗೂ ಅವುಗಳ ಪ್ರತಿಕ್ರಿಯೆಯನ್ನು ನಿಖರವಾಗಿ ಊಹಿಸಲು ಯಾರಿಗೂ ಸಾಧ್ಯವಿಲ್ಲ ಆದ್ದರಿಂದ ಅರಣ್ಯ ಪ್ರದೇಶಗಳು ಹಾಗೂ ಆನೆ ಶಿಬಿರಗಳಿಗೆ ಭೇಟಿ ನೀಡುವ ಪ್ರವಾಸಿಗರು ಅರಣ್ಯ ಇಲಾಖೆಯ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದಿದ್ದಾರೆ.

ಸುಳ್ಯದಲ್ಲಿ ಇಂದು ಸಾಹಿತ್ಯಾವಲೋಕನ ಸ್ಪರ್ಧಾ ಕಾರ್ಯಕ್ರಮ

ಮಡಿಕೇರಿ, ಮೇ 19–ಅರೆಭಾಷೆನ ಸುರುನ ಕವಿ ಹೊದ್ದೆಟ್ಟಿ ಭವಾನಿಶಂಕರ ಇವರ ಸಾಹಿತ್ಯಾವಲೋಕನ ಮತ್ತು ಸ್ಪರ್ಧಾ ಕಾರ್ಯಕ್ರಮವು ಮೇ 20 ರಂದು ಬೆಳಗ್ಗೆ 9.30 ಗಂಟೆಗೆ ಸುಳ್ಯ ಕೊಡಿಯಾಲಬೈಲು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆಯಲಿದೆ. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಅರೆಭಾಷೆನ ಸುರುನ ಕವಿ ಭವಾನಿಶಂಕರ ಹೊದ್ದೆಟ್ಟಿ, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಸದಸ್ಯ ಸಾಹಿತಿ ಸೂದನ ಈರಪ್ಪ, ಸುಳ್ಯ ಕೊಡಿಯಾಲ ಬೈಲು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಎನ್.ಪಿ.ಸತೀಶ್ ಕುಮಾರ್, ಅರೆಭಾಷೆ ಅಕಾಡೆಮಿ ಮಾಜಿ ಸದಸ್ಯ ಎ.ಕೆ.ಹಿಮಕರ ಇತರರು ಪಾಲ್ಗೊಳ್ಳಲಿದ್ದಾರೆ.

ಜಿಲ್ಲೆಯಲ್ಲಿ ಮಳೆ ಕೊರತೆ: ಬಿತ್ತನೆ ಕಾರ್ಯಕ್ಕೆ ತೀವ್ರ ಹಿನ್ನಡೆ



ಚಾಮರಾಜನಗರ: ಜಿಲ್ಲೆಯಲ್ಲಿ ಪೂರ್ವ ಮುಂಗಾರು ಮಳೆ ಕೊರತೆಯಿಂದಾಗಿ ಬಿತ್ತನೆ ಕಾರ್ಯಕ್ಕೆ ತೀವ್ರ ಹಿನ್ನಡೆಯಾಗಿದೆ. ವಾಡಿಕೆ ಯಂತೆ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬಿರುಸುಗೊಳ್ಳಬೇಕಿದ್ದ ಕೃಷಿ ಚಟುವಟಿಕೆಗಳು ಮಳೆ ಕೊರತೆಯಿಂದಾಗಿ ಕುಂಠಿತಗೊಂಡಿದ್ದು, ರೈತರಲ್ಲಿ ಆತಂಕ ಮನೆ ಮಾಡಿದೆ.

ಅಂತರ್ಜಲದ ಕೊರತೆ ನಡುವೆಯೂ ಜಿಲ್ಲೆಯಲ್ಲಿ 4 ತಿಂಗಳಲ್ಲಿ ವಾಡಿಕೆಯಷ್ಟು ಮಳೆಯಾಗದೇ ಶೇ.34.5ರಷ್ಟು ಮಳೆ ಕೊರತೆಯಾಗಿದ್ದು, ಕೃಷಿ ಚಟುವಟಿಕೆಗಳ ಮೇಲೆ ದುಷ್ಪರಿಣಾಮ ಬೀರಿದೆ. ಜಿಲ್ಲೆಯ ಬಹುತೇಕ ರೈತರು ಖುಷ್ಕಿ ಭೂಮಿ ಹೊಂದಿದ್ದು, ಮಳೆಯನ್ನೇ ಆಶ್ರಯಿಸಿದ್ದಾರೆ. ಕೆಲವರು ವರ್ಷಕ್ಕೆ 2 ಬೆಳೆ ಬೆಳೆದರೆ, ಇನ್ನು ಕೆಲವರು ಒಂದೇ ಫಸಲನ್ನು ನಂಬಿಕೊಂಡಿದ್ದಾರೆ. ಸೂರ್ಯಕಾಂತಿ, ಹತ್ತಿ, ಉದ್ದು, ಅಲಸಂದೆ, ಹೆಸರು, ಕಡಲೆಕಾಯಿ, ಮುಸುಕಿನ ಜೋಳ, ರಾಗಿ, ಸಜ್ಜೆ ಹಾಗೂ ಇನ್ನಿತರ ಮಳೆಯಾಶ್ರಿತ ಬೆಳೆ ಹೆಚ್ಚಾಗಿ ಬೆಳೆಯುತ್ತಾರೆ. ಇದೀಗ ಜಿಲ್ಲೆಯಲ್ಲಿ ಪೂರ್ವ ಮುಂಗಾರು ಕೊರತೆ ಪರಿಣಾಮ ಬಿತ್ತನೆ ನಿರೀಕ್ಷೆಯಲ್ಲಿದ್ದ ಅನ್ನದಾತರಿಗೆ ನಿರಾಸೆಯಾಗಿದೆ.

ಶೇ.5.44ರಷ್ಟು ಸೂರ್ಯಕಾಂತಿ ಬಿತ್ತನೆ: ಗುಂಡ್ಲುಪೇಟೆ ತಾಲೂಕಿನಲ್ಲಿ ಸೂರ್ಯಕಾಂತಿಯನ್ನು ಹೆಚ್ಚು ಬೆಳೆಯಲಾಗುತ್ತದೆ. ಆದರೆ, ಈ ಬಾರಿ ಮಳೆ ಕೊರತೆಯಿಂದ ಬಿತ್ತನೆ ತೀವ್ರ ಕುಸಿತ ಕಂಡಿದ್ದು, ಗುಂಡ್ಲುಪೇಟೆಯಲ್ಲಿ 14,310 ಹೆಕ್ಟೇರ್ ಸೂರ್ಯಕಾಂತಿ ಬಿತ್ತನೆ ಗುರಿಗೆ ಪ್ರತಿಯಾಗಿ ಇದುವರೆಗೂ 1,250 ಹೆಕ್ಟೇರ್ ಮಾತ್ರ ಬಿತ್ತನೆ ಮಾಡಿ, ಶೇ.5.44ರಷ್ಟು ಗುರಿ ಸಾಧಿಸಲಾಗಿದೆ. ಉಳಿದಂತೆ ಚಾಮರಾಜನಗರ ತಾಲೂಕಿನಲ್ಲಿ 650 ಹೆಕ್ಟೇರ್ ಸೂರ್ಯಕಾಂತಿ ಬಿತ್ತನೆ ಗುರಿಗೆ ಪ್ರತಿಯಾಗಿ 302 ಹೆಕ್ಟೇರ್, ಕೊಳ್ಳೇಗಾಲದಲ್ಲಿ 10 ಹೆಕ್ಟೇರ್ ಹಾಗೂ ಹನೂರಿನಲ್ಲಿ 30 ಹೆಕ್ಟೇರ್ ಗುರಿಗೆ ಪ್ರತಿಯಾಗಿ ಶೂನ್ಯ ಬಿತ್ತನೆಯಾಗಿದೆ.

ಪೂರ್ವ ಮುಂಗಾರು ಅವಧಿಯಲ್ಲಿ ದ್ವಿದಳ ಹಾಗೂ ಏಕದಳ ಧಾನ್ಯಗಳಾದ ಉದ್ದು, ಹೆಸರು, ಅಲಸಂದೆ, ತೊಗರಿ ಬೆಳೆಯಲಾಗುತ್ತಿದ್ದು ಇವುಗಳ ಮೇಲೂ ಮಳೆ ಕೊರತೆ ಪರಿಣಾಮ ಬೀರಿದೆ. ಒಟ್ಟಾರೆ ಪೂರ್ವ ಮುಂಗಾರು ಅವಧಿಯಲ್ಲಿ ಜಿಲ್ಲೆಯ ಒಟ್ಟು ಬಿತ್ತನೆ ಗುರಿಯ ಪೈಕಿ ಶೇ. 10ರಷ್ಟು ತಲುಪಲು ಸಾಧ್ಯವಾಗಿಲ್ಲ.

ಶೇ.34.5ರಷ್ಟು ಮಳೆ ಕೊರತೆ: ಜಿಲ್ಲೆಯಲ್ಲಿ ಜ.1ರಿಂದ ಮೇ 4ರವರೆಗೆ ಸರಾಸರಿ 105.1 ಮಿಮೀ ವಾಡಿಕೆ ಮಳೆಯಾಗಬೇಕಿತ್ತು. ಆದರೆ ಈ ವರ್ಷ ಶೇ.68.8 ಮಿಮೀ ಮಳೆಯಾಗಿದ್ದು, ಶೇ.34.5ರಷ್ಟು ಕೊರತೆಯಾಗಿದೆ. ತಾಲೂಕಿನಲ್ಲಿ 60.6 ಮಿಮೀ ಮಳೆಯಾಗಿದ್ದು, ಶೇ.40.5ರಷ್ಟು ಕೊರತೆಯಾಗಿದೆ. ಕೊಳ್ಳೇಗಾಲದಲ್ಲಿ 58.05, ಹನೂರಲ್ಲಿ 41.3, ಯಳಂದೂರಲ್ಲಿ 58.2 ಮಿಮೀ ಮಳೆಯಾಗಿದೆ. ಗುಂಡ್ಲುಪೇಟೆ ತಾಲೂಕಿನಲ್ಲಿ ಮಾತ್ರ 128.6 ಮಿಮೀಗೆ ಪ್ರತಿಯಾಗಿ 129.7 ಮಿಮೀ ಮಳೆಯಾಗಿದೆ.

ಮುಂಗಾರು ಹಂಗಾಮಿನ ಬೆಳೆಗಾಗಿ 12,972 ಮೆ.ಟನ್ ರಸಗೊಬ್ಬರ ದಾಸ್ತಾನು ಮಾಡಲಾಗಿದ್ದು, ಈ ಪೈಕಿ ಯೂರಿಯಾ 3,811 ಮೆ.ಟನ್, ಡಿಎಪಿ 1,741 ಮೆ.ಟನ್, ಎಂಒಪಿ 1,232 ಮೆ.ಟನ್, ಎಸ್‌ಎಸ್‌ಪಿ 801 ಹಾಗೂ ಕಾಂಪ್ಲೆಕ್ಸ್ 5,387 ಮೆ.ಟನ್ ದಾಸ್ತಾನು ಮಾಡಲಾಗಿದೆ.

ಸಮುದಾಯ ಒಗ್ಗೂಡಿ ಆಳುವ ಸರ್ಕಾರಗಳಿಗೆ ಶಕ್ತಿ ಪ್ರದರ್ಶಿಸಿ


ಗುಂಡ್ಲುಪೇಟೆಯಲ್ಲಿ ಆಚಾರ್ಯತ್ರಯರ ಜಯಂತಿ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

ಗುಂಡ್ಲುಪೇಟೆ, ಮೇ 19(ಸೋಮ್.ಜಿ)– ಸಮುದಾಯದವರು ಒಗ್ಗೂಡಿ ಸಂಘಟನೆಗೆ ಆದ್ಯತೆ ನೀಡಿ ಆಳುವ ಸರ್ಕಾರಗಳಿಗೆ ನಮ್ಮ ಶಕ್ತಿ ತೋರಿಸುವ ಮೂಲಕ ನಮಗಾಗಿರುವ ಅನ್ಯಾಯವನ್ನು ಸರಿಪಡಿಸಿಕೊಳ್ಳಬೇಕು ಎಂದು ತಾಲೂಕು ಬ್ರಾಹ್ಮಣ ಸಭಾದ ಅಧ್ಯಕ್ಷ ಕೆ.ವಿ.ಗೋಪಾಲ ಕೃಷ್ಣಭಟ್ಟರು ಸಲಹೆ ನೀಡಿದ್ದಾರೆ.

ಪಟ್ಟಣದ ಶ್ರೀರಾಮ ಮಂದಿರದ ಸಭಾಂಗಣದಲ್ಲಿ ತಾಲೂಕು ಬ್ರಾಹ್ಮಣ ಸಭಾ ಹಾಗೂ ಕೌಂಡಿನ್ಯ ವಿಪ್ರ ಬಳಗ, ಶಾರದ ಸತ್ಸಂಗ ಸಮಾಜಗಳ ಸಂಯುಕ್ತಾಶ್ರಯದಲ್ಲಿ ನಡೆದ ಆಚಾರ್ಯತ್ರಯರ ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ, ಹಿಂದಿನಿಂದಲೂ ಸಮುದಾಯ ಪ್ರತಿಭೆಯಿಂದಲೇ ಸಮಾಜದಲ್ಲಿ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡಿದೆ. ಭವಿಷ್ಯದಲ್ಲೂ ಅದನ್ನು ಮುಂದುವರೆಸಬೇಕಿದೆ. ಆದ್ದರಿಂದ ಸರ್ಕಾರದಿಂದ ನಮಗೆ ಸಿಗಬೇಕಿರುವ ಮೂಲ ಸವಲತ್ತುಗಳನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಬ್ರಾಹ್ಮಣ ಜನಾಂಗದ ವಟುಗಳಿಗೆ ವಿವಾಹವಾಗಲು ಹೆಣ್ಣು ಮಕ್ಕಳು ಸಿಗದಿರುವ ಕಾರಣ ಅವಿವಾಹಿತರ ಸಂಖ್ಯೆ ಹೆಚ್ಚಾಗುತ್ತಿದೆ. ಅಲ್ಲದೆ ಸಂತತಿಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಬ್ರಾಹ್ಮಣರು ಧಾರ್ಮಿಕ ಆಚರಣೆಗಳಿಗೆ ಹೆಚ್ಚಿನ ಆಸಕ್ತಿ ವಹಿಸಬೇಕು. ಮುಂದಿನ ಪೀಳಿಗೆಗೂ ನಮ್ಮ ಸನಾತನ ಧರ್ಮ ಉಳಿಸಿ ಬೆಳೆಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೌಂಡಿನ್ಯ ವಿಪ್ರ ಬಳಗದ ಅಧ್ಯಕ್ಷ ಆನಂದಕುಮಾರ್, ವಿಪ್ರ ಮಹಿಳಾ ಬಳಗದ ಅಧ್ಯಕ್ಷೆ ಮಹಾಲಕ್ಷ್ಮಿ ನಾಗರಾಜು, ಶಾರದ ಸತ್ಸಂಗದ ಅಧ್ಯಕ್ಷೆ ಗಾಯತ್ರಿ ಅನಂತು, ಸಂಘದ ಉಪಾಧ್ಯಕ್ಷ ಎಚ್.ವಿ.ರವಿಕಾಂತ್, ಮಂಜುನಾಥ್, ಸೂರ್ಯ ನಾರಾಯಣ್, ಶ್ರೀರಾಮ ಮಂದಿರ ಟ್ರಸ್ಟ್ ಕಾರ್ಯದರ್ಶಿ ಸತೀಶ್ ಕುಮಾರ್, ಬಾಲಸುಬ್ರಹ್ಮಣ್ಯಂ, ತಾಲೂಕು ಬ್ರಾಹ್ಮಣ ಸಭಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಮೇಶ್‌ಮೇಷ್ಟ್ರು, ಎಸ್.ಗೋವಿಂದರಾಜನ್ ಹಾಜರಿದ್ದರು.

ಬಡತನ ನಿರ್ಮೂಲನೆಗೆ ಏಕೈಕ ಅಸ್ತ್ರ ಶಿಕ್ಷಣ


ಮಕ್ಕಳಿಗೆ ನೋಟ್ ಪುಸ್ತಕ, ಲೇಖನ ಸಾಮಾಗ್ರಿಗಳು ಹಾಗೂ ಪ್ರೋತ್ಸಾಹ ಧನ ವಿತರಿಸಲಾಯಿತು.

ಚಾಮರಾಜನಗರ, ಮೇ 19– ನಿವೃತ್ತ ಕೆಎಂಎಫ್ ಉಪನಿರ್ದೇಶಕ ಅರಕಲವಾಡಿ ಜವರಯ್ಯ ಅವರ ಪುತ್ರ ಅಭಿಷೇಕ ಸ್ಮರಣಾರ್ಥ ಗ್ರಾಮದ ಮಕ್ಕಳಿಗೆ ನೋಟ್ ಪುಸ್ತಕ, ಲೇಖನ ಸಾಮಾಗ್ರಿಗಳು ಹಾಗೂ ಪ್ರೋತ್ಸಾಹ ಧನ ವಿತರಿಸಲಾಯಿತು.

ತಾಲೂಕಿನ ಅರಕಲವಾಡಿ ಗ್ರಾಮದ ಎನ್.ಆರ್.ಬಡಾವಣೆಯ ಶ್ರೀರಾಮಲಿಂಗೇಶ್ವರ, ಮಂಟೇಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರಕಲವಾಡಿ ಗುರುಸ್ವಾಮಿ, ಬಡತನ ನಿರ್ಮೂಲನೆಗೆ ಏಕೈಕ ಅಸ್ತ್ರ ಶಿಕ್ಷಣ. ಉತ್ತಮ ಜೀವನವನ್ನು ರೂಪಿಸಿಕೊಳ್ಳಲು ಶಿಕ್ಷಣದಿಂದ ಸಾಧ್ಯ. ಪೋಷಕರು ಕೂಡ ಮಕ್ಕಳ ಶಿಕ್ಷಣದ ಕಡೆ ಹೆಚ್ಚು ಗಮನ ಹರಿಸಬೇಕು ಎಂದರು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಅಧಿಕಾರಿ ರಾಜು ಮಾತನಾಡಿ, ಶಿಕ್ಷಣವೇ ನಮಗೆ ಸ್ಫೂರ್ತಿದಾಯಕ ಶಕ್ತಿಯಾಗಿರುವುದರಿಂದ ಜವರಯ್ಯನವರು ಮಾಡಿರುವ ಶಿಕ್ಷಣಕ್ಕೆ ಉತ್ತೇಜನ ನೀಡಿರುವುದನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ತಿಳಿಸಿದರು.

ಅರಕಲವಾಡಿ ಜವರಯ್ಯ ಮಾತನಾಡಿ, ನಮ್ಮ ಪುತ್ರ ಅಭಿಷೇಕ ಅಕಾಲಿಕ ಮರಣ ಹೊಂದಿದ್ದ ಹಿನ್ನಲೆಯಲ್ಲಿ ಆತ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ 10 ಲಕ್ಷ ಪರಿಹಾರ ಬಂದಿತ್ತು. ಅದನ್ನು ಬ್ಯಾಂಕ್‌ನಲ್ಲಿ ಠೇವಣಿ ಇಟ್ಟು, ಅದರಲ್ಲಿ ಬಂದ ಲಾಭದಲ್ಲಿ ಪ್ರತಿವರ್ಷವೂ ಮಗನ ಸ್ಮರಣಾರ್ಥವಾಗಿ ಗ್ರಾಮದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ 80 ಮಂದಿಗೆ ನೋಟ್ ಪುಸ್ತಕ, ಲೇಖನ ಸಾಮಾಗ್ರಿ. ಹಾಗೂ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಪ್ರೋತ್ಸಾಹ ಧನ ವಿತರಿಸಲಾಗಿದೆ. ಎಂದರು.

ರೇಷ್ಮೆ ಇಲಾಖೆಯ ಜಂಟಿ ನಿರ್ದೇಶಕ ಎನ್.ಮಹದೇವಯ್ಯ, ಅರಕಲವಾಡಿ ನಾಗೇಂದ್ರ, ಬಾಬು ಜಗಜೀವನ್ ರಾಮ್ ಜಿಲ್ಲಾ ಸಂಘಗಳ ಒಕ್ಕೂಟದ ಅಧ್ಯಕ್ಷ ನಾಗರಾಜು, ತಾಲೂಕು ಕಲ್ಯಾಣಾಧಿಕಾರಿ ಲಿಂಗರಾಜು, ತಾಯಿ ಸುಮಿತ್ರ, ಕುಟುಂಬದವರು ಮತ್ತು ಬಡಾವಣೆಯ ಯಜಮಾನರುಗಳು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಮತ್ತು ಪೋಷಕರು ಹಾಜರಿದ್ದರು .

ನಾಗಮಲೆ ಯಾತ್ರೆಯಲ್ಲಿ ಬಾಲಕನ ಸಾವು ಹಿನ್ನೆಲೆ

ಉಪ ಲೋಕಾಯುಕ್ತರಿಂದ ಸುಮೋಟೋ ಪ್ರಕರಣ ದಾಖಲು



ಚಾಮರಾಜನಗರ, ಮೇ 19–ಜಿಲ್ಲೆಯ ಪ್ರಸಿದ್ಧ ಯಾತ್ರಾಸ್ಥಳ ಮಲೆ ಮಹದೇಶ್ವರಬೆಟ್ಟ ವ್ಯಾಪ್ತಿಯಲ್ಲಿ ಚಿರತೆ ದಾಳಿಗೆ ಬಾಲಕ ಬಲಿಯಾದ ಘಟನೆಗೆ ಸಂಬಂಧಿಸಿದಂತೆ ಲೋಕಾಯುಕ್ತದಲ್ಲಿ ಸ್ವಯಂಪ್ರೇರಿತ (ಸುಮೋಟೋ) ಪ್ರಕರಣ ದಾಖಲಾಗಿದೆ.

ಘಟನೆ ಸಂಬಂಧ ದಿನಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳನ್ನು ಆಧರಿಸಿ, ರಾಜ್ಯ ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಲೋಕಾಯುಕ್ತ ಕಾಯ್ದೆ ಪ್ರಕಾರ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್ ಕುಮಾರ್, ಕಾವೇರಿ ವನ್ಯಜೀವಿ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮರಿಸ್ವಾಮಿ, ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ವಲಯ ಅಧಿಕಾರಿ ಮತ್ತು ಪ್ರಭಾರ ವಲಯ ಅರಣ್ಯಾಧಿಕಾರಿ ರಮೇಶ್ ಬಿರದಾರ್ ಮತ್ತು ಕಾವೇರಿ ವನ್ಯಜೀವಿ ವಿಭಾಗದ ವಲಯ ಅರಣ್ಯಾಧಿಕಾರಿ ವಾಗೀಶ್ ಅವರನ್ನು ಎದುರುದಾರರನ್ನಾಗಿ ಪರಿಗಣಿಸಿ ನೋಟಿಸ್ ಜಾರಿ ಮಾಡಲಾಗಿದೆ.

ಸುದ್ದಿಯಲ್ಲಿ ಉಲ್ಲೇಖಿಸಲಾದ ಸಮಸ್ಯೆಗಳ ಕುರಿತು ನೋಟಿಸ್ ತಲುಪಿದ ನಾಲ್ಕು ವಾರಗಳೊಳಗೆ ತಮ್ಮ ಅಭಿಪ್ರಾಯಗಳನ್ನು ಹಾಗೂ ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಸಲ್ಲಿಸುವಂತೆ ಉಪ ಲೋಕಾಯುಕ್ತರು ಸೂಚಿಸಿದ್ದಾರೆ. ಒಂದು ಮತ್ತು ನಾಲ್ಕನೇ ಎದುರುದಾರರಿಗೆ ಸಮನ್ಸ್ ಕಳುಹಿಸಿ, ಜೂ. 17ರಂದು ನಡೆಯಲಿರುವ ವಿಚಾರಣೆಗೆ ಆಕ್ಷೇಪಣೆ ಮತ್ತು ವರದಿಯೊಂದಿಗೆ ಖುದ್ದು ಹಾಜರಾಗಬೇಕೆಂದು ಉಪ ಲೋಕಾಯುಕ್ತರು ನಿರ್ದೇಶನ ನೀಡಿದ್ದಾರೆ.

ಮಲೆ ಮಹದೇಶ್ವರಬೆಟ್ಟ ವ್ಯಾಪ್ತಿಯ ನಾಗಮಲೆಗೆ ಪಾದಯಾತ್ರೆಯಲ್ಲಿ ತೆರಳುತ್ತಿದ್ದ ವೇಳೆ ಇಂಡಿಗನತ್ತ ಗ್ರಾಮದ ಬಳಿ ಚಿರತೆ ಎರಗಿ ಬಾಲಕ ಅರ್ಹತ್ ಗೌಡನ ಬಲಿ ಪಡೆದಿತ್ತು. ಘಟನೆ ಬಳಿಕ ಬಾಲಕನ ತಾಯಿ ಪವಿತ್ರ ಅವರು ಅರಣ್ಯ ಇಲಾಖೆಯ ನಿರ್ಲಕ್ಷ್ಯವೇ ತನ್ನ ಮಗನ ಸಾವಿಗೆ ಕಾರಣ. ಅರಣ್ಯ ಇಲಾಖೆ ಸಿಬ್ಬಂದಿ ನಮಗೆ ಕಾಡು ಪ್ರಾಣಿಗಳು, ಚಿರತೆ ಇರುವ ಬಗ್ಗೆ ಹೇಳಿದ್ದರೆ ನಾವು ನಾಗಮಲೆಗೆ ಪಾದಯಾತ್ರೆಯಲ್ಲಿ ತೆರಳುತ್ತಿರಲಿಲ್ಲ ಎಂದು ಹೇಳಿದ್ದರು.

ನಾಗಮಲೆಗೆ ತೆರಳುವ ಮಾರ್ಗದಲ್ಲಿ ಭಕ್ತರಿಂದ ತಲಾ 200 ರೂ. ಶುಲ್ಕ ವಸೂಲಿ ಮಾಡಲಾಗುತ್ತಿದ್ದರೂ, ಅಗತ್ಯ ಸುರಕ್ಷತಾ ಕ್ರಮಗಳು, ಕುಡಿಯುವ ನೀರಿನ ವ್ಯವಸ್ಥೆ, ಮಾಹಿತಿ ಫಲಕಗಳು, ಸುರಕ್ಷಿತ ಬೇಲಿ ಹಾಗೂ ಅರಣ್ಯ ಸಿಬ್ಬಂದಿ ನಿಯೋಜನೆ ಸೇರಿದಂತೆ ಸೌಲಭ್ಯಗಳನ್ನು ಒದಗಿಸಿಲ್ಲ ಎಂಬ ಗಂಭೀರ ಆರೋಪಗಳನ್ನು ಉಲ್ಲೇಖಿಸಲಾಗಿದೆ.

ಮರು ಮೌಲ್ಯಮಾಪನದಲ್ಲಿ 3 ಶಾಲೆಗಳಿಗೆ ಶೇ 100 ಫಲಿತಾಂಶ

ಕೊಳ್ಳೇಗಾಲ: ಮರು ಮೌಲ್ಯಮಾಪನದಿಂದಾಗಿ ನಿಸರ್ಗ ವಿದ್ಯಾನಿಕೇತನದ ಏಳು ವಿದ್ಯಾರ್ಥಿಗಳಿಗೆ ಹೆಚ್ಚುವರಿ ಅಂಕ ಲಭಿಸಿದ್ದು ಈ ಪೈಕಿ ಸಂಜೀವಿನಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ 1ರಲ್ಲಿ 615 ಅಂಕ ದೊರೆತಿದ್ದು, ಮರು ಮೌಲ್ಯಮಾಪನದಿಂದಾಗಿ ಆಂಗ್ಲಭಾಷೆಯಲ್ಲಿ ಹೆಚ್ಚುವರಿ 2 ಅಂಕ ದೊರೆತಿದೆ. ಈ ಹಿನ್ನೆಲೆ ಸಂಜೀವಿನಿ ಸಂಸ್ಥೆಯಲ್ಲಿ ಹೆಚ್ಚು ಅಂಕಗಳಿಸಿ ಪ್ರಥಮ ಸ್ಥಾನಗಳಿಸಿದ ವಿದ್ಯಾರ್ಥಿನಿ. ಅದೇ ರೀತಿಯಲ್ಲಿ ವಿದ್ಯಾರ್ಥಿನಿ ದೀಪ್ತಿಗೆ 6 ಅಂಕ ದೊರೆತ ಹಿನ್ನೆಲೆ ಈಗ 616ಕ್ಕೆ ಏರಿಕೆ ಕಂಡಿದೆ. ಲೇಖನಗೆ 11 ಹೆಚ್ಚುವರಿ ಅಂಕ ಆಂಗ್ಲ ಭಾಷೆಯಲ್ಲೆ ಲಭಿಸಿದ್ದು, ಈಗ 586ಕ್ಕೆ ಏರಿಕೆಯಾಗಿದೆ. ಉಳಿದಂತೆ ಭುವನೇಶ್ವರಿಗೆ 6 ಹೆಚ್ಚುವರಿ ಅಂಕಗಳು ಲಭಿಸಿದ ಬಳಿಕ ಆಕೆಯ ಅಂಕ 529ಕ್ಕೆ ಏರಿಕೆಯಾಗಿದೆ. ಎಂದು ಮುಖ್ಯ ಶಿಕ್ಷಕ ಶಂಕರ್ ಮೈಸೂರು ಮಿತ್ರನಿಗೆ ತಿಳಿಸಿದರು.

ಜೂ.7, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಚಾಮರಾಜನಗರ, ಮೇ 19–ಡಾ.ಬಾಬು ಜಗಜೀವನರಾಂ ಸಂಘಟನೆಗಳ ಒಕ್ಕೂಟವು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.60 ರಷ್ಟು ಅಂಕ ಪಡೆದಿರುವ ಸಮುದಾಯದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಜೂ.7 ರಂದು ನಗರದಲ್ಲಿ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಗೌರವ ಜಿಲ್ಲಾಧ್ಯಕ್ಷ ಬಸವನಪುರ ರಾಜಶೇಖರ ತಿಳಿಸಿದರು.

ಸಮುದಾಯದ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುವುದು ಮೊದಲ ಆದ್ಯತೆಯಾಗಿದ್ದು, ಅದರಂತೆ ಸಮುದಾಯ ಪ್ರತಿಭಾ ವಿದ್ಯಾರ್ಥಿಗಳಿಗೆ ಒಕ್ಕೂಟದ ವತಿಯಿಂದ ಪ್ರತಿಭಾ ಪುರಸ್ಕಾರ ಆಯೋಜಿಸಲಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಒಕ್ಕೂಟದ ಜಿಲ್ಲಾಧ್ಯಕ್ಷ ಹೆಚ್.ಹೆಚ್.ನಾಗರಾಜು ಮಾತನಾಡಿ, ನಮ್ಮ ಒಕ್ಕೂಟವು ಸಮುದಾಯ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.60 ರಷ್ಟು ಅಂಕಪಡೆದಿರುವ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸುವುದರ ಜೊತೆಗೆ ನೀಟ್, ಸಿಇಟಿ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಉದ್ದೇಶ ಹೊಂದಲಾಗಿದೆ. ಇಂತಹ ಅವಕಾಶವನ್ನು ಸಮುದಾಯದ ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕೋರಿದರು.

ಹೆಚ್ಚಿನ ಮಾಹಿತಿಗಾಗಿ ಗುಂಡ್ಲುಪೇಟೆ ತಾಲೂಕು ಹಸಗೂಲಿ ಸಿದ್ದಯ್ಯ–9591930446, ಚಾಮರಾಜನಗರ ತಾಲೂಕು ಶಿವಕುಮಾರ್ –7483934405, ಯಳಂದೂರು ತಾಲೂಕು ಬಸವರಾಜು–9986216352, ಕೊಳ್ಳೇಗಾಲ ತಾಲೂಕು ಗೋಪಾಲ್– 6360318044, ಹನೂರು ತಾಲೂಕು ಬಿ.ಸಿ.ಸುರೇಶ್– 9945622014 ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಡಾ.ಬಾಬು ಜಗಜೀವನರಾಂ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಹೆಚ್.ಹೆಚ್.ನಾಗರಾಜು, ಗೌರವಾಧ್ಯಕ್ಷ ಬಸವನಪುರ ರಾಜಶೇಖರ, ಗೌರವ ಸಲಹೆಗಾರ ಅರಕಲವಾಡಿ ಜವರಯ್ಯ, ಜಿಲ್ಲಾ ಉಪಾಧ್ಯಕ್ಷರಾದ ಹಸಗೂಲಿ ಸಿದ್ದಯ್ಯ, ಸಿ.ಚನ್ನಬಸವಯ್ಯ, ಬಿ.ಸಿ.ಸುರೇಶ್, ಕೊಳ್ಳೇಗಾಲ ತಾಲ್ಲೂಕು ಅಧ್ಯಕ್ಷ ಗೋಪಾಲ್, ಸಹ ಕಾರ್ಯದರ್ಶಿ ಶಿವಕುಮಾರ್ ರಾಮಸಮುದ್ರ ಹಾಜರಿದ್ದರು.

ಜವರಯ್ಯ ನಿಧನ



ಬೇಗೂರು, ಮೇ 19–ಗ್ರಾಮದ ನಿವಾಸಿ ಮಾಜಿ ಉಪಪ್ರಧಾನರು ಆದ ಎಸ್.ಜವರಯ್ಯ (73) ಸೋಮವಾರ ರಾತ್ರಿ ನಿಧನರಾದರು ಮೃತರು ಇಬ್ಬರು ಪುತ್ರಿ, ಮೂವರು ಪುತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗ್ರಾಮದ ರುದ್ರ ಭೂಮಿಯಲ್ಲಿ ಮಂಗಳವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ ಬುಧವಾರ 20 ಮೇ 2026

ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಇಂದಿಗೆ ಮೂರು ವರ್ಷ ; ಜನಾಭಿಪ್ರಾಯ ಹೇಗಿದೆ..!



ಗ್ಯಾರಂಟಿ ಬಿಡಿ; ಉದ್ಯೋಗ ನೀಡಿ; ಇವರದು ಜನಪರ ಆಡಳಿತ; ಜನರ ತಲೆ ಮೇಲೆ ಸಾಲದ ಹೊರೆ; ನುಡಿದಂತೆ ನಡೆದ ಸರ್ಕಾರ

ಮೈಸೂರು, ಮೇ 19(ಪಿಎಂ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಮೇ 20ಕ್ಕೆ ಮೂರು ವರ್ಷಗಳನ್ನು ಪೂರೈಸುತ್ತಿದೆ. ಮಂಗಳವಾರ ತುಮಕೂರಲ್ಲಿ ಸಾಧನಾ ಸಮಾವೇಶ ಸಹ ನಡೆಸಿದೆ. ಈ ಹಿನ್ನೆಲೆಯಲ್ಲಿ 'ಮೈಸೂರು ಮಿತ್ರ' ಮುಖ್ಯವಾಗಿ ಜನಸಾಮಾನ್ಯರನ್ನು ಸಂಪರ್ಕಿಸಿದಾಗ, ಕೆಲವರು ಸರ್ಕಾರದ ಆಡಳಿತದ ಬಗ್ಗೆ ಟೀಕಾಪ್ರಹಾರ ನಡೆಸಿದರು. ಮತ್ತೆ ಕೆಲವರು ಸರ್ಕಾರವನ್ನು ಸಮರ್ಥಿಸಿಕೊಂಡರು.

ಜನರ ತಲೆ ಮೇಲೆ ಸಾಲದ ಮೂಟೆ...



ರಾಜ್ಯ ಕಾಂಗ್ರೆಸ್ ಸರ್ಕಾರ ಕಳೆದ 3 ವರ್ಷಗಳ ಆಡಳಿತದಲ್ಲಿ ಸಾಲ ಮಾಡಿದ್ದೇ ಸಾಧನೆ. ಸಾಲದ ಮೂಟೆಗಳನ್ನು ಪ್ರಜೆಗಳ ತಲೆ ಮೇಲೆ ಹೊರಿಸಿದೆಯಷ್ಟೇ. ಗ್ಯಾರಂಟಿ ಯೋಜನೆಗಳಿಗಾಗಿ ರಾಜ್ಯದ ಖಜಾನೆ ಖಾಲಿ ಮಾಡುತ್ತಿದ್ದಾರೆ. ರೈತ ಸಮುದಾಯಕ್ಕೆ ಈ ಸರ್ಕಾರದಿಂದ ಏನೂ ಪ್ರಯೋಜನವಾಗಿಲ್ಲ ರೈತರು ವ್ಯವಸಾಯವನ್ನೇ ತ್ಯಜಿಸುವಂತಾಗುತ್ತಿದೆ. ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದ ಜನತೆಯನ್ನು ಮೂರ್ಖರನ್ನಾಗಿ ಮಾಡಲಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಲಂಚವಿಲ್ಲದೆ ಕೆಲಸ ಆಗದು. ಒಂದು ಅರ್ಜಿ ಕೊಟ್ಟರೆ ವಿಲೇವಾರಿ ಮಾಡಲು 6 ತಿಂಗಳು ತೆಗೆದುಕೊಳ್ಳುತ್ತಾರೆ. ಸರ್ಕಾರಿ ಕಚೇರಿಗಳಿಗೆ ಅಲೆದು ಅಲೆದು ಸಾಕಾಗುತ್ತದೆ.

–**ಮಾಸ್ತಿಗೌಡ,** ಮುದ್ದಯ್ಯನಹುಂಡಿ ರೈತರು

ಜನಪರ ಆಡಳಿತ..



ರಾಜ್ಯ ಕಾಂಗ್ರೆಸ್ ಸರ್ಕಾರ ಜನಪರ ಆಡಳಿತ ನೀಡಿದ್ದು, ಬಡವರಿಗೆ ಅನುಕೂಲವಾಗಿದೆ. ಏನೂ ಮಾಡಿಲ್ಲ ಎಂಬುದು ಸರಿಯಲ್ಲ. ಶಕ್ತಿ ಯೋಜನೆ, ಅನ್ನಭಾಗ್ಯ, ಯುವಶಕ್ತಿ, ಗೃಹಲಕ್ಷ್ಮೀ ಯೋಜನೆ ಮೂಲಕ ಜನಸಾಮಾನ್ಯರಿಗೆ ಅನುಕೂಲ ಮಾಡಿದೆ. ಈ ಹಿಂದೆ ಯಾವುದೇ ಸರ್ಕಾರದಿಂದ ಇಂತಹ ಜನಪರ ಯೋಜನೆಗಳನ್ನು ತಂದಿರಲಿಲ್ಲ. ಆದರೆ ರೈತರ ವಿಚಾರದಲ್ಲಿ ಸ್ಪಂದನೆ ಸಾಲುವುದಿಲ್ಲ.

–**ಮಹೇಂದ್ರ,** ಚಂದಗಾಲು, ಶ್ರೀರಂಗಪಟ್ಟಣ

3 ತಿಂಗಳಿಂದ ಮಾಸಾಶನ ನೀಡಿಲ್ಲ...



ಶಕ್ತಿ ಯೋಜನೆಯಿಂದ ಮಹಿಳೆಯರಿಗಷ್ಟೇ ಪ್ರಯೋಜನ. ಇದಕ್ಕೆ ಬದಲು ಟಿಕೆಟ್ ದರ ಕಡಿಮೆ ಮಾಡಬೇಕಿತ್ತು. ಇಂದು ಮಳವಳ್ಳಿಯಿಂದ ಬಸ್‌ನಲ್ಲಿ ನಿಂತುಕೊಂಡು ಬಂದಿದ್ದೇನೆ. ಸಂಧ್ಯಾ ಸುರಕ್ಷಾ ಯೋಜನೆಯಡಿ ಮಾಸಾಶನವನ್ನೇ ಮೂರು ತಿಂಗಳಿಂದ ನೀಡಿಲ್ಲ. ಇದನ್ನು ನಂಬಿದ ವಯಸ್ಸಾದವರು ಸಂಕಷ್ಟದಲ್ಲಿದ್ದಾರೆ. ಶಕ್ತಿ ಯೋಜನೆ ಕೈಬಿಡಬೇಕು. ಸಿಎಂ ಸಿದ್ದರಾಮಯ್ಯನವರು ರೈತರ ಅನುಕೂಲಕ್ಕೆ ಒತ್ತು ನೀಡಿಲ್ಲ. ಐದು ಗ್ಯಾರಂಟಿ ಯೋಜನೆ ಬೇಕಿರಲಿಲ್ಲ. ಗೃಹಲಕ್ಷ್ಮಿಯಡಿ 2 ಸಾವಿರ ರೂ. ಅನ್ನು ಮಹಿಳೆಯರಿಗೆ ಕೊಡುತ್ತಿದ್ದಾರೆ. ಇದರಿಂದ ಏನೂ ಪ್ರಯೋಜನವಿಲ್ಲ.

–**ಎಂ.ಶಿವಣ್ಣೇಗೌಡ,** ಜಯಪುರ ಹೋಬಳಿಯ ಕೆಲ್ಲಹಳ್ಳಿ

ಉತ್ತಮ ಆಡಳಿತ...



3 ವರ್ಷಗಳಿಂದ ರಾಜ್ಯಕಾಂಗ್ರೆಸ್ ಸರ್ಕಾರ ಉತ್ತಮ ಆಡಳಿತ ನೀಡುತ್ತಿದೆ. ಉಳಿದ ಅವಧಿಯಲ್ಲೂ ಇದೇ ರೀತಿಯ ಆಡಳಿತ ನೀಡಬೇಕು. ಗೃಹಜ್ಯೋತಿ ಸೇರಿದಂತೆ ಗ್ಯಾರಂಟಿ ಯೋಜನೆಗಳು ಜನತೆಗೆ ಅನುಕೂಲ ಆಗುತ್ತಿವೆ.

–**ಸೈಯದ್ ಇಮ್ರಾನ್,** ಲಷ್ಕರ್ ಮೊಹಲ್ಲಾ, ಮೈಸೂರು.

ಗ್ಯಾರಂಟಿ ರದ್ದು ಮಾಡಿ, ದುಡಿಯುವ ಕೈಗೆ ಉದ್ಯೋಗ ನೀಡಿ...



ಗ್ಯಾರಂಟಿ ಯೋಜನೆಗಳನ್ನು ಮೊದಲು ರದ್ದುಗೊಳಿಸಬೇಕು. ಉದ್ಯೋಗ ಸೃಷ್ಟಿಗೆ ಒತ್ತು ನೀಡಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದು ಮೂರು ವರ್ಷಗಳಾದರೂ ಹುದ್ದೆಗಳನ್ನು ಭರ್ತಿ ಮಾಡಲು ಸಮರ್ಪಕ ಕ್ರಮ ವಹಿಸಿಲ್ಲ. ಗ್ಯಾರಂಟಿ ಯೋಜನೆಯಿಂದ ರಾಜ್ಯದ ಖಜಾನೆ ಖಾಲಿಯಾಗುತ್ತಿದ್ದು, ಹೀಗಾದರೆ ಜನಕ್ಕೇನು ಒಳ್ಳೆಯದು ಮಾಡಲು ಸಾಧ್ಯ. ಅನಗತ್ಯವಾದ ಗ್ಯಾರಂಟಿಗಳನ್ನು ಕೈಬಿಟ್ಟು ದುಡಿಯುವ ಕೈಗಳಿಗೆ ಉದ್ಯೋಗ ನೀಡಬೇಕು. ಉದ್ಯೋಗ ಸೃಷ್ಟಿಸಿ, ಮೂಲಸೌಲಭ್ಯ ಸಮರ್ಪಕವಾಗಿ ಕಲ್ಪಿಸಬೇಕು. ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡಬೇಕು.

–**ಹರೀಶ್,** ಬಿಎಡ್ ವಿದ್ಯಾರ್ಥಿ

ಜನಕಲ್ಯಾಣ ಯೋಜನೆ ಮುಗಿಸುತ್ತಿದೆ...



ನುಡಿದಂತೆ ನಡೆದ ಸರ್ಕಾರ ಎಂದು ಹೇಳಿಕೊಳ್ಳುತ್ತಾರೆ. ಆದರೆ ಆಶಾ ಕಾರ್ಯಕರ್ತೆಯರಿಗೆ ನೀಡಿದ ಭರವಸೆ ಈಡೇರಿಸಿಲ್ಲ. ಆಶಾ ಕಾರ್ಯಕರ್ತೆಯರಿಗೆ ಮಾಸಿಕ 10 ಸಾವಿರ ರೂ. ಗೌರವಧನ ನೀಡುವ ಭರವಸೆ ನೀಡಿ ಒಂದು ಮುಕ್ಕಾಲು ವರ್ಷ ಆಗಿದೆ. ಆದರೆ ಈಡೇರಿಸಿಲ್ಲ. ಆಶಾ ಕಾರ್ಯಕರ್ತೆಯರಿಗೆ ಇಡೀ ರಾಜ್ಯಾದ್ಯಂತ ನಾಲ್ಕು ತಿಂಗಳ ಗೌರವಧನ ಹಾಗೂ ಪ್ರೋತ್ಸಾಹಧನ ಇನ್ನೂ ಬಿಡುಗಡೆಯಾಗಿಲ್ಲ. ಬೆಲೆ ಏರಿಕೆ ನಡುವೆ ಜನಸಾಮಾನ್ಯರು ಜೀವನ ನಡೆಸುವುದು ಕಷ್ಟವಾಗುತ್ತಿದೆ. ಈ ಸರ್ಕಾರ ಕನಿಷ್ಠ ವೇತನ ಜಾರಿಗೆ ಹಿಂದೇಟು ಹಾಕುತ್ತಿದೆ. ಈ ನಡುವೆ ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿದೆ.

–**ಪಿ.ಎಸ್.ಸಂಧ್ಯಾ,** ರಾಜ್ಯ ಖಜಾಂಚಿ, ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ.

ನುಡಿದಂತೆ ನಡೆದ ಸರ್ಕಾರ...



ನಮ್ಮ ರಾಜ್ಯ ಕಾಂಗ್ರೆಸ್ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಜನಪರ ಆಡಳಿತ ನೀಡಿದೆ. ನುಡಿದಂತೆ ನಡೆದ, ಬಡಜನರ ಪರವಾದ ಸರ್ಕಾರ ನಮ್ಮದು. ವಿಧಾನಸಭೆ ಚುನಾವಣೆ ಪೂರ್ವದಲ್ಲಿ ನೀಡಿದ್ದ ಆಶ್ವಾಸನೆಯಂತೆ ಐದು ಗ್ಯಾರಂಟಿಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ರಾಜ್ಯದ ಜನತೆಗೆ ಅಗತ್ಯವಾದ ಸೌಲಭ್ಯಗಳನ್ನು ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಮರ್ಪಕವಾಗಿ ಒದಗಿಸಲಾಗುತ್ತಿದೆ. ಗ್ಯಾರಂಟಿ ಯೋಜನೆಗಳು ಬಗ್ಗೆ ರಾಜ್ಯದ ಜನತೆಯೇ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.

–**ಕೆ.ಮಹೇಶ್,** ಕಾಂಗ್ರೆಸ್ ಮುಖಂಡರು.

ದುರಾಡಳಿತದ ದರ್ಬಾರ್ ಅಷ್ಟೆ...



ರಾಜ್ಯ ಕಾಂಗ್ರೆಸ್ ಸರ್ಕಾರದ ಈ ಅವಧಿ ಕೇವಲ ದುರಾಡಳಿತದ ದರ್ಬಾರ್ ಅಷ್ಟೆ. ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಿದರೆ ಅದನ್ನು ಹತ್ತಿಕ್ಕುವ ಕೆಲಸ ಮಾಡಲಾಗುತ್ತಿದೆ. ಜನರಿಗೆ ಅಗತ್ಯವಾದ ಮೂಲಸೌಲಭ್ಯ ಕಲ್ಪಿಸುವಲ್ಲಿ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ. ಸಿಎಂ ಸಿದ್ದರಾಮಯ್ಯ ತಮ್ಮ ವರುಣ ಕ್ಷೇತ್ರದ ಅಭಿವೃದ್ಧಿಗೆ ಅಷ್ಟೇ ಒತ್ತು ನೀಡಿದ್ದಾರೆ. ಆದರೆ ಮೈಸೂರಿನವರೇ ಆಗಿದ್ದರೂ ನಗರದ ಅಭಿವೃದ್ಧಿಗೆ ಆದ್ಯತೆ ನೀಡಿಲ್ಲ. ಮೈಸೂರು ನಗರದಲ್ಲಿ ರಸ್ತೆಗಳು ಸರಿಯಿಲ್ಲ. ಸ್ವಚ್ಛತೆ ಇಲ್ಲ. ಪಾಲಿಕೆ ಚುನಾವಣೆ ನಡೆಯದೇ ಜನಪ್ರತಿನಿಧಿಗಳು ಇಲ್ಲದ ಕಾರಣ ಜನ ಸಾಮಾನ್ಯರ ಕೆಲಸ ಕಾರ್ಯಗಳು ಆಗುತ್ತಿಲ್ಲ. ಗ್ಯಾರಂಟಿ ನೀಡಿ, ಸಾಲ ಮಾಡಿದ್ದೇ ಇವರ ಸಾಧನೆ.

–**ಮಹೇಶ್ ರಾಜೇ ಅರಸ್,** ಬಿಜೆಪಿ ನಗರ ಮಾಧ್ಯಮ ಸಂಚಾಲಕರು.

ವ್ಯರ್ಥ ಆಡಳಿತ...



ಕೇವಲ ಗ್ಯಾರಂಟಿ ಕೊಟ್ಟಿದ್ದೇ ಆಯಿತು ಹೊರತು ಯಾವುದೇ ಅಭಿವೃದ್ಧಿ ಆಗುತ್ತಿಲ್ಲ. ಮೂಲಸೌಲಭ್ಯ ಸಮರ್ಪಕವಾಗಿ ಕಲ್ಪಿಸುತ್ತಿಲ್ಲ. ಮೂರು ವರ್ಷಗಳ ಆಡಳಿತ ವ್ಯರ್ಥವಷ್ಟೇ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಆಯಾಯ ಕಾಲಕ್ಕೆ ನಡೆಸುತ್ತಿಲ್ಲ. ಚುನಾವಣೆ ನಡೆಸಿದರೆ ಅದಕ್ಕಾಗಿ ಅನುದಾನ ಬಿಡುಗಡೆ ಮಾಡಬೇಕಾಗುತ್ತದೆ. ಇದಕ್ಕೆ ಹಣ ವಿನಿಯೋಗಿಸಿದರೆ ಗ್ಯಾರಂಟಿಗಳಿಗೆ ಹಣ ಒದಗಿಸಲಾಗದು ಎಂದು ಚುನಾವಣೆ ನಡೆಸುತ್ತಿಲ್ಲ. ಅಭಿವೃದ್ಧಿಯಲ್ಲಿ ಈ ಸರ್ಕಾರದ್ದು ಶೂನ್ಯ ಸಾಧನೆ.

–**ಕೆ.ಹನುಮಂತ,** ಜೆಡಿಎಸ್ ಮುಖಂಡರು, ತಾಪಂ ಮಾಜಿ ಸದಸ್ಯರು.

ಮೇ, ಜೂನ್ ತಿಂಗಳ ಪಡಿತರ ಇದೇ ತಿಂಗಳು ವಿತರಣೆ ನಿರ್ಧಾರ



ನ್ಯಾಯಬೆಲೆ ಅಂಗಡಿ ವರ್ತಕರ ಸಭೆ ಉದ್ದೇಶಿಸಿ ಮೈಸೂರು ನಗರ ಗ್ಯಾರಂಟಿ ಅನುಷ್ಠಾನ ಅಧ್ಯಕ್ಷರಾದ ಪುಷ್ಪವಲ್ಲಿ ಮಾತನಾಡಿದರು.

ಮೈಸೂರು, ಮೇ 19(ವಿವಿಹೆಚ್)– ಕೇಂದ್ರ ಸರ್ಕಾರದ ಎರಡು ತಿಂಗಳ ಪಡಿತರವನ್ನು ಮೇ ತಿಂಗಳಿನಲ್ಲಿಯೇ ವಿತರಿಸಲಾಗುವುದು. ಹಾಗೂ ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಯಡಿ ಪಡಿತರವನ್ನು ಜೂನ್ ತಿಂಗಳಲ್ಲಿ ವಿತರಿಸಲಾಗುವುದು ಎಂದು ನಗರ ಗ್ಯಾರಂಟಿ ಅನುಷ್ಠಾನ ಅಧ್ಯಕ್ಷರಾದ ಪುಷ್ಪವಲ್ಲಿ ತಿಳಿಸಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ, ನರಸಿಂಹರಾಜ ವಿಧಾನಸಭಾ ಕ್ಷೇತ್ರದ ವತಿಯಿಂದ ನಗರ ಪಾಲಿಕೆಯ ಮುಖ್ಯ ಕಚೇರಿಯಲ್ಲಿ ಮಂಗಳವಾರ ನಡೆದ ಆಹಾರ ಇಲಾಖೆ ಹಾಗೂ ನ್ಯಾಯಬೆಲೆ ಅಂಗಡಿ ಮಾಲೀಕರ ಸಭೆಯಲ್ಲಿ ಮಾತನಾಡಿದರು.

ಕೇಂದ್ರ ಸರ್ಕಾರದಿಂದ ಮೇ ಮತ್ತು ಜೂನ್ ತಿಂಗಳ ಪಡಿತರವನ್ನು ಮೇ ತಿಂಗಳಲ್ಲಿಯೇ ಬಿಡುಗಡೆ ಮಾಡಿದ್ದಾರೆ. ಹಾಗಾಗಿ ಈ ಎರಡು ತಿಂಗಳ ಪಡಿತರವನ್ನು ಮೇ ನಲ್ಲಿ ವಿತರಿಸಲಾಗುವುದು. ಇನ್ನು ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಯ ಮೇ ಮತ್ತು ಜೂನ್ ತಿಂಗಳ ಪಡಿತರವನ್ನು ಜೂನ್ ತಿಂಗಳಲ್ಲಿ ವಿತರಿಸಲಾಗುವುದು ಎಂದು ಸ್ಪಷ್ಟನೆ ನೀಡಿದರು.

ನ್ಯಾಯಬೆಲೆ ಅಂಗಡಿ ಮಾಲೀಕರಿಗೆ ಸರಕು ಸಾಗಾಣೆಯಲ್ಲಿ ಬಹಳ ಸಮಸ್ಯೆಯಾಗುತ್ತಿದೆ ಎಂದು ದೂರು ಬಂದಿದೆ. ಈ ಸಂಬಂಧ ಟೆಂಡರ್ ಮರು ಪರಿಶೀಲನೆಗೆ ಸೂಚನೆ ನೀಡಲಾಗುವುದು. ಖುದ್ದು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಪರಿಹರಿಸಲಾಗುವುದು. ಒಬ್ಬರು ಪಡಿತರ ಕೊಂಡೊಯ್ಯಲು ವಾರಗಟ್ಟಲೆ ಕಾಯುವುದನ್ನು ತಡೆಯಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಬಹಳ ಮುಖ್ಯವಾಗಿ ಸರ್ವರ್ ಸಮಸ್ಯೆ ಹೆಚ್ಚಾಗಿ ಕಂಡುಬರುತ್ತಿದೆ. ಈ ಬಾರಿ ಎರಡೆರಡು ಬಯೋ ಮೆಟ್ರಿಕ್ ಪಡೆಯಲಾಗುತ್ತಿದ್ದು, ಸರ್ವರ್ ಸಮಸ್ಯೆ ಹೆಚ್ಚಾಗಿಯೇ ಇರಲಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ, ಶೀಘ್ರ ಬಗೆಹರಿಸುವುದಾಗಿ ಭರವಸೆ ನೀಡಿದರು.

'ಮೈಸೂರು ಮಿತ್ರ' ವರದಿ ಉಲ್ಲೇಖ: ಮೈಸೂರಿನ ಬಿಎಂಶ್ರೀ ನಗರದಲ್ಲಿ ಸಾರ್ವಜನಿಕರಿಂದ ಅಕ್ರಮವಾಗಿ ಪಡಿತರ ಅಕ್ಕಿ ಖರೀದಿಸಿ, ಸಾಗಿಸುತ್ತಿದ್ದ ನಾಲ್ವರನ್ನು ವಶಕ್ಕೆ ಪಡೆದ ಬಗ್ಗೆ ಮೇ.18 ರಂದು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಯನ್ನು ಉಲ್ಲೇಖಿಸಿದ ಪುಷ್ಪವಲ್ಲಿ, ಕಾಳ ಸಂತೆಯಲ್ಲಿ ಅಕ್ರಮವಾಗಿ ಮಾರಾಟ ಮಾಡುವುದು, ಕೊಳ್ಳುವುದು ಎರಡೂ ತಪ್ಪು. ಈ ಸಂಬಂಧ ಮಾಹಿತಿ ಬಂದಲ್ಲಿ ನಿರ್ದಾಕ್ಷಿಣ್ಯ ಕ್ರಮಕೈಗೊಳ್ಳುತ್ತೇವೆ. ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕೆಲಸ ಆಗಬೇಕು. ಕಾಳದಂಧೆಗೆ ಕಡಿವಾಣ ಹಾಕಲು ಮಾಲೀಕರು, ಸಾರ್ವಜನಿಕರು ನಮ್ಮೊಂದಿಗೆ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ನರಸಿಂಹರಾಜ ಗ್ಯಾರಂಟಿ ಅಧ್ಯಕ್ಷ ಎಂ.ಎನ್.ಮಹದೇವ್, ಆಹಾರ ಇಲಾಖೆ ಸಹಾಯಕ ನಿರ್ದೇಶಕ ಶ್ರೀಧರ್, ಸಮಿತಿ ಸದಸ್ಯರಾದ ರಾಕೇಶ್, ಸುರೇಂದ್ರ ಶಿ ಕುಮಾರ್, ರೇಷ್ಮಾ, ಅಹ್ಮದ್ ಸಲೀಮ್, ಮೊಹಮದ್ ಸಾದಾಬ್, ವಿಜಯಲಕ್ಷ್ಮಿ, ಸದಸ್ಯ ಕಾರ್ಯದರ್ಶಿ ಲೋಕೇಶ್ ಉಪಸ್ಥಿತರಿದ್ದರು.

ಮೈಸೂರು ವಿವಿ ಆಡಳಿತದ ಅದ್ವಾನ: ಶುಲ್ಕ ಪಾವತಿಗೆ ಬಿಸಿಲಲ್ಲೇ ಸರದಿ ಸಾಲಿನಲ್ಲಿ ನಿಂತು ಸುಸ್ತಾದ ವಿದ್ಯಾರ್ಥಿಗಳು



ಹಣ ಪಾವತಿಗಾಗಿ ಬಿಸಿಲಲ್ಲೇ ಸರದಿ ಸಾಲಿನಲ್ಲಿ ನಿಂತಿರುವ ವಿದ್ಯಾರ್ಥಿಗಳು

ಮೈಸೂರು, ಮೇ 19(ವಿವಿಹೆಚ್)– ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವ ಪ್ರಮಾಣಪತ್ರದ ಶುಲ್ಕ ಪಾವತಿಗಾಗಿ ನೂರಾರು ವಿದ್ಯಾರ್ಥಿಗಳು ಸೋಮವಾರ ದಿನವಿಡೀ ಸರದಿ ಸಾಲಿನಲ್ಲಿ ನಿಂತು ಪರದಾಡಿದ ಘಟನೆ ನಗರದ ಮೈಸೂರು ವಿವಿ ಕ್ರಾಫರ್ಡ್ ಭವನದ ಎಸ್‌ಬಿಐ ಶಾಖೆಯ ಮುಂಭಾಗದಲ್ಲಿ ಮಂಗಳವಾರ ನಡೆದಿದೆ.

ಬಿಸಿಲಿನ ತಾಪದಲ್ಲೇ ವಿದ್ಯಾರ್ಥಿಗಳು ನೀರು ಹಾಗೂ ಮೂಲಭೂತ ಸೌಕರ್ಯಗಳಿಲ್ಲದೆ ಹಲವು ಗಂಟೆಗಳು ಕಾಯಬೇಕಾಯಿತು. ಕೆಲ ವಿದ್ಯಾರ್ಥಿನಿಯರು ಮತ್ತು ಪೋಷಕರು ಸಹ ಸಾಲಿನಲ್ಲಿ ನಿಂತು ಹಿಡಿಶಾಪ ಹಾಕುತ್ತಿದುದ್ದು ಕಂಡುಬಂದಿತು.

ವಿಶ್ವವಿದ್ಯಾಲಯವು ಆನ್‌ಲೈನ್ ಮೂಲಕ ಘಟಿಕೋತ್ಸವ ಪ್ರಮಾಣಪತ್ರ ನೀಡುತ್ತಿದ್ದು, ಅದಕ್ಕಾಗಿ 2,840 ರೂ. ನಿಗದಿಗೊಳಿಸಿದೆ. ಶುಲ್ಕ ಪಾವತಿಗೆ ಬುಧವಾರ ಕೊನೆಯ ದಿನವಾದ್ದರಿಂದ ನೂರಾರು ವಿದ್ಯಾರ್ಥಿಗಳು ಬೆಳಗ್ಗಿನಿಂದ ಬ್ಯಾಂಕ್ ಮುಂದೆ ಜಮಾಯಿಸಿದ್ದರು. ಮೈಸೂರು, ಚಾಮರಾಜನಗರ, ಮಂಡ್ಯ ಹಾಸನ ಸೇರಿದಂತೆ ವಿವಿಧೆಡೆಗಳಿಂದ ಆಗಮಿಸಿದ್ದ ವಿದ್ಯಾರ್ಥಿಗಳು ಬಿಸಿಲಲ್ಲೇ ಶುಲ್ಕ ಪಾವತಿಗಾಗಿ ಸರದಿ ಸಾಲಿನಲ್ಲಿ ನಿಂತರು.

2023, 24 ಮತ್ತು 25ನೇ ಸಾಲಿನ ವಿದ್ಯಾರ್ಥಿಗಳು ಹೀಗೆ ಶುಲ್ಕ ಪಾವತಿಗಾಗಿ ಬಂದಿದ್ದರು. ಆನ್ ಲೈನ್ ಮೂಲಕ ಪದವಿ ಪ್ರಮಾಣ ಪತ್ರ ಪಡೆಯಲು 2,840 ಯಾಕೆ ನೀಡಬೇಕು. ಎರಡೇ ದಿನಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಶುಲ್ಕ ಕಟ್ಟಲು ಹೇಗೆ ಸಾಧ್ಯ. ಎಲ್ಲಾ ವಿದ್ಯಾರ್ಥಿಗಳು ಈ ಬ್ಯಾಂಕ್‌ನಲ್ಲೇ ಬಂದು ಶುಲ್ಕ ಕಟ್ಟಬೇಕು ಎಂದು ಹೇಳಿದ್ದಾರೆ. ಬೇರೆ, ಬೇರೆ ಶಾಖೆಗಳಲ್ಲೂ ಶುಲ್ಕ ಪಾವತಿಗೆ ಅವಕಾಶ ಮಾಡಿಕೊಡಬೇಕಿತ್ತು. ಆನ್‌ಲೈನ್ ಮೂಲಕ ಶುಲ್ಕ ಪಾವತಿಸುವ ವ್ಯವಸ್ಥೆ ಮಾಡಿಲ್ಲ ಬ್ಯಾಂಕ್‌ನಲ್ಲಿ ಮಾತ್ರ ಪಾವತಿಸಲು ಸೂಚಿಸಿರುವುದರಿಂದ ಅನಗತ್ಯ ತೊಂದರೆ ಎದುರಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೆಲವರು ದೂರದ ಊರುಗಳಿಂದ ಬಂದಿದ್ದರೂ ದಿನವಿಡೀ ಕಾಯಬೇಕಾದ ಪರಿಸ್ಥಿತಿ ಎದುರಾಗಿದೆ. ವಿವಿ, ವಿದ್ಯಾರ್ಥಿಗಳಿಗೆ ಸರಿಯಾದ ಮಾಹಿತಿ ನೀಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೆಲವು ವಿದ್ಯಾರ್ಥಿಗಳು ಈ ಅವ್ಯವಸ್ಥೆಗೆ ಆಕ್ರೋಶ ಹೊರಹಾಕಿದರು.

ಲೆಟರ್ ಹೆಡ್–ವಿಸಿಟಿಂಗ್ ಕಾರ್ಡ್ ಶೋಕಿ ಇರುವವರು ಬೇಡ; ನಿಷ್ಠೆಯಿಂದ ಸಕ್ರಿಯವಾಗಿ ಪಕ್ಷದ ಕೆಲಸ ಮಾಡುವವರು ಬೇಕು

ಜೆಡಿಎಸ್ ಜಿಲ್ಲಾಧ್ಯಕ್ಷರುಗಳ ಸಭೆಯಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಖಡಕ್ ಸಂದೇಶ



ಜೆಡಿಎಸ್ ರಾಜ್ಯಾಧ್ಯಕ್ಷರೂ ಆದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಪಕ್ಷದ ಜಿಲ್ಲಾಧ್ಯಕ್ಷರ ಸಭೆ ನಡೆಸಿದರು.

ಬೆಂಗಳೂರು, ಮೇ 19– ನನಗೆ ಲೆಟರ್ ಹೆಡ್, ವಿಸಿಟಿಂಗ್ ಕಾರ್ಡ್ ಮಾಡಿಸಿಕೊಂಡು ಅಧಿಕಾರ ಚಲಾಯಿಸುವ ಜಿಲ್ಲಾಧ್ಯಕ್ಷರುಗಳು ಬೇಕಾಗಿಲ್ಲ, ಸಕ್ರಿಯವಾಗಿ ನಿಷ್ಠೆಯಿಂದ ಪಕ್ಷದ ಕೆಲಸ ಮಾಡುವವರು ಬೇಕು. ಮುಂದಿನ ದಿನಗಳಲ್ಲಿ ಅಂಥವರಿಗೆ ಮಾತ್ರ ಅವಕಾಶ ಎಂದು ಜೆಡಿಎಸ್ ರಾಜ್ಯಾಧ್ಯಕ್ಷರೂ ಆದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ಪಕ್ಷದ ರಾಜ್ಯ ಕಚೇರಿ ಜೆ.ಪಿ.ಭವನದಲ್ಲಿ ನಡೆದ ಜಿಲ್ಲಾಧ್ಯಕ್ಷರುಗಳ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಚಿವರು, ಕೋರ್ ಕಮಿಟಿ ಸಭೆಗೆ ಕಡ್ಡಾಯವಾಗಿ ಎಲ್ಲಾ ಸದಸ್ಯರು ಹಾಜರಾಗಬೇಕು. ಎರಡು ಅಥವಾ ಮೂರು ಸಭೆಗಳಿಗೆ ಗೈರು ಹಾಜರಾದರೆ ಯಾರೇ ಆಗಲೀ ಅವರನ್ನು ಬದಲಿಸಿ ಬೇರೊಬ್ಬರನ್ನು ನೇಮಿಸಲಾಗುವುದು ಎಂದರು.

ಸಾಧ್ಯವಾಗದಿದ್ದರೆ ಜಾಗ ಬಿಟ್ಟುಕೊಡಿ: ನಿಷ್ಠೆಯಿಂದ ಪಕ್ಷ ಸಂಘಟನೆ ಮಾಡಬೇಕು. ಮುಂದಿನ ಎರಡು ವರ್ಷಗಳಲ್ಲಿ ಸಮರೋಪಾದಿಯಲ್ಲಿ ಕೆಲಸ ಮಾಡಬೇಕು. ಕೇವಲ ವಿಸಿಟಿಂಗ್ ಕಾರ್ಡ್ ಮತ್ತು ಲೆಟರ್ ಹೆಡ್ ಶೋಕಿ ಇರುವ ಜನ ನನಗೆ ಬೇಕಿಲ್ಲ. ಅಂಥವರಿಂದ ಪಕ್ಷಕ್ಕೆ ಯಾವುದೇ ಉಪಯೋಗ ಇಲ್ಲ. ಜಿಲ್ಲಾಧ್ಯಕ್ಷ ಅಥವಾ ಕೋರ್ ಕಮಿಟಿ ಜವಾಬ್ದಾರಿ ಕೇವಲ ಅಲಂಕಾರಕ್ಕೆ ಅಲ್ಲ. ಈಗ ಇರುವವರು ಉತ್ತಮ ರೀತಿಯಲ್ಲಿ ಕೆಲಸ ಮಾಡಿ. ಅದು ನಿಮ್ಮಿಂದ ಸಾಧ್ಯವಾಗದಿದ್ದರೆ ಬೇರೆಯವರಿಗೆ ಅವಕಾಶ ಮಾಡಿಕೊಡಿ ಎಂದು ಖಡಕ್ಕಾಗಿ ಹೇಳಿದರು.

ಕಾರ್ಯಕರ್ತರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ಕೆಲ ಭಾಗದಲ್ಲಿ ಮುಖಂಡರ ವರ್ತನೆಯಿಂದ ಪಕ್ಷಕ್ಕೆ ಸಮಸ್ಯೆ ಆಗುತ್ತಿದೆ. ಯಾವ ಹುದ್ದೆಯೂ ಶಾಶ್ವತವಲ್ಲ. ಯಾವುದೇ ಜವಾಬ್ದಾರಿ ಪಕ್ಷದ ಕೆಲಸಕ್ಕಾಗಿ ಇರುವ ಅವಕಾಶವಷ್ಟೇ. ಹೀಗಾಗಿ ಪ್ರತಿಯೊಬ್ಬರೂ ದಿನಕ್ಕೆ ಕನಿಷ್ಠ ಒಂದು ಗಂಟೆಯಾದರೂ ಪಕ್ಷದ ಕೆಲಸ ಮಾಡಬೇಕು ಎಂದು ಸೂಚನೆ ನೀಡಿದರು.

ಜನಪರ ಹೋರಾಟ ಮಾಡಿ: ರಾಜ್ಯದಲ್ಲಿ ರೈತರು, ಕೃಷಿ ಕಾರ್ಮಿಕರು, ಕೂಲಿ ಕಾರ್ಮಿಕರು ಸೇರಿದಂತೆ ಬಡ ಹಾಗೂ ಮಧ್ಯಮ ವರ್ಗದ ಜನ ಕಷ್ಟದಲ್ಲಿದ್ದಾರೆ. ರಾಜ್ಯದ ಕಾಂಗ್ರೆಸ್ ಸರ್ಕಾರ ಯಾವುದೇ ಒಳ್ಳೆಯ ಕೆಲಸವನ್ನೂ ಮಾಡುತ್ತಿಲ್ಲ. ಕೇವಲ ಗ್ಯಾರಂಟಿ ಕಾರ್ಯಕ್ರಮಗಳ ಮೂಲಕ ಪ್ರಚಾರ ಪಡೆಯುತ್ತಿದೆ. ಗ್ರಾಮ ಪಂಚಾಯ್ತಿ, ತಾಲೂಕು, ಜಿಲ್ಲಾ ಮಟ್ಟದಲ್ಲಿ ಜನಪರ ವಿಷಯಗಳನ್ನು ಇಟ್ಟುಕೊಂಡು ಹೋರಾಟ ನಡೆಸುವ ಮೂಲಕ ಸರ್ಕಾರದ ವೈಫಲ್ಯಗಳನ್ನು ಜನತೆಗೆ ಮನದಟ್ಟು ಮಾಡಿ ಎಂದು ತಿಳಿಸಿದರು.

ಪಕ್ಷ ಸಂಘಟನೆ ಜೊತೆಗೆ ಜನಸಂಪರ್ಕ ಬಹಳ ಮುಖ್ಯ. ಮುಂದೆ ಜನಪ್ರತಿನಿಧಿಗಳಾಗಲು ಎಲ್ಲರೂ ಅರ್ಹರು. ಇಂತಹ ಆಸೆ, ಆಶಯ ಹೊಂದಿರುವವರು ಜನಪರ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಶ್ರಮವಿಲ್ಲದೆ ಯಾವುದೇ ಅಧಿಕಾರ ಅಥವಾ ಅವಕಾಶ ಸಿಗುವುದಿಲ್ಲ ಎಂಬುದನ್ನು ಮರೆಯಬೇಡಿ ಎಂದು ಕಿವಿಮಾತು ಹೇಳಿದರು.

ಸಭೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಕೋರ್ ಕಮಿಟಿ ಅಧ್ಯಕ್ಷ ಎಂ.ಕೃಷ್ಣಾರೆಡ್ಡಿ, ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಸಂಸದ ಮಲ್ಲೇಶ್ ಬಾಬು, ಶಾಸಕರಾದ ವೆಂಕಟಶಿವಾರೆಡ್ಡಿ, ಎ.ಮಂಜು, ಮಂಜುನಾಥ್, ಶರಣುಗೌಡ ಕಂದಕೂರ, ಟಿ.ಎ.ಶರವಣ, ಜವರಾಯಿ ಗೌಡ, ರಾಜುಗೌಡ, ಕರೆಮ್ಮ ನಾಯಕ್, ಸ್ವರೂಪ ಪ್ರಕಾಶ್, ನೇಮಿರಾಜ್ ನಾಯಕ, ಮಾಜಿ ಸಚಿವರಾದ ಡಿ.ಸಿ.ತಮ್ಮಣ್ಣ, ಬಂಡೆಪ್ಪ ಕಾಶೆಂಪೂರ, ವೆಂಕಟರಾವ ನಾಡಗೌಡ ಸೇರಿದಂತೆ ಪಕ್ಷದ ಎಲ್ಲಾ ಜಿಲ್ಲಾ ಅಧ್ಯಕ್ಷರುಗಳು, ಪ್ರಮುಖ ಮುಖಂಡರು ಭಾಗವಹಿಸಿದ್ದರು.

ಪ್ರಧಾನಮಂತ್ರಿ ಸೂರ್ಯಘರ್ ಯೋಜನೆ ಪರಿಣಾಮಕಾರಿ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಿ

- ಪ್ರಭಾರ ಸೆಸ್ಕ್ ಎಂಡಿ ನಿತೇಶ್ ಪಾಟೀಲ್ ಸೂಚನೆ
- ಜನರಲ್ಲಿ ಯೋಜನೆ ಬಗ್ಗೆ ಅರಿವು ಮೂಡಿಸಲು ಸಲಹೆ



ಸೆಸ್ಕ್ ಪ್ರಧಾನ ಕಚೇರಿಯಲ್ಲಿ ಪ್ರಾದೇಶಿಕ ಆಯುಕ್ತರು ಹಾಗೂ ಸೆಸ್ಕ್ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ ನಿತೇಶ್ ಪಾಟೀಲ್ ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆ ಕುರಿತು ಸೆಸ್ಕ್ ಅಧಿಕಾರಿಗಳು ಹಾಗೂ ಪೂರೈಕೆದಾರರೊಂದಿಗೆ ಸಭೆ ನಡೆಸಿದರು.

ಮೈಸೂರು, ಮೇ 19(ಎಂಟಿವೈ)– ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದರೊಂದಿಗೆ ಜನರಲ್ಲಿ ಜಾಗೃತಿ ಮೂಡಿಸಲು ಚೆಸ್ಕಾಂ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಪ್ರಾದೇಶಿಕ ಆಯುಕ್ತರು ಆದ ಸೆಸ್ಕ್ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ ನಿತೇಶ್ ಪಾಟೀಲ್ ಸೂಚಿಸಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಎರಡನೇ ಹಂತದಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಪ್ರಧಾನ ಕಚೇರಿಯಲ್ಲಿ ಅಧಿಕಾರಿಗಳು ಹಾಗೂ ಪೂರೈಕೆದಾರರೊಂದಿಗೆ ಸಭೆ ನಡೆಸಿದ ಅವರು, ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆ 2024ರಲ್ಲಿ ಆರಂಭವಾಗಿದ್ದರೂ, ಯೋಜನೆ ಸೌಲಭ್ಯ ಪಡೆಯಲು ಇದುವರೆಗೂ ನಿರೀಕ್ಷಿತ ಅರ್ಜಿಗಳು ಸಲ್ಲಿಕೆಯಾಗಿಲ್ಲ. ವಿದ್ಯುತ್ ದರ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಸೋಲಾರ್ ರೂಫ್ ಟಾಪ್ ಅಳವಡಿಸಿಕೊಂಡರೆ ಗ್ರಾಹಕರಿಗೆ ವಾರ್ಷಿಕವಾಗಿ ಕನಿಷ್ಠ 25 ಸಾವಿರ ರೂ. ಉಳಿತಾಯವಾಗುವ ಸಾಧ್ಯತೆ ಇದೆ. ಯೋಜನೆಯ ಅನುಷ್ಠಾನಕ್ಕೆ ಸರ್ಕಾರದಿಂದ ಸಬ್ಸಿಡಿ ಸೌಲಭ್ಯವಿದ್ದು, ಇದು ಗ್ರಾಹಕರಿಗೆ ಲಾಭದಾಯಕವಾಗಿದೆ. ಈ ಬಗ್ಗೆ ಜನರಿಗೆ ಸಮರ್ಪಕ ಮಾಹಿತಿ ನೀಡುವ ಮೂಲಕ ಹೆಚ್ಚು ಗ್ರಾಹಕರು ಯೋಜನೆಯ ಬಳಕೆಗೆ ಮುಂದಾಗುವಂತೆ ಜಾಗೃತಿ ಮೂಡಿಸಬೇಕು ಎಂದರು.

ಗ್ರಾಹಕರಿಗೆ ವೆಂಡರ್‌ಗಳ ಮಾಹಿತಿ ಸುಲಭವಾಗಿ ದೊರೆಯುವ ವ್ಯವಸ್ಥೆ ಮಾಡಬೇಕು. ಇದರಿಂದಾಗಿ ಗ್ರಾಹಕರು ತಮ್ಮ ಅಗತ್ಯತೆ ಮತ್ತು ಅನುಕೂಲಕ್ಕೆ ತಕ್ಕಂತೆ ವೆಂಡರ್‌ಗಳ ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಸೋಲಾರ್ ರೂಫ್ ಟಾಪ್ ಅಳವಡಿಕೆಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿದ ಕೂಡಲೇ ಸೆಸ್ಕ್ ಅಧಿಕಾರಿಗಳು ಅರ್ಜಿ ಪರಿಶೀಲಿಸುವ ಪ್ರಕ್ರಿಯೆ ತ್ವರಿತವಾಗಿ ನಡೆಯಬೇಕು. ಗ್ರಾಹಕರು ವೆಂಡರ್ ಆಯ್ಕೆ ಮಾಡದೇ ಇರುವುದರಿಂದ ಅವರಿಗೆ ಯೋಜನೆ ಕುರಿತು ಸಮರ್ಪಕ ಅರಿವು ಇಲ್ಲದಿರುವುದು ಕಂಡು ಬರುತ್ತಿದೆ. ಅಂತಹ ಗ್ರಾಹಕರನ್ನು ಸಂಪರ್ಕಿಸಿ ಯೋಜನೆ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲಾಡಳಿತ, ಪಾಲಿಕೆ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಯೋಜನೆ ಜಾರಿಗೊಳಿಸಬೇಕು. ಸಂಭಾವ್ಯ ಗ್ರಾಹಕರನ್ನು ಭೇಟಿಯಾಗಿ, ವೆಂಡರ್‌ಗಳು ಯೋಜನೆಯ ಲಾಭಗಳ ಬಗ್ಗೆ ಮನವರಿಕೆ ಮಾಡಿಕೊಡಬೇಕು. ವೆಂಡರ್‌ಗಳು ಅರ್ಜಿ ಪರಿಶೀಲನೆಯಾದ ಐದು ದಿನಗಳಲ್ಲಿ ಸ್ಮಾರ್ಟ್ ಮೀಟರ್ ಸೇರಿದಂತೆ ಸಂಬಂಧಿಸಿದ ಎಲ್ಲಾ ಕೆಲಸ ಪೂರ್ಣಗೊಳಿಸಬೇಕು. ಸೋಲಾರ್ ರೂಫ್ ಟಾಪ್ ಅಳವಡಿಸಿಕೊಳ್ಳಲು ಗ್ರಾಹಕರಿಗೆ ವಿಶ್ವಾಸ ಮೂಡಿಸಬೇಕು ಎಂದರು.

ಸಭೆಯಲ್ಲಿ ಸೆಸ್ಕ್ ತಾಂತ್ರಿಕ ನಿರ್ದೇಶಕರಾದ ಶರಣಮ್ಮ ಎಸ್. ಜಂಗಿನ, ಮುಖ್ಯ ಇಂಜಿನಿಯರ್ ಎಲ್.ಲೋಕೇಶ್, ಅಧೀಕ್ಷಕ ಇಂಜಿನಿಯರ್‌ಗಳಾದ ಸುನೀಲ್ ಕುಮಾರ್, ಸೋಮಶೇಖರ್, ಪ್ರಧಾನ ವ್ಯವಸ್ಥಾಪಕರಾದ ಹೆಚ್.ಆರ್. ದಿನೇಶ್, ಆರ್. ರಾಮಸ್ವಾಮಿ ಇತರರು ಉಪಸ್ಥಿತರಿದ್ದರು.

ಪ್ರಧಾನಮಂತ್ರಿ ಸೂರ್ಯಘರ್ ಯೋಜನೆ ಕುರಿತು ಜಾಗೃತಿ ಮೂಡಿಸುವುದರೊಂದಿಗೆ ಪ್ರಚಾರ ಮಾಡಲು 2026ರ ಮೇ ತಿಂಗಳನ್ನು 'ಸೋಲಾರ್ ತಿಂಗಳು' ಎಂದು ಆಚರಿಸಲಾಗುತ್ತಿದೆ. ಬೇಸಿಗೆಯಲ್ಲಿ ಸೂರ್ಯ ಕಿರಣದ ಪ್ರಮಾಣ ಹೆಚ್ಚಿರುವ ಹಿನ್ನೆಲೆ, ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ನಿರ್ದೇಶನದಂತೆ ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಈ ಅಭಿಯಾನ ನಡೆಸಲಾಗುತ್ತಿದೆ. ಸೋಲಾರ್ ತಿಂಗಳು ಆಚರಣೆ ಮೂಲಕ ಪಿಎಂ ಸೂರ್ಯಘರ್ ಯೋಜನೆಗೆ ಸಂಬಂಧಿಸಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳ ನೋಂದಣಿ, ಗರಿಷ್ಠ ಸಂಖ್ಯೆಯ ಸೋಲಾರ್ ರೂಫ್ ಟಾಪ್ ಘಟಕಗಳ ಅನುಷ್ಠಾನ, ಸ್ಥಳ ಪರಿಶೀಲನೆ ಕಾರ್ಯವನ್ನು ಚುರುಕುಗೊಳಿಸುವುದು ಹಾಗೂ ಹೊಸ ವೆಂಡರ್‌ಗಳ ನೋಂದಣಿ ಅಂಶಗಳ ಮೇಲೆ ವಿಶೇಷ ಒತ್ತು ನೀಡಲು ಸೂಚಿಸಲಾಗಿದೆ. ಪಿಎಂ ಸೂರ್ಯ ಘರ್ ಯೋಜನೆ ಕುರಿತ ಮಾಹಿತಿಗಾಗಿ ಹೆಲ್ಪ್ ಡೆಸ್ಕ್ ಸಂಖ್ಯೆ 9448994706 ಅಥವಾ ಹತ್ತಿರದ ಸೆಸ್ಕ್ ಕಚೇರಿಯನ್ನು ಸಂಪರ್ಕಿಸಬಹುದು.

ಸಾಮಾಜಿಕ ಕ್ರಾಂತಿ ಕಹಳೆ ಮೊಳಗಿಸುವ ಮೂಲಕ

ಸಮಾನತೆ ತರಲು ಪ್ರಯತ್ನಿಸಿದವರಲ್ಲಿ ಬಸವಣ್ಣ ಮೊದಲಿಗರು

ಬಸವೇಶ್ವರ ಜಯಂತಿಯಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ಬಸವೇಶ್ವರರ ಪುತ್ಥಳಿ ಮೆರವಣಿಗೆ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಚಾಲನೆ ನೀಡಿದರು.

ಸರಗೂರು, ಮೇ 19– ಸಾಮಾಜಿಕ ಕ್ರಾಂತಿಯ ಕಹಳೆ ಮೊಳಗಿಸುವ ಮೂಲಕ ಸಮಾಜದಲ್ಲಿ ಸಮಾನತೆ ತರಲು ಪ್ರಯತ್ನಿಸಿದವರಲ್ಲಿ ಬಸವಣ್ಣ ಮೊದಲಿಗರು ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ವೀರಶೈವ ಲಿಂಗಾಯತ ಸಮಾಜದ ಕಚೇರಿಯಲ್ಲಿ ಮಂಗಳವಾರ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸರಗೂರು ತಾಲೂಕು ಘಟಕದಿಂದ ನಡೆದ ಜಗಜ್ಯೋತಿ ಬಸವೇಶ್ವರ ಜಯಂತಿ ಮಹೋತ್ಸವ ಕಾರ್ಯಕ್ರಮದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು, ಬಸವಣ್ಣನವರನ್ನು ನಾವು ಜಗಜ್ಯೋತಿ, ವಿಶ್ವಗುರು ಸೇರಿದಂತೆ ಇನ್ನಿತರ ಹೆಸರಿನಿಂದ ಗುರುತಿಸುತ್ತೇವೆ. ಅವರು ಅಂದಿನ ಕಾಲದಲ್ಲೇ ಸಮಾನತೆಯ ಸಂದೇಶ ಸಾರಿದ್ದರು. ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಬಳಿಕ ಜೆಎಸ್‌ಎಸ್ ಶಾಲಾವರಣದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ತಹಸೀಲ್ದಾರ್ ಮೋಹನ ಕುಮಾರಿ, ಬಸವಣ್ಣನವರು 12ನೇ ಶತಮಾನದಲ್ಲೇ ಅನುಭವ ಮಂಟಪ ನಿರ್ಮಿಸುವ ಮೂಲಕ ಎಲ್ಲರಿಗೂ ಸಮಾನತೆ ಕಲ್ಪಿಸಿದರು. ಅಂತರ್ಜಾತಿ ವಿವಾಹಗಳನ್ನು ನಡೆಸಿದರು. ಅನುಭವ ಮಂಟಪದಲ್ಲಿ ಎಲ್ಲಾ ವರ್ಗದವರು ಚರ್ಚಿಸುತ್ತಿದ್ದರು. ಪ್ರಸ್ತುತ ಗ್ರಾಪಂಗಳು ಅನುಭವ ಮಂಟಪಗಳಾಗಬೇಕಿತ್ತು ಆದರೆ ಅದು ಸಾಧ್ಯವಾಗದಿರುವುದು ನಮ್ಮ ದುರಂತ. ಆದ್ದರಿಂದ ಈ ಜಯಂತಿಯ ಉದ್ದೇಶ ಅರಿತು, ಶರಣರ ಯೋಚನೆಯಂತೆ ಸಮಾನತೆ, ಮಾನವೀಯ ದೃಷ್ಟಿಕೋನ ಸಮಾಜದಲ್ಲಿ ನಿರ್ಮಿಸಬೇಕು. ಸರಗೂರಿನಲ್ಲಿ ಬಸವ ಭವನ ನಿರ್ಮಾಣವಾಗುತ್ತಿರುವುದು ಸಂತಸ ತಂದಿದೆ. ಇದಕ್ಕೆ ನನ್ನ ಸಹಕಾರವು ಇರಲಿದೆ ಎಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮಾಜಿ ಕೋಶಾಧ್ಯಕ್ಷ ವರುಣ ಮಹೇಶ್ ಮಾತನಾಡಿ, ಮಠ ಮಾನ್ಯಗಳು ಬಡ ಮಕ್ಕಳಿಗೆ ಅಕ್ಷರ, ಅನ್ನ ದಾಸೋಹ ನೀಡುತ್ತಿದ್ದು, ಪ್ರತಿಯೊಬ್ಬರೂ ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮಕ್ಕೂ ಮುನ್ನಾ, ಬಸವೇಶ್ವರರ ಪುತ್ಥಳಿಯನ್ನು ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಿ, ನಂದಿ ಧ್ವಜ, ಶರಣರ ವಚನಗಳು, ಅಲಂಕೃತ ಸ್ತಬ್ಧ ಚಿತ್ರಗಳು, ಭಜನಾ ಮೇಳ, ವೀರಗಾಸೆ ಕುಣಿತ, ಡೊಳ್ಳು ಕುಣಿತ, ಮಂಗಳ ವಾದ್ಯ, ಚಂಡೆ ಮದ್ದಳೆ ಸೇರಿದಂತೆ ಇನ್ನಿತರ ಜಾನಪದ ಕಲಾ ತಂಡಗಳೊಂದಿಗೆ ಪಟ್ಟಣದ ಕೆಇಬಿ ಕಚೇರಿಯಿಂದ ಜೆಎಸ್‌ಎಸ್ ಶಾಲಾವರಣದವರೆಗೆ ಮೆರವಣಿಗೆ ಮಾಡಲಾಯಿತು.

ಈ ವೇಳೆ ದೇವನೂರು ಮಠದ ಮಹಾಂತ ಸ್ವಾಮೀಜಿ, ಹಂಚೀಪುರ ಮಠದ ಚನ್ನಬಸವ ಸ್ವಾಮೀಜಿ, ದಡದಹಳ್ಳಿ ಮಠದ ಡಾ.ಷಡಕ್ಷರಿ ಸ್ವಾಮೀಜಿ, ಬಿಡುಗಲು ಪಡುವಲು ವಿರಕ್ತ ಮಠದ ಮಹದೇವ ಸ್ವಾಮೀಜಿ, ಹಂಚೀಪುರ ಮಠದ ಕಿರಿಯ ತೋಂಟದಾರ್ಯ ಸ್ವಾಮೀಜಿ, ಮಾದಾಪುರ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಜಕ್ಕಹಳ್ಳಿ ಮಠದ ಶಿವಕುಮಾರ ಸ್ವಾಮೀಜಿ, ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಮಹಿಳಾ ಘಟಕ ಅಧ್ಯಕ್ಷೆ ವೀಣಾ ಕಾಶಪ್ಪನವರ್, ಸಮಾಜ ಸೇವಕರಾದ ಸುಧಾ ಮೃತ್ಯುಂಜಯಪ್ಪ, ಮಹಾಸಭಾ ಜಿಲ್ಲಾಧ್ಯಕ್ಷ ಹಿನಕಲ್ ಬಸವರಾಜು, ಬಿಜೆಪಿ ಮುಖಂಡರಾದ ಅಶೋಕ್, ಸುರೇಶ್, ಪಪಂ ಉಪಾಧ್ಯಕ್ಷ ವಿರೇಶ್, ಸದಸ್ಯ ಶ್ರೀನಿವಾಸ್ ಜಿಲ್ಲಾ ಘಟಕ ಮಾಜಿ ಅಧ್ಯಕ್ಷ ಎಸ್.ಶಿವಮೂರ್ತಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕೋಟೆ ಅಧ್ಯಕ್ಷ ರುದ್ರಪ್ಪ, ಪ್ರಧಾನ ಕಾರ್ಯದರ್ಶಿ ಗುರುಸ್ವಾಮಿ, ಕಾರ್ಯದರ್ಶಿ ಎಂ.ಎನ್.ಬಸವರಾಜು, ಜಯಕುಮಾರ್, ಮಹದೇವಮ್ಮ, ಮಾಜಿ ಅಧ್ಯಕ್ಷ ಡಿ.ಜಿ.ಶಿವರಾಜು, ಮೊತ್ತ ಬಸವರಾಜು, ಬಿ.ವಿ.ಬಸವರಾಜು, ಮಹದೇವಪ್ಪ, ಬಸವ ಬಳಗ ಅಧ್ಯಕ್ಷ ಗಣಪತಿ, ಕಾರ್ಯಾಧ್ಯಕ್ಷ ಸಿ.ಕೆ.ಗಿರೀಶ್, ಉಪಾಧ್ಯಕ್ಷ ಮೋಹನ್‌ಕುಮಾರ್, ಸಿದ್ದಪ್ಪ, ಕೋಶಾಧ್ಯಕ್ಷ ಎಸ್.ಎನ್.ಪ್ರಕಾಶ್, ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ, ಯುವ ಮುಖಂಡರಾದ ಜಯಪ್ರಕಾಶ್, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಶರಣ ಸಾಹಿತ್ಯ ಪರಿಷತ್‌ನ ಗುರುಸ್ವಾಮಿ, ಶಿವಪ್ಪಾಜಿ, ನಿರ್ದೇಶಕರಾದ ಮಹದೇವಸ್ವಾಮಿ, ಮಾದಪ್ಪ, ವಿರೂಪಾಕ್ಷ, ಶ್ರೀಕಂಠ, ಮಂಜುನಾಥ್, ಸುರೇಶ್, ವಿಕೇಶ್, ಪುಟ್ಟಮ್ಮ, ನೀಲಮ್ಮ, ಪುಟ್ಟಮಣಿ, ಮಂಜುಳಾ, ನಾಗರತ್ನ, ಮಂಗಳಮ್ಮ, ರೇಖಾ, ರಮ್ಯ, ಸುಪ್ರೀತಾ, ಶಾಂತ, ಬಾಡಗ ಸಿದ್ದಪ್ಪ, ಇಂದ್ರಪ್ಪ, ಸತೀಶ್, ಶಿವಕುಮಾರ್ ಸೇರಿದಂತೆ ಇನ್ನಿತರರಿದ್ದರು.

> "ವೀರಶೈವ ಲಿಂಗಾಯತ ಸಮಾಜದ ಎಲ್ಲಾ ಬಂಧುಗಳು ಬಸವಣ್ಣನವರ ಜಯಂತಿಗೆ ಸಹಕಾರ ನೀಡಿದ್ದಾರೆ. ದುಡಿದು ತಿನ್ನಬೇಕು ಅಗತ್ಯಕ್ಕಿಂತ ಹೆಚ್ಚಾಗಿದ್ದನ್ನು ಸಮಾಜ ಸೇವೆಗೆ ವಿನಿಯೋಗಿಸಬೇಕು ಎಂಬ ಬಸವಣ್ಣನವರ ತಾತ್ವಿಕ ನೆಲೆಗಟ್ಟಿನ ಚಿಂತನೆಯನ್ನು ನಾವೆಲ್ಲಾ ಮೈಗೂಡಿಸಿಕೊಂಡು ಸಮಾಜದ ಏಳಿಗೆಗೆ ಶ್ರಮಿಸಬೇಕು. –ವೀರಭದ್ರಪ್ಪ, ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ.

ಸರ್ಕಾರಿ ಶಾಲೆಗೆ ನಿಮ್ಮ ಮಕ್ಕಳನ್ನು ದಾಖಲಿಸಿ

ತಮಟೆ ಬಾರಿಸುವ ಮೂಲಕ ಜಾಗೃತಿ ಮೂಡಿಸಿದ ಮುಖ್ಯಶಿಕ್ಷಕ ಪ್ರಸನ್ನಕುಮಾರ್



ಸರ್ಕಾರಿ ಶಾಲೆಗೆ ಮಕ್ಕಳನ್ನು ದಾಖಲಿಸುವಂತೆ ಮುಖ್ಯಶಿಕ್ಷಕ ಬಿ.ವಿ.ಪ್ರಸನ್ನ ಕುಮಾರ್ ತಮಟೆ ಬಾರಿಸುವ ಮೂಲಕ ಜಾಗೃತಿ ಮೂಡಿಸಿದರು.

ಭೇರ್ಯ, ಮೇ 19– ಖಾಸಗಿ ಶಾಲೆಗಳ ವ್ಯಾಮೋಹ ತೊರೆದು ಗುಣಮಟ್ಟದ ಶಿಕ್ಷಣ ಮತ್ತು ಉಚಿತ ಸೌಲಭ್ಯಗಳನ್ನು ನೀಡುತ್ತಿರುವ ಸರ್ಕಾರಿ ಶಾಲೆಗೆ ನಿಮ್ಮ ಮಕ್ಕಳನ್ನು ದಾಖಲಿಸಿ ಎಂದು ಸಾಲಿಗ್ರಾಮ ತಾಲೂಕಿನ ಕುರುಬಹಳ್ಳಿ ಗ್ರಾಮದ ಸರ್ಕಾರಿ ಶಾಲೆ ಮುಖ್ಯಶಿಕ್ಷಕ ಬಿ.ವಿ.ಪ್ರಸನ್ನಕುಮಾರ್ ತಮಟೆ ಬಾರಿಸುವ ಮೂಲಕ ವಿದ್ಯಾರ್ಥಿಗಳೊಂದಿಗೆ ಮನೆ–ಮನೆಗೆ ಭೇಟಿ ನೀಡಿ ಜಾಗೃತಿ ಮೂಡಿಸಿದರು.

ಪೋಷಕರ ಮಾತಿಗೆ ಹೆಚ್ಚು ಬೆಲೆ ಇದೆ. ಪೋಷಕರು ಮತ್ತು ಮಕ್ಕಳನ್ನು ಶಾಲೆಗಳು ಮುಕ್ತ ಸ್ವಾತಂತ್ರ್ಯ ನೀಡಿ ಗೌರವಯುತವಾಗಿ ನಡೆಸಿಕೊಳ್ಳಲಾಗುವುದು. ಪೋಷಕರೇ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ /ಸದಸ್ಯರಾಗಿ ಶಾಲೆ ಅಭಿವೃದ್ಧಿಗೆ ಕೈಜೋಡಿಸಲು ಅವಕಾಶವಿದೆ ಎಂದು ತಮಟೆ ಬಾರಿಸುತ್ತಾ ಗ್ರಾಮದಲ್ಲಿ ಜಾಥಾ ಮೂಲಕ ಸಾರಿದರು.

ಪ್ರತಿ ತಿಂಗಳು ಶುಲ್ಕ ಕಟ್ಟಿಲ್ಲ ಎಂದು ಶಾಲೆಗಳಿಂದ ಮಕ್ಕಳನ್ನು ಹೊರಗೆ ಕಳುಹಿಸುವ ಪರಿಪಾಠ ಇಲ್ಲ. ಡೊನೇಷನ್ ನೀಡುವ ಅಗತ್ಯವಿಲ್ಲ. ಅದರ ಬದಲು ಮನೆಯಲ್ಲಿಯೇ ಆ ಹಣದಿಂದ ಉತ್ತಮ ಪುಸ್ತಕಗಳನ್ನು ಖರೀದಿಸಿ ಒಂದು ಗ್ರಂಥಾಲಯ ಸ್ಥಾಪಿಸಿ ಇದರ ಪ್ರಯೋಜನ ಪಡೆಯಬಹುದು.

ಕ್ರೀಡೆಗೆ ಉತ್ತಮ ಅವಕಾಶವಿದೆ. ತಾಲೂಕು ಮಟ್ಟದಿಂದ ರಾಜ್ಯಮಟ್ಟದವರೆಗೂ ಸರ್ಕಾರಿ ಶಾಲೆ ಮಕ್ಕಳು ಚಾಂಪಿಯನ್ ಆಗಿದ್ದಾರೆ. ಹೀಗಾಗಿ ನಿಮ್ಮ ಮಕ್ಕಳ ಉಜ್ವಲ ಭವಿಷ್ಯಕ್ಕೆ ಸರ್ಕಾರಿ ಶಾಲೆಗೆ ದಾಖಲಾತಿ ಮಾಡುವಂತೆ ಜಾಗೃತಿ ಮೂಡಿಸಿದರು.

ಯಾವುದೇ ಟ್ಯೂಷನ್ ಹಾವಳಿ ಇಲ್ಲ ಶಾಲೆಯಲ್ಲಿಯೇ ವಿಶೇಷ ತರಗತಿಗಳನ್ನು ನಡೆಸಲಾಗುತ್ತದೆ. ಪ್ರತಿ ತಿಂಗಳು ಶಾಲೆಯಿಂದ ಉಚಿತವಾಗಿ ಪ್ರಾತಿ ಪತ್ರ ಕಳುಹಿಸಿ ಕೊಡಲಾಗುವುದು. ಜೊತೆಗೆ ಪರೀಕ್ಷಾ ಪೂರ್ವ ತರಬೇತಿ ವ್ಯವಸ್ಥೆ ಇದೆ ಎಂದು ತಿಳಿಸಿದರು.

ಬಿಸಿಯೂಟದ ವ್ಯವಸ್ಥೆ ಇದ್ದು, ತಾಯಂದಿರು ಬೇಗನೆ ಎದ್ದು ಡಬ್ಬಿ ತಯಾರು ಮಾಡಿ ಕಳುಹಿಸುವ ಅಗತ್ಯವಿಲ್ಲ. ಉಚಿತ ಬಸ್ ಪಾಸ್ ವ್ಯವಸ್ಥೆ ಇದೆ. ಮಕ್ಕಳನ್ನು ಶಾಲೆಗೆ ಸೇರಿಸಲು ದೊಡ್ಡ ಕ್ಯೂಗಳಲ್ಲಿ ಗಂಟೆ ಗಟ್ಟಲೆ ನಿಲ್ಲುವ ಗೋಜಿಲ್ಲ. ಶುಲ್ಕ ಪಾವತಿ ವಿಷಯದಲ್ಲಿ ಪೋಷಕರು ಆತಂಕ ಪಡುವ ಅಗತ್ಯವಿಲ್ಲ. ನಿಮ್ಮದೇ ಅಧಿಕಾರದ ವಾತಾವರಣ ಕಾಣಬೇಕಿದ್ದರೆ ಸರ್ಕಾರಿ ಶಾಲೆಗೆ ಸೇರಿಸಿ ಎಂದು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮಕ್ಕಳೊಂದಿಗೆ ತಮಟೆ ಬಾರಿಸುತ್ತಾ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ, ಸರ್ಕಾರಿ ಶಾಲೆಗೆ ಕಳುಹಿಸಿ ಎಂಬ ಘೋಷಣೆ ಮೂಲಕ ಪೋಷಕರಿಗೆ ಮನವರಿಕೆ ಮಾಡಿಕೊಟ್ಟರು.

ಈ ವೇಳೆ ಸಹಶಿಕ್ಷಕ ಟಿ.ಜೆ.ಮಂಜುನಾಥ್, ಎಸ್‌ಡಿಎಂಸಿ ಅಧ್ಯಕ್ಷ ಅಶೋಕ್, ಚಲುವೇಗೌಡ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷರಾದ ನಾಗರಾಜ್, ರವಿ, ಮಾಜಿ ಸದಸ್ಯ ಶಿವ ಕುಮಾರ್, ನಾಗಮ್ಮ ಆಕಾಶ್, ಸಂಜಯ್ ಮಕ್ಕಳು ಜಾಥಾದಲ್ಲಿ ಭಾಗವಹಿಸಿದ್ದರು.

ರೈತ ಸಂಘದ ಪ್ರಮುಖರನ್ನು ಕಡೆಗಣಿಸಿ ಕುಂದು ಕೊರತೆ ಸಭೆ

ತಹಸೀಲ್ದಾರ್ ನಡೆ ಖಂಡಿಸಿ ಕಬ್ಬು ಬೆಳೆಗಾರರಿಂದ ಪ್ರತಿಭಟನೆ



ಕಬ್ಬು ಬೆಳೆಗಾರರ ಸಂಘದ ಸದಸ್ಯರು ತಿ.ನರಸೀಪುರ ಪುರಸಭೆ ಮುಂದೆ ಪ್ರತಿಭಟಿಸಿದರು.

ತಿ.ನರಸೀಪುರ, ಮೇ 19– ರೈತ ಸಂಘದ ಪ್ರಮುಖರನ್ನು ಕಡೆಗಣಿಸಿ ತಹಸೀಲ್ದಾರ್ ಅವರು ರೈತರ ಕುಂದು ಕೊರತೆ ಸಭೆ ನಡೆಸುತ್ತಿದ್ದಾರೆ ಎಂದು ಆರೋಪಿಸಿ ತಾಲೂಕು ಕಬ್ಬು ಬೆಳೆಗಾರರ ಸಂಘದ ಸದಸ್ಯರು ಪಟ್ಟಣದ ಪುರಸಭೆ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು.

ಪುರಸಭೆ ಸಭಾಂಗಣದಲ್ಲಿ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಸಭೆಗೆ ಮಧ್ಯ ಪ್ರವೇಶಿಸಿದ ರೈತರು ತಮ್ಮ ಸಂಘಟನೆಯನ್ನು ಸಭೆಗೆ ಆಹ್ವಾನಿಸದೇ ಕುಂದು ಕೊರತೆ ಸಭೆ ನಡೆಸುತ್ತಿರುವುದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ತಹಸೀಲ್ದಾರ್, ಕುಂದು ಕೊರತೆ ಸಭೆ ನಡೆಸುವಂತೆ ರೈತ ಸಂಘದವರು ಮನವಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಸಭೆ ಆಯೋಜಿಸಲಾಗಿದೆ ಎಂದು ಸಮಜಾಯಿಷಿ ನೀಡಲು ಮುಂದಾದರು. ಅಲ್ಲದೇ ನಾನಿಲ್ಲಿ ರೈತರ ಕುಂದು ಕೊರತೆ ಸಭೆ ಕರೆದಿಲ್ಲ. ಅಧಿಕಾರಿಗಳ ಸಭೆ ಕರೆದಿದ್ದೇನೆ ಎಂದು ಹೇಳುತ್ತಿದ್ದಂತೆ ಸಭೆಯಲ್ಲಿ ಹೆಚ್ಚಾಗಿ ರೈತರೇ ಇದ್ದದ್ದನ್ನು ಉಲ್ಲೇಖಿಸಿದ ರೈತರು ಹಾಗಾದರೆ ಇಲ್ಲಿ ಕುಳಿತಿರುವವರು ರೈತರಲ್ಲವೇ ಎಂದು ಕಿಡಿಕಾರಿದರು.

ನಂತರ ಮಾತು ಬದಲಿಸಿದ ತಹಸೀಲ್ದಾರ್ ನೀವು ಸಭೆ ಕರೆಯುವಂತೆ ಮನವಿ ಮಾಡಿದರೆ, ನಿಮಗಾಗಿ ಮತ್ತೊಂದು ಸಭೆ ಕರೆಯುತ್ತೇನೆ ಎಂದು ರೈತ ಮುಖಂಡರಿಗೆ ತಿಳಿಸಿದರು. ಇದರಿಂದ ಕೋಪಗೊಂಡ ರೈತರು ಒಂದೊಂದು ಸಂಘಟನೆಗೆ ಒಂದೊಂದು ಸಭೆ ಕರೆಯುತ್ತೀರಾ. ರೈತರ ಸಭೆ ಎಂದರೆ ತಾಲೂಕಿನ ಎಲ್ಲಾ ಸಂಘಟನೆಯ ಮುಖ್ಯಸ್ಥರು, ಸದಸ್ಯರನ್ನು ಆಹ್ವಾನಿಸಿ ಅವರ ಅಹವಾಲು ಸ್ವೀಕರಿಸಿ ಅಧಿಕಾರಿಗಳಿಂದ ಉತ್ತರ ಕೊಡಿಸುವ ಕೆಲಸ ಮಾಡಬೇಕು. ಆದರೆ ನೀವು ಆ ಕೆಲಸ ಮಾಡಿಲ್ಲ. ಕೇವಲ ಒಂದು ಸಂಘಟನೆಯನ್ನು ಮಾತ್ರವೇ ವಿಶ್ವಾಸಕ್ಕೆ ತೆಗೆದುಕೊಂಡು ಸಭೆ ಮಾಡಲು ಮುಂದಾಗಿದ್ದೀರಾ ಇದು ಸರಿಯಲ್ಲ ಎಂದು ಆರೋಪಿಸಿ ತಹಸೀಲ್ದಾರ್ ಹಾಗೂ ತಾಲೂಕು ಆಡಳಿತದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಪುರಸಭೆ ಎದುರು ಕುಳಿತು ತಹಸೀಲ್ದಾರ್ ನಡೆ ಖಂಡಿಸಿ ಪ್ರತಿಭಟನೆ ನಡೆಸಿದರು.

ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್ ಮಾತನಾಡಿ, ತಹಸೀಲ್ದಾರ್ ಅವರು ಯಾವುದೋ ಕೇವಲ ಒಂದು ಸಂಘಟನೆಗೆ ಸೀಮಿತವಾಗಿ ಸಭೆ ಮಾಡುತ್ತಿದ್ದಾರೆ. ತಹಸೀಲ್ದಾರ್ ಅವರ ಈ ನಡೆ ರೈತ ಸಮುದಾಯದ ಬಗ್ಗೆ ತಾಲೂಕು ಆಡಳಿತಕ್ಕೆ ಇರುವ ನಿರ್ಲಕ್ಷ್ಯತೆಗೆ ಹಿಡಿದ ಕೈಗನ್ನಡಿಯಾಗಿದೆ. ರೈತರ ಕುಂದು ಕೊರತೆ ಸಭೆ ಕರೆದಿಲ್ಲ ಎಂದು ತಹಸೀಲ್ದಾರ್ ಸಮಜಾಯಿಷಿ ನೀಡುತ್ತಾರೆ. ಕೇವಲ 6 ಇಲಾಖೆ ಸಭೆ ಕರೆದಿದ್ದೇನೆ ಎಂದು ರೈತರಿಗೆ ಸುಳ್ಳು ಮಾಹಿತಿ ನೀಡಲು ಮುಂದಾಗಿದ್ದಾರೆ. ಆದರೆ ಅಧಿಕಾರಿಗಳು ಸಹಿ ಮಾಡುವ ಪತ್ರದಲ್ಲಿ ರೈತರ ಕುಂದು ಕೊರತೆ ಸಭೆ ಎಂದು ನಮೂದಾಗಿದೆ ಎಂದು ತಹಸೀಲ್ದಾರ್ ನಡೆಗೆ ಕಿಡಿಕಾರಿದರು. ಮುಂದೆ ಇದೇ ರೀತಿ ತಾರತಮ್ಯ ಮುಂದುವರೆದಲ್ಲಿ ತಾಲೂಕು ಕಚೇರಿ ಎದುರು ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ವೇಳೆ ಪ್ರತಿಭಟನೆಯಲ್ಲಿ ಪ್ರಧಾನ ಕಾರ್ಯ ದರ್ಶಿ ಕೆ.ಕಿರಗಸೂರು ಪ್ರಸಾದ್ ನಾಯಕ, ಕುರುಬೂರು ಗೌರಿಶಂಕರ, ಟೌನ್ ಅಧ್ಯಕ್ಷ ಅಪ್ಪಣ್ಣ, ಹ್ಯಾಕನೂರು ರಾಜೇಶ್, ಯೋಗೇಶ್, ಕೆ.ಜಿ.ಗುರು ಸ್ವಾಮಿ, ಕಿರಗಸೂರು ಸುರೇಶ, ಸಂತೋಷ, ತರಕಾರಿ ಲಿಂಗರಾಜು ಭಾಗವಹಿಸಿದ್ದರು.

ಶ್ರೀಕಂಠೇಶ್ವರಸ್ವಾಮಿ ದರ್ಶನ ಪಡೆದ ಭೈರತಿ ಬಸವರಾಜ್



ಮಾಜಿ ಸಚಿವ ಭೈರತಿ ಬಸವರಾಜ್ ಅವರು ಶ್ರೀಕಂಠೇಶ್ವರಸ್ವಾಮಿ ದರ್ಶನ ಪಡೆದರು.

ನಂಜನಗೂಡು, ಮೇ 19– ಮಾಜಿ ಸಚಿವ ಹಾಗೂ ಶಾಸಕ ಭೈರತಿ ಬಸವರಾಜ್ ಅವರು ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ನಂತರ ಮಾತನಾಡಿದ ಅವರು, ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಸಂಬಂಧ ಮೂರನೇ ವ್ಯಕ್ತಿಗಳು ಹಣದ ಆಸೆಗೆ ಮಾಡಿದ ತಪ್ಪಿಗೆ ಕೇಂದ್ರ ಸರ್ಕಾರವನ್ನೇ ಹೊಣೆಗಾರರನ್ನಾಗಿ ಮಾಡುವುದು ಸರಿಯಲ್ಲ. ಕಳೆದ ಕೆಲವು ವರ್ಷಗಳಿಂದ ನೀಟ್ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿದ ಕೀರ್ತಿ ಕೇಂದ್ರ ಸರ್ಕಾರಕ್ಕೆ ಸಲ್ಲುತ್ತದೆ. ಈಗಾಗಲೇ ತಪ್ಪಿತಸ್ಥರನ್ನು ವಶಕ್ಕೆ ಪಡೆದು ತನಿಖೆ ನಡೆಸಲಾಗುತ್ತಿದ್ದು, ಅವರನ್ನು ಕಾನೂನು ಶಿಕ್ಷೆಗೆ ಒಳಪಡಿಸಲಾಗುವುದು ಎಂದರು. ಈ ವೇಳೆ ಮುಖಂಡರಾದ ಮಧುರಾಜ್, ಶ್ರೀಕಂಠ, ರಾಮು, ಮಹದೇವ ಸ್ವಾಮಿ, ವಿನಯ್ ಉಪಸ್ಥಿತರಿದ್ದರು.

ಮೇ 28, ಒಕ್ಕಲಿಗ ವಧು–ವರರ ಸಮಾವೇಶ



ಟ್ರಸ್ಟ್ ಜಿಲ್ಲಾಧ್ಯಕ್ಷ ರವಿಕುಮಾರ್ ಮಾತನಾಡಿದರು.

ತಿ.ನರಸೀಪುರ, ಮೇ 19– ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ವತಿಯಿಂದ ಬನ್ನೂರಲ್ಲಿ ಮೇ 28ರಂದು ಒಕ್ಕಲಿಗ ವಧು–ವರರ ಸಮಾವೇಶ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ವಧು–ವರರು ಆಗಮಿಸಿ ತಮ್ಮ ಬಾಳ ಸಂಗಾತಿ ಆಯ್ಕೆ ಮಾಡಿಕೊಳ್ಳುವ ಮೂಲಕ ಸಮಾವೇಶ ಯಶಸ್ವಿ ಗೊಳಿಸಬೇಕೆಂದು ಟ್ರಸ್ಟ್ ಜಿಲ್ಲಾಧ್ಯಕ್ಷ ರವಿಕುಮಾರ್ ಮನವಿ ಮಾಡಿದರು.

ಸಮಾವೇಶ ಹಿನ್ನೆಲೆಯಲ್ಲಿ ನಡೆದ ಸೇವಾ ಟ್ರಸ್ಟ್ ಸದಸ್ಯರ ಸಭೆಯಲ್ಲಿ ಮಾತನಾಡಿದ ಅವರು, ಅಂದು ಬನ್ನೂರಿನ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ಸಮಾವೇಶ ನಡೆಯಲಿದ್ದು, ಒಕ್ಕಲಿಗ ಸಮಾಜದ ವಧು ವರರು ತಮ್ಮ ಪೋಷಕರೊಂದಿಗೆ ಭಾಗವಹಿಸಬಹುದಾಗಿದೆ. ಈ ವೇಳೆ ತಮ್ಮ ಸ್ವ-ವಿವರ(ಬಯೋಡೆಟಾ), ಭಾವಚಿತ್ರಗಳನ್ನು ತರಬೇಕು. ಕಾರ್ಯಕ್ರಮದಲ್ಲಿ ವಧುವಿಗೆ ವರನ ಹಾಗೂ ವರನಿಗೆ ವಧುವಿನ ಮಾಹಿತಿ ನೀಡಲಾಗುವುದು. ಪರಸ್ಪರ ಹೊಂದಾಣಿಕೆಯಾದರೆ ಸಂಪರ್ಕಿಸಲು ಅವಕಾಶ ಮಾಡಿಕೊಡಲಾಗುತ್ತದೆ. ನೇಗಿಲಯೋಗಿ ಸೇವಾ ಟ್ರಸ್ಟ್ ಮಂಡ್ಯ, ಬೆಂಗಳೂರು, ರಾಮನಗರ, ಪಾಂಡವಪುರ, ಕನಕಪುರ, ಮಾಗಡಿ, ಚನ್ನಪಟ್ಟಣ, ತುರುವೇಕೆರೆ, ಕೆ.ಆರ್.ನಗರ ಶಾಖೆಯಲ್ಲಿ ನೋಂದಾಯಿಸಿಕೊಂಡಿರುವ 2 ಸಾವಿರ ವಧು–ವರರ ಮಾಹಿತಿ ನೋಡಲು ಅವಕಾಶ ನೀಡಲಾಗುತ್ತದೆ. ವಿಚ್ಛೇದಿತರೂ ಸಮಾವೇಶದಲ್ಲಿ ಸಂಗಾತಿ ಆಯ್ಕೆ ಮಾಡಿಕೊಳ್ಳಲು ಅವಕಾಶವಿದ್ದು, ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಗೌರವಾಧ್ಯಕ್ಷ ವೈ.ಎಸ್.ರಾಮಸ್ವಾಮಿ ಮಾತನಾಡಿದರು. ಈ ವೇಳೆ ಸಭೆಯಲ್ಲಿ ಬೀಡನಹಳ್ಳಿ ದೇವರಾಜು, ಚೆಲುವರಾಜು, ಕುಂತನಹಳ್ಳಿ ಜಯರಾಮೇಗೌಡ, ಕೊಡಗಹಳ್ಳಿ ಶಿವಕುಮಾರ್, ಬನ್ನೂರು ಶ್ರೀನಿವಾಸ ಮೂರ್ತಿ, ಬಾಲರಾಜು, ಬೇವಿನಹಳ್ಳಿ ಮಹದೇವು, ತುರುಗನೂರು ಮಾದೇಗೌಡ, ಯಾಚೇನಹಳ್ಳಿ ವೈ.ಟಿ. ಮಹೇಶ್, ಚನ್ನೇಗೌಡ, ಸತೀಶ್, ಲೋಕೇಶ್ ಹಾಜರಿದ್ದರು.

ಹುಲಿ ಹೆಜ್ಜೆ ಗುರುತು ಪತ್ತೆ: ಆತಂಕ



ಮಲ್ಲುಂಡಿ, ಮೇ 19– ನಂಜನಗೂಡು ತಾಲೂಕಿನ ಹೆಡಿಯಾಲ ಸುತ್ತಮುತ್ತ ಹುಲಿ ಹೆಜ್ಜೆ ಗುರುತು ಪತ್ತೆಯಾಗಿದ್ದು, ಈ ಭಾಗದ ಗ್ರಾಮಸ್ಥರು ಆತಂಕಗೊಂಡಿದ್ದಾರೆ.

ಗ್ರಾಮದ ಮುಖಂಡ ಅಶ್ರಫ್ ಅಲಿ ಮಾತನಾಡಿ, ಮಂಗಳವಾರ ಮುಂಜಾನೆ ಹೆಡಿಯಾಲ ಸಮೀಪದ ಚಿಲಕಹಳ್ಳಿ ಗ್ರಾಮದ ಶ್ರೀನಂಜಪ್ಪ ದೇವಸ್ಥಾನ ಬಳಿ ಹುಲಿ ಹೆಜ್ಜೆ ಗುರುತು ಕಂಡು ಬಂದಿದೆ. ಈಗಾಗಲೇ ಮಳೆಯಾಗಿದ್ದು, ರೈತರು ತಮ್ಮ ಜಮೀನುಗಳಿಗೆ ತೆರಳಲು ಭಯಭೀತರಾಗಿದ್ದಾರೆ. ಹೀಗಾಗಿ ಯಾವುದೇ ಅನಾಹುತ ಆಗುವುದಕ್ಕೂ ಮುಂಚೆ ಅರಣ್ಯ ಇಲಾಖೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸದೇ ಹುಲಿ ಸೆರೆಗೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಬೈಕ್ ಡಿಕ್ಕಿ: ಸೈಕಲ್ ಸವಾರ ಸಾವು



ಹುಣಸೂರು, ಮೇ 19– ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸೈಕಲ್ ಸವಾರ ಸಾವನ್ನಪ್ಪಿರುವ ಘಟನೆ ನಗರದ ಹೊರವಲಯದ ಮೂರುರಮ್ಮ ದೇವಾಲಯ ಬಳಿ ಮಂಗಳವಾರ ಮಧ್ಯಾಹ್ನ ನಡೆದಿದೆ.

ನಗರದ ಕಲ್ಕುಣಿಕೆ ಶ್ರೀರಾಘವೇಂದ್ರ ಮಠದ ಹಿಂಭಾಗದ ಜನತಾ ಹೌಸಿಂಗ್ ಬೋರ್ಡ್ ಕಾಲೋನಿ ನಿವಾಸಿ ಮನೋಹರ್(52) ಸಾವನ್ನಪ್ಪಿದವರು. ಇಂದು ಮಧ್ಯಾಹ್ನ 2 ಗಂಟೆ ವೇಳೆಯಲ್ಲಿ ಮನೋಹರ್ ತನ್ನ ಸೈಕಲ್‌ನಲ್ಲಿ ಮೂರುರಮ್ಮ ದೇವಾಲಯದ ಕಡೆಗೆ ತೆರಳುತ್ತಿದ್ದರು. ಈ ವೇಳೆ ಮೈಸೂರು ಕಡೆಯಿಂದ ಇನ್ನೂ ನೋಂದಣಿಯಾಗದ ಹೊಸ ಹೀರೋ ಪಲ್ಸರ್ ಪ್ರೋ ಬೈಕ್‌ನಲ್ಲಿ ಆಗಮಿಸುತ್ತಿದ್ದ ಮೈಸೂರಿನ ಸರಸ್ವತಿಪುರಂ ನಿವಾಸಿ ಪ್ರಜ್ವಲ್ ಹಿಂಬದಿಯಿಂದ ಸೈಕಲ್‌ಗೆ ಡಿಕ್ಕಿ ಹೊಡೆದಿದ್ದಾನೆ.

ಈ ವೇಳೆ ಡಿಕ್ಕಿ ರಭಸಕ್ಕೆ ಮನೋ ಹರ್ ಅವರ ತಲೆ, ಮೂಗು ಮತ್ತು ಬಾಯಿ ಸೇರಿದಂತೆ ವಿವಿಧೆಡೆ ತೀವ್ರ ಗಾಯಗಳಾಗಿದ್ದು, ತಕ್ಷಣ ಅವರನ್ನು ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ವೈದ್ಯರ ಸಲಹೆ ಮೇರೆಗೆ ಮೈಸೂರಿನ ಜಿಲ್ಲಾಸ್ಪತ್ರೆಗೆ ರವಾನಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಮನೋಹರ್ ಸಾವನ್ನಪ್ಪಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಣಸೂರು ನಗರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಸೈಕಲ್ ಹಾಗೂ ಬೈಕ್ ಅನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸರ್ಕಾರಿ ಐಟಿಐ ಕಾಲೇಜಿನಲ್ಲಿ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 19– ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ಎನ್.ಆರ್. ಮೊಹಲ್ಲಾ ಇಲ್ಲಿ 2026ನೇ ಸಾಲಿನ ಆಗಸ್ಟ್ ಮಾಹೆಯ ಪ್ರವೇಶಾತಿ ಪ್ರಕ್ರಿಯೆ ಆರಂಭವಾಗಿದೆ. ಎನ್‌ಸಿವಿಟಿ ಸಂಯೋಜಿತ ಸಿಟಿಎಸ್ ಮತ್ತು ಉದ್ಯೋಗ ಯೋಜನೆಯಡಿ ಲಭ್ಯವಿರುವ ವಿವಿಧ ಇಂಜಿನಿಯರಿಂಗ್ ಮತ್ತು ನಾನ್–ಇಂಜಿನಿಯರಿಂಗ್ ವೃತ್ತಿಪರ ಕೋರ್ಸ್‌ಗಳಿಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಮೆರಿಟ್ ಮತ್ತು ಮೀಸಲಾತಿ ಆಧಾರದ ಮೇಲೆ ಪ್ರವೇಶ ನೀಡಲಾಗುತ್ತದೆ.

ಅರ್ಜಿ ಸಲ್ಲಿಸಲು 1 ಆಗಸ್ಟ್ 2026ಕ್ಕೆ ಅಭ್ಯರ್ಥಿಗಳಿಗೆ ಕನಿಷ್ಠ 14 ವರ್ಷ ತುಂಬಿರಬೇಕು. ವೃತ್ತಿಯ ಅನುಸಾರ ಎಸ್‌ಎಸ್‌ಎಲ್‌ಸಿ ತೇರ್ಗಡೆ, ಅನುತ್ತೀರ್ಣ ಅಥವಾ 8ನೇ ತರಗತಿ ತೇರ್ಗಡೆಯಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ರಾಜ್ಯದ ಯಾವುದೇ ಭಾಗದ ಆಸಕ್ತ ಅಭ್ಯರ್ಥಿಗಳು ಮೇ 15 ರೊಳಗೆ ಇಲಾಖೆಯ ಅಧಿಕೃತ ವೆಬ್‌ಸೈಟ್ www.cite.karnataka.gov.in ಮೂಲಕ ಅಥವಾ ಸಂಸ್ಥೆಯಲ್ಲಿರುವ ಸಹಾಯವಾಣಿ ಕೇಂದ್ರದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಮಹಿಳಾ ಅಭ್ಯರ್ಥಿಗಳಿಗೆ ಪ್ರವೇಶ ಶುಲ್ಕ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 99456 16088, 9900378488, 8050481033, 9448958363ನ್ನು ಸಂಪರ್ಕಿಸಬಹುದೆಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.6ರಂದು ಹನುಮ ಜಯಂತಿ ಹಿನ್ನೆಲೆ

ನಂ.ಗೂಡಲ್ಲಿ ರಾಜ್ಯ ಮಟ್ಟದ ಪಂಜ ಕುಸ್ತಿ ಪಂದ್ಯಾವಳಿ

- ವಿವಿಧ ವಿಭಾಗದ ವಿಜೇತರಿಗೆ ಪ್ರಶಸ್ತಿ ವಿತರಣೆ
- ನೂರಾರು ಕ್ರೀಡಾಭಿಮಾನಿಗಳು ಭಾಗಿ



ರಾಜ್ಯ ಮಟ್ಟದ ಪಂಜ ಕುಸ್ತಿ ಪಂದ್ಯಾವಳಿಯ ಚಾಂಪಿಯನ್ ಶಿಪ್ ವಿಜೇತರು.

ನಂಜನಗೂಡು, ಮೇ 19– ಮುಂಬರುವ ಜೂ.6ರಂದು ನಡೆಯುವ ಹನುಮ ಜಯಂತಿ ಪ್ರಯುಕ್ತ ನಂಜನಗೂಡು ಸ್ಪೋರ್ಟ್ಸ್ ಅಕಾಡೆಮಿ ಹಾಗೂ ಕರ್ನಾಟಕ ರಾಜ್ಯ ಪಂಜ ಕುಸ್ತಿ ಸಂಘದ ಸಂಯುಕ್ತಾಶ್ರಯದಲ್ಲಿ ನಗರದ ಅರಮನೆ ಮೈದಾನದಲ್ಲಿ ಮೊದಲ ಬಾರಿಗೆ ರಾಜ್ಯ ಮಟ್ಟದ ಪಂಜ ಕುಸ್ತಿ ಪಂದ್ಯಾವಳಿ ಭರ್ಜರಿಯಾಗಿ ನಡೆಯಿತು.

ಪುರುಷರ ವಿಭಾಗದಲ್ಲಿ 50ರಿಂದ 110 ಕೆಜಿವರೆಗೆ ಒಟ್ಟು 10 ಪ್ರತ್ಯೇಕ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆದವು. ಓವರ್ ಆಲ್ ಚಾಂಪಿಯನ್ 'ವಜ್ರಬಾಹು 2026' ಪ್ರಶಸ್ತಿಗಾಗಿ ಮೈಸೂರಿನ ರಾಜು ಹಾಗೂ ದಾವಣಗೆರೆಯ ಸಲಾವುದ್ದೀನ್ ನಡುವೆ ನಡೆದ ರೋಚಕ ಫೈನಲ್ ಪಂದ್ಯದಲ್ಲಿ ಮೈಸೂರಿನ ರಾಜು ಜಯಶಾಲಿಯಾಗುವ ಮೂಲಕ ಆಕರ್ಷಕ ಟ್ರೋಫಿ ಹಾಗೂ 5 ಸಾವಿರ ನಗದು ಬಹುಮಾನ ಪಡೆದರು. ದ್ವಿತೀಯ ಸ್ಥಾನ ಪಡೆದ ಸಲಾವುದ್ದೀನ್ ಟ್ರೋಫಿ ಹಾಗೂ 2,500 ನಗದು ಬಹುಮಾನ ಪಡೆದರು.

ಇನ್ನು ಮಹಿಳೆಯರ ವಿಭಾಗದಲ್ಲಿ 50 ರಿಂದ 90 ಕೆಜಿವರೆಗಿನ 8 ಪ್ರತ್ಯೇಕ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆದವು. ಓವರ್ ಆಲ್ ಚಾಂಪಿಯನ್ 'ಶಕ್ತಿ ದೀಪ್ತಿ 2026' ಪ್ರಶಸ್ತಿಗಾಗಿ ಹಾಸನದ ಶಾರದಾ ಹಾಗೂ ದಾವಣಗೆರೆಯ ಚೆಲುವಿ ನಡುವೆ ತೀವ್ರ ಪೈಪೋಟಿ ನಡೆದು ಅಂತಿಮವಾಗಿ ಶಾರದಾ ವಿಜೇತರಾಗಿ ಆಕರ್ಷಕ ಟ್ರೋಫಿ ಹಾಗೂ 5 ಸಾವಿರ ನಗದು ಬಹುಮಾನ, ರನ್ನರ್‌ಅಪ್ ಚೆಲುವಿ ಅವರಿಗೆ ಟ್ರೋಫಿ ಹಾಗೂ 500 ನಗದು ಬಹುಮಾನ ವಿತರಿಸಲಾಯಿತು.

ಸ್ಥಳೀಯ ಪ್ರತಿಭೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ನಂಜನಗೂಡು ತಾಲೂಕು ಯುವಕರಿಗಾಗಿ 'ದಕ್ಷಿಣ ಕಾಶಿ ಕಪ್' ಆಯೋಜಿಸಲಾಗಿತ್ತು. 50 ರಿಂದ 110 ಕೆಜಿ ತೂಕದ 10 ವಿಭಾಗಗಳಲ್ಲಿ ನಡೆದ ಪ್ರತ್ಯೇಕ ಸ್ಪರ್ಧೆಗಳಲ್ಲಿ ಓವರ್ ಆಲ್ ಚಾಂಪಿಯನ್ ಪಟ್ಟಕ್ಕಾಗಿ ಸೆಣಸಿದರು. ಫೈನಲ್‌ನಲ್ಲಿ ನಂಜನಗೂಡಿನ ಯಶವಂತ್ ಹಾಗೂ ಶ್ರೇಯಾಂಕ್ ಪಟೇಲ್ ನಡುವೆ ನಡೆದ ಪಂದ್ಯದಲ್ಲಿ ಶ್ರೇಯಾಂಕ್ ಪಟೇಲ್ 'ದಕ್ಷಿಣ ಕಾಶಿ ಕಪ್' ಗೆದ್ದು ಟ್ರೋಫಿ ಹಾಗೂ 3 ಸಾವಿರ ನಗದು ಬಹುಮಾನ ಪಡೆದರು. ದ್ವಿತೀಯ ಸ್ಥಾನ ಪಡೆದ ಯಶವಂತ್ ಟ್ರೋಫಿ ಹಾಗೂ 1,500 ನಗದು ಬಹುಮಾನ ಪಡೆದರು.

ದಾವಣಗೆರೆ, ಹರಿಹರ, ಹಾಸನ, ಕೊಡಗು, ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ 100ಕ್ಕೂ ಹೆಚ್ಚು ಪಂಜ ಕುಸ್ತಿ ಪಟುಗಳು ಪ್ರಶಸ್ತಿಗಾಗಿ ಸೆಣಸಾಟ ನಡೆಸುವ ಮೂಲಕ ಗಮನ ಸೆಳೆದರು. ಅಲ್ಲದೇ ವಿವಿಧ ಆಯಾ ತೂಕದ ವಿಭಾಗಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಎಲ್ಲಾ ಸ್ಪರ್ಧಿಗಳಿಗೆ ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ಇದಕ್ಕೂ ಮೊದಲು ಪಂಜ ಕುಸ್ತಿ ಪಂದ್ಯಾವಳಿಯನ್ನು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ರಂಗಸ್ವಾಮಿ, ಪೈಲ್ವಾನ್ ಸಿದ್ದರಾಜು ಹಾಗೂ ಸುಬ್ರಹ್ಮಣ್ಯ ಉದ್ಘಾಟಿಸಿದರು. ನಂಜನಗೂಡಿನಲ್ಲಿ ನಡೆದ ರಾಜ್ಯ ಮಟ್ಟದ ಪಂಜ ಕುಸ್ತಿ ಪಂದ್ಯಾವಳಿಗೆ ನೂರಾರು ಕ್ರೀಡಾಭಿಮಾನಿಗಳು ಆಗಮಿಸಿ, ಶಿಳ್ಳೆ ಮತ್ತು ಚಪ್ಪಾಳೆಗಳ ಮೂಲಕ ತಮ್ಮ ಮೆಚ್ಚಿನ ಕ್ರೀಡಾಪಟುಗಳಿಗೆ ಬೆಂಬಲ ಸೂಚಿಸಿದರು.

ಗೋವಿಂದರಾವ್ ನಿಧನ



ಹುಣಸೂರು, ಮೇ 19– ನಗರದ ಉಪವಿಭಾಗಾಧಿಕಾರಿ ಕಚೇರಿ ನಿವೃತ್ತ ಅಧಿಕಾರಿ ಇಂದಿರಾ ಅವರ ತಂದೆ ಗೋವಿಂದರಾವ್(99) ಭಾನುವಾರ ರಾತ್ರಿ ನಿಧನರಾದರು. ಮೃತರು ಐವರು ಪುತ್ರಿಯರು, ಮೂವರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ತಾಲೂಕು ಕಚೇರಿ ಪಕ್ಕದಲ್ಲಿರುವ ಸ್ಮಶಾನದಲ್ಲಿ ಸೋಮವಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹೇಶ್ ಚಂದ್ರಕುಮಾರ್



ಹುಣಸೂರು, ಮೇ 19– ನಗರದ ಬನ್ನಿ ಬೀದಿ ನಿವಾಸಿ ಮಹೇಶ್ ಚಂದ್ರಕುಮಾರ್(54) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಸಹೋದರ, ಸಹೋದರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ಪಂಪ್‌ಹೌಸ್ ಬಳಿಯ ರುದ್ರಭೂಮಿಯಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಕಾಂಗ್ರೆಸ್ ಸರ್ಕಾರದ ಮೂರು ವರ್ಷದ ಸಾಧನೆ 'ಶೂನ್ಯ'

●ಮಾಜಿ ಶಾಸಕರು ಆದ ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ ವಾಗ್ದಾಳಿ ●ಅಧಿಕಾರಕ್ಕೆ ಬಂದಾಗಿನಿಂದ ಕುರ್ಚಿ ಕಚ್ಚಾಟ; ಹಳಿ ತಪ್ಪಿದ ಆಡಳಿತ ●ಮೈಸೂರಲ್ಲಿ ಒಂದು ಕೈಗಾರಿಕೆ; ಹೇಳಿಕೊಳ್ಳುವಂತಹ ರಸ್ತೆ ನಿರ್ಮಿಸಿಲ್ಲ


ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ವಕ್ತಾರ ಮೋಹನ್ ಮಾತನಾಡಿದರು.

ಮೈಸೂರು, ಮೇ 19(ಜಿಎ)–ಭ್ರಷ್ಟಾಚಾರ, ಸಾಲದ ಸುಳಿ, ಆಡಳಿತ ವೈಫಲ್ಯವೇ ಸರ್ಕಾರದ ನಿಜವಾದ ಸಾಧನೆ. ಒಟ್ಟಾರೆ ಕಾಂಗ್ರೆಸ್ ಸರ್ಕಾರದ ಮೂರು ವರ್ಷದ ಸಾಧನೆ ಶೂನ್ಯ ಎಂದು ಬಿಜೆಪಿ ನಗರಾಧ್ಯಕ್ಷರು ಆದ ಮಾಜಿ ಶಾಸಕ ಎಲ್.ನಾಗೇಂದ್ರ ವಾಗ್ದಾಳಿ ನಡೆಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ಸಾಧನಾ ಸಮಾವೇಶ ಮಾಡುತ್ತಿದೆ. ಯಾವ ಸಾಧನೆ ಮಾಡಿದೆ ಎಂದು ಸಮಾವೇಶ ಮಾಡುತ್ತಿದೆ. ಅನೀತಿ, ಅಧರ್ಮ, ಅರಾಜಕತೆ, ಭ್ರಷ್ಟಾಚಾರವೇ ಸಾಧನೆಯೇ? ಎಂದು ಪ್ರಶ್ನಿಸಿದರು.

ಕುರ್ಚಿ ಕಚ್ಚಾಟ:ಸರ್ಕಾರ ಅಸ್ತಿತ್ವಕ್ಕೆ ಬಂದ ಮೊದಲ ವರ್ಷದಿಂದಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ಕುರ್ಚಿ ಕಚ್ಚಾಟ ಶುರುವಾಯಿತು. ಸಚಿವರು ಮತ್ತು ಶಾಸಕರು, ಸಚಿವ ಸ್ಥಾನ ಪಡೆಯಲು, ಸ್ಥಾನ ಉಳಿಸಿಕೊಳ್ಳಲು ನಿರಂತರವಾಗಿ ದೆಹಲಿ ಯಾತ್ರೆ ಮಾಡುತ್ತಿದ್ದಾರೆ. ಇದರಿಂದಾಗಿ ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣ ಹಳಿ ತಪ್ಪಿದ್ದು, ಯಾವುದೇ ಹೊಸ ಅಭಿವೃದ್ಧಿ ಯೋಜನೆಗಳು ಜಾರಿಯಾಗಿಲ್ಲ ಎಂದು ದೂರಿದರು.

ಗ್ಯಾರಂಟಿಯೇ ಸಾಧನೆ: ಪಂಚ ಗ್ಯಾರಂಟಿ ಯೋಜನೆಗಳನ್ನು ಕೊಟ್ಟ ಮಾತಿನಂತೆ ಜಾರಿ ಮಾಡಿದ್ದೇವೆ ಎಂದು ಬೀಗುವ ಸರ್ಕಾರ ರಾಜ್ಯವನ್ನು ಸಾಲದ ಕೂಪಕ್ಕೆ ತಳ್ಳಿದೆ. 2023–24ರಲ್ಲಿ ಗ್ಯಾರಂಟಿಗಳಿಗೆ 36,000 ಕೋಟಿ ನೀಡಿದ್ದರೆ, 82,000 ಕೋಟಿ ಸಾಲ ಮಾಡಲಾಗಿದೆ. 2024–25 ರಲ್ಲಿ 56,000 ಕೋಟಿ ನೀಡಿ, 1.05 ಲಕ್ಷ ಕೋಟಿ ಸಾಲ ಮಾಡಲಾಗಿದೆ. 2025–26 ರಲ್ಲಿ 52,000 ಕೋಟಿ ವ್ಯಯಿಸಿ, 1.16 ಲಕ್ಷ ಕೋಟಿ ಸಾಲ ಮಾಡಲಾಗಿದೆ. ಪ್ರಸ್ತುತ ವರ್ಷದಲ್ಲಿ 1.32 ಲಕ್ಷ ಕೋಟಿ ಸಾಲ ಮಾಡಲು ಅಂದಾಜಿಸಲಾಗಿದೆ. ಮೂರು ವರ್ಷದಲ್ಲಿಯೂ 5 ಲಕ್ಷ ಕೋಟಿ ಸಾಲ ಮಾಡಲಾಗಿದೆ. ಕೇವಲ ಬಡ್ಡಿ ಪಾವತಿಗೇ ಸಾರ್ವಜನಿಕರ ತೆರಿಗೆ ಹಣದ ಪೈಕಿ 45,600 ಕೋಟಿ ವ್ಯಯಿಸಲಾಗುತ್ತಿದೆ. ಸಾಲ ಮಾಡಿ ಗ್ಯಾರಂಟಿ ಕೊಡುವುದೇ ಇವರ ಸಾಧನೆಯೇ ಎಂದು ವಾಗ್ದಾಳಿ ನಡೆಸಿದರು.

ಸಾಲು ಸಾಲು ಹಗರಣ:ಸರ್ಕಾರದ ಸಚಿವರು ಸಾಲು ಸಾಲು ಹಗರಣಗಳಲ್ಲಿ ಮುಳುಗಿದ್ದಾರೆ. ಬಿ.ನಾಗೇಂದ್ರ ವಾಲ್ಮೀಕಿ ನಿಗಮದಲ್ಲಿ 127 ಕೋಟಿ ದೋಚಿದ್ದು, ಇನ್ನೂ 125 ಕೋಟಿ ರಿಕವರಿ ಆಗಿಲ್ಲ. ಡಿ.ಕೆ.ಶಿವಕುಮಾರ್ ಅಕ್ರಮ ಆಸ್ತಿ ಮತ್ತು ಪ್ರಭಾವ ದುರುಪಯೋಗದ ಸಂಬಂಧ ಇಡಿಯಲ್ಲಿ ಪ್ರಕರಣ ದಾಖಲಾಗಿದೆ. ಜಮೀರ್ ಅಹಮದ್ ವಿರುದ್ಧ ಕಲ್ಯಾಣ ಕರ್ನಾಟಕ ನಿಧಿ ಹಂಚಿಕೆಯಲ್ಲಿ ಸ್ವಪಕ್ಷದ ಶಾಸಕರಿಂದಲೇ ಭ್ರಷ್ಟಾಚಾರದ ಆರೋಪ ಇದೆ. ಬೈರತಿ ಸುರೇಶ್, ರಹೀಮ್ ಖಾನ್ ವಿರುದ್ಧ ಅಮೃತ ಯೋಜನೆ ಹಾಗೂ ನಗರಾಭಿವೃದ್ಧಿ ನಿಧಿಯಲ್ಲಿ ಹಣ ದುರುಪಯೋಗದ ಆರೋಪಗಳು ತನಿಖಾ ಹಂತದಲ್ಲಿವೆ. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೇ ಮೈಸೂರಿನ ಬಹುಕೋಟಿ ಮುಡಾ ನಿವೇಶನ ಹಗರಣದ ಕಲೆ ಅಂಟಿಕೊಂಡಿದೆ. ಇದೇ ಇವರ ಸಾಧನೆಯಾಗಿದೆ ಎಂದರು.

ಬಡವರ ಶಿಕ್ಷಣಕ್ಕೆ ಮಾರಕ : ಬಸ್ ದರ, ವಿದ್ಯುತ್ ದರ, ಶೇ.20ರಷ್ಟು ಸ್ಟಾಂಪ್ ಡ್ಯೂಟಿ ಹಾಗೂ ಹಾಲಿನ ದರವನ್ನು ಏಕಾಏಕಿ ಹೆಚ್ಚಳ ಮಾಡಿದೆ. ಹಾಲಿನ ಮೇಲಿನ 5 ರೂ ಸಬ್ಸಿಡಿ ನಿಲ್ಲಿಸಲಾಗಿದೆ. ಇದಲ್ಲದೆ ರಾಜ್ಯದಲ್ಲಿ ಸುಮಾರು 350 ಸರ್ಕಾರಿ ಶಾಲೆಗಳನ್ನು ಮುಚ್ಚಲು ಆದೇಶಿಸಿರುವುದು ಬಡವರ ಶಿಕ್ಷಣಕ್ಕೆ ಮಾರಕವಾಗಿದೆ ಎಂದರು.

ಮೈಸೂರಲ್ಲಿ ಅಭಿವೃದ್ಧಿ ಶೂನ್ಯ : ಮುಖ್ಯಮಂತ್ರಿಗಳ ಸ್ವಂತ ಜಿಲ್ಲೆಯಾದ ಮೈಸೂರಿಗೆ ಸರ್ಕಾರದ ಕೊಡುಗೆ ಶೂನ್ಯ. ಕನಿಷ್ಠ ಸಾವಿರ ಜನರಿಗೆ ಉದ್ಯೋಗ ನೀಡುವ ಒಂದು ದೊಡ್ಡ ಕೈಗಾರಿಕೆಯನ್ನೂ ತರಲು ಇವರಿಂದ ಸಾಧ್ಯವಾಗಿಲ್ಲ. ರಾಜ್ಯ ಸರ್ಕಾರದಿಂದ ಒಂದು ಗುರುತರವಾದ ರಸ್ತೆ ನಿರ್ಮಾಣವಾಗಿಲ್ಲ. ಇತಿಹಾಸದಲ್ಲೇ ಮೊದಲ ಬಾರಿಗೆ ದಸರಾ ಮಹೋತ್ಸವದ ವೇಳೆ ರಸ್ತೆಗಳಿಗೆ ಡಾಂಬರೀಕರಣ ಮಾಡದೆ ಕೇವಲ ಪ್ಯಾಚ್ ವರ್ಕ್ ಮಾಡಿ ಮೈಸೂರು ಜನತೆಗೆ ಅಪಮಾನ ಮಾಡಲಾಗಿದೆ ಎಂದು ದೂರಿದರು.

ಬ್ರಾಂಡ್ ಬೆಂಗಳೂರು ಎಂದು ಕೇವಲ ಪೇಪರ್‌ನಲ್ಲಿ ಸಹಿ ಹಾಕುತ್ತಿರುವ ಸರ್ಕಾರ, ಕಳೆದ 26 ತಿಂಗಳಿಂದ ಬಿಬಿಎಂಪಿ ಗುತ್ತಿಗೆದಾರರ 22,000 ಕೋಟಿ ಬಾಕಿ ಬಿಲ್ ಪಾವತಿಸಿಲ್ಲ. ಸ್ಮಾರ್ಟ್ ಸಿಟಿ ಯೋಜನೆಯ 300 ಕೋಟಿ ಬಿಲ್ ತಡೆಹಿಡಿಯಲಾಗಿದ್ದು, ಗುತ್ತಿಗೆದಾರರು ಹಗಲು ರಾತ್ರಿ ಧರಣಿ ನಡೆಸುತ್ತಿದ್ದಾರೆ. ಬಿಲ್ ಬಿಡುಗಡೆಗೆ ಕಮಿಷನ್ ಕೇಳಲಾಗುತ್ತಿದೆ. ಬೆಂಗಳೂರಿನ ಜನತೆ ಟ್ರಾಫಿಕ್ ಹಾಗೂ ರಸ್ತೆ ಗುಂಡಿಗಳಿಂದ ಕಂಗಾಲಾಗಿದ್ದು, ಮಳೆಗೆ ಜನ ಕೊಚ್ಚಿ ಹೋಗುತ್ತಿದ್ದರೂ ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆ ಎಂದರು.

ಕೊಲೆ–ಸುಲಿಗೆ ಹೆಚ್ಚಳ : ರಾಜ್ಯದಲ್ಲಿ ಕೊಲೆ, ಸುಲಿಗೆ, ಅತ್ಯಾಚಾರಗಳು ಮಿತಿಮೀರಿದ್ದು, ಗೃಹ ಸಚಿವರು ಕೇವಲ ಮಾಹಿತಿ ಪಡೆಯುವುದರಲ್ಲೇ ಕಾಲ ಕಳೆಯುತ್ತಿದ್ದಾರೆ. ಮೈಸೂರು ನಗರದಲ್ಲಿ 1,000 ಕೋಟಿ ಮೌಲ್ಯದ ಡ್ರಗ್ಸ್ ಜಾಲವಿದ್ದರೂ ಪೊಲೀಸರು ಕ್ರಮ ಕೈಗೊಂಡಿಲ್ಲ. ರಾಜ್ಯದಲ್ಲಿ ಶಾಸಕರ ನಿಧಿಯ 2 ಕೋಟಿಯನ್ನು ತಡೆಹಿಡಿದಿರುವ ಸರ್ಕಾರ, ಕೇರಳದ ವಯನಾಡ್ ದುರಂತಕ್ಕೆ ಕರ್ನಾಟಕದ ಬೊಕ್ಕಸದ ಹಣವನ್ನು ಬಿಡುಗಡೆ ಮಾಡಿದೆ. ಇದು ಹೈಕಮಾಂಡ್ ಹಾಗೂ ರಾಷ್ಟ್ರೀಯ ನಾಯಕರನ್ನು ಓಲೈಸಲು ಮಾಡುತ್ತಿರುವ ತಂತ್ರ ಇತ್ತೀಚಿನ ಪಂಚರಾಜ್ಯಗಳ ಭ್ರಷ್ಟಾಚಾರ ಮತ್ತು ದುರಾಡಳಿತವನ್ನು ಕಂಡಿರುವ ರಾಜ್ಯದ ಜನತೆ ಮುಂಬರುವ ಚುನಾವಣೆಯಲ್ಲಿ ಈ ಸರ್ಕಾರವನ್ನು ಮನೆಗೆ ಕಳುಹಿಸುವುದು ಖಚಿತ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮುಖಂಡರಾದ ಸೋಮಸುಂದರ್, ವಸಂತಕುಮಾರ್, ಬಿ.ಎಂ.ರಘು, ರುದ್ರಮೂರ್ತಿ, ಕಾರ್ತಿಕ್ ಮರಿಯಪ್ಪ, ಶಿವರಾಜ್, ಮಹೇಶ್‌ರಾಜೇ ಅರಸ್, ಸಂತೋಷ್ ಉಪಸ್ಥಿತರಿದ್ದರು.

> ಮಾದರಿ ಮೈಸೂರು ಇಂದು ಮುದುರಿದ ಮೈಸೂರಾಗಿದೆ. ಗೋಲ್ಡ್, ಡ್ರಗ್ಸ್ ದಂಧೆ ಮಿತಿ ಮೀರಿದೆ. ಸಿಎಂ ಮನೆಯ ಕೂಗಳತೇ ದೂರದಲ್ಲೇ ದಂಧೆಗಳು ನಡೆಯುತ್ತಿದ್ದರೂ ಸಿದ್ದರಾಮಯ್ಯ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ವರುಣಾ ಕ್ಷೇತ್ರದಲ್ಲಿ ಅಪ್ಪ–ಮಗನ ದುರಂಹಕಾರ ಅಡಗಿಸಲು ರೈತರು ನಿಮ್ಹಾನ್ಸ್ ಆಸ್ಪತ್ರೆ ವಿರೋಧಿಸುತ್ತಿದ್ದಾರೆ. ವರುಣಾ ಜನತೇ ಸಿಎಂ ನಡವಳಿಕೆ ಇಷ್ಟ ಆಗಿಲ್ಲ. ವರುಣಾ ಎಂದರೆ ಯತೀಂದ್ರ ಯತೀಂದ್ರ ಎಂದರೆ ವರುಣಾ ಎಂಬಂತಾಗಿದೆ.
>
> -ಮೋಹನ್, ವಕ್ತಾರ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಗವತಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಪೆಟ್ರಿಯೋಟ್ (ಮ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಕೆಡಿ (ಕ)	4 ಪ್ರದರ್ಶನಗಳು
ಲಿಡೋ	
ಶಿಖಂಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಶೇರ್ (ಕ)	4 ಪ್ರದರ್ಶನಗಳು

ಮಾರಣಾಂತಿಕ ಎಬೋಲಾಗೆ 131 ಸಾವು, ವಿಶ್ವಸಂಸ್ಥೆಯಿಂದ ತುರ್ತು ಪರಿಸ್ಥಿತಿ ಘೋಷಣೆ!

ನವದೆಹಲಿ, ಮೇ 19–ಪೂರ್ವ ಕಾಂಗೋದಲ್ಲಿ ಎಬೋಲಾ ಏಕಾಏಕಿ 131 ಜೀವಗಳನ್ನು ಬಲಿ ತೆಗೆದುಕೊಂಡಿದ್ದು, 500ಕ್ಕೂ ಹೆಚ್ಚು ಶಂಕಿತ ಪ್ರಕರಣಗಳು ವರದಿಯಾಗಿವೆ. ವಿಶ್ವ ಆರೋಗ್ಯ ಸಂಸ್ಥೆ ಅಂತಾರಾಷ್ಟ್ರೀಯ ಕಾಳಜಿಯ ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿ ಎಂದು ಘೋಷಿಸಿದೆ.

ಕಾಂಗೋದ ಸಾರ್ವಜನಿಕ ಆರೋಗ್ಯ ಸಚಿವ ಸ್ಯಾಮ್ಯುಯೆಲ್ ರೋಜರ್ ಕಂಬಾ ಇಂದು ಪೀಡಿತ ಪ್ರದೇಶಗಳಲ್ಲಿ 513 ಶಂಕಿತ ಪ್ರಕರಣಗಳು ವರದಿಯಾಗಿದ್ದು 131 ಮಂದಿ ಸಾವನ್ನಪ್ಪಿದ್ದಾರೆ ಎಂದು ಹೇಳಿದರು. ಈ ಸಾವುಗಳು ನಿಜವಾಗಿಯೂ ಯಾವ ರೋಗದಿಂದಾಗಿದೆ ಎಂಬುದನ್ನು ಖಚಿತಪಡಿಸಲು ತನಿಖೆಗಳು ನಡೆಯುತ್ತಿವೆ.

ಆರೋಗ್ಯ ಅಧಿಕಾರಿಗಳ ಪ್ರಕಾರ, ಶುಕ್ರವಾರ ಮೊದಲು ದೃಢಪಡಿಸಿದ ಈ ಏಕಾಏಕಿ ಬುಂಡಿಬುಗ್ಯೊ ವೈರಸ್‌ನಿಂದ ಉಂಟಾಗುತ್ತದೆ. ಇದು ಎಬೋಲಾ ಕಾಯಿಲೆಯ ಅಪರೂಪದ ತಳಿಯಾಗಿದ್ದು, ಯಾವುದೇ ಅನುಮೋದಿತ ಚಿಕಿತ್ಸೆಗಳು ಅಥವಾ ಲಸಿಕೆಗಳು ಲಭ್ಯವಿಲ್ಲ. ಕಾಂಗೋ ಮತ್ತು ಉಗಾಂಡಾಗಳು 20ಕ್ಕೂ ಹೆಚ್ಚು ಎಬೋಲಾ ಏಕಾಏಕಿ ಅನುಭವಿಸಿವೆ. ಆದರೆ ಇದು ಮೂರನೇ ಬಾರಿ ವೈರಸ್ ಪತ್ತೆಯಾಗಿದೆ. ಈಗ ಬುನಿಯಾ, ಗೋಮಾ, ಮೊಂಗ್ಬ್ವಾಲು, ಬುಟೆಂಬೊ ಮತ್ತು ನ್ಯಾಕುಂಡೆಯಲ್ಲಿ ಪ್ರಕರಣಗಳು ವರದಿಯಾಗಿವೆ.

ಶಿಫಾರಸುಗಳ ಕುರಿತು ಸಲಹೆ ನೀಡಲು ವಿಶ್ವಸಂಸ್ಥೆಯ ಆರೋಗ್ಯ ಸಂಸ್ಥೆ ಇಂದು ತನ್ನ ತುರ್ತು ಸಮಿತಿಯನ್ನು ಕರೆಯಲಿದೆ. ಬುಂಡಿಬುಗ್ಯೊ ವೈರಸ್ ಎಬೋಲಾದ ಅಪರೂಪದ ತಳಿಯಾಗಿದೆ. ಪ್ರಸ್ತುತ ಇದಕ್ಕೆ ಯಾವುದೇ ಅನುಮೋದಿತ ಔಷಧ ಅಥವಾ ಲಸಿಕೆ ಇಲ್ಲ.

ಇಂದು ಕೌಸಲ್ಯ–ಅಪ್ರಮೇಯರಿಂದ 'ದಾಸ ಲಹರಿ– ಜುಗಲ್ ಬಂದಿ'


ಅಪ್ರಮೇಯ


ಕೌಸಲ್ಯಾ

ಮೈಸೂರು, ಮೇ 19– ಅಧಿಕ ಜ್ಯೇಷ್ಠ ಮಾಸದ ಅಂಗವಾಗಿ ಮೈಸೂರಿನ ಉತ್ತರಾದಿ ಮಠದ ವತಿಯಿಂದ ಅಗ್ರಹಾರದ ಕಾಶಿ ವಿಶ್ವನಾಥ ಸನ್ನಿಧಿ ಆವರಣದಲ್ಲಿ ಹಮ್ಮಿಕೊಂಡಿರುವ ಅಧಿಕ ಮಾಸೋತ್ಸವ ಸಾಂಸ್ಕೃತಿಕ ಕಾರ್ಯಕ್ರಮ ಸರಣಿಯಲ್ಲಿ ಬುಧವಾರ(ಮೇ 20) ಸಂಜೆ 5.30ಕ್ಕೆ ಶ್ರೀ ಸತ್ಯಾತ್ಮ ತೀರ್ಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಯುವ ಪ್ರತಿಭೆಗಳಾದ ಕೌಸಲ್ಯ ರಘುರಾಂ ಮತ್ತು ಎ.ಆರ್.ಅಪ್ರಮೇಯ ಅವರು 'ದಾಸ ಲಹರಿ– ಜುಗಲ್ ಬಂದಿ' ಗಾಯನ ಪ್ರಸ್ತುತಪಡಿಸಲಿದ್ದಾರೆ.

ಮೈಸೂರು ವಿವಿ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿ ಅಂತಿಮ ಸೆಮಿಸ್ಟಾರ್ ಬಿಇ ವ್ಯಾಸಂಗ ಮಾಡುತ್ತಿರುವ ಗಾಯಕಿ ಎ.ಆರ್.ಕೌಸಲ್ಯ, ನಾಡಿನ ಮಹತ್ವದ ಗಾಯಕರಲ್ಲಿ ಅಗ್ರಪಂಕ್ತಿಯಲ್ಲಿರುವ ವಿದ್ವಾನ್ ಶೃಂಗೇರಿ ಹೆಚ್.ಎಸ್.ನಾಗರಾಜ್ ಅವರ ವಿದ್ಯಾರ್ಥಿ. ವಿದುಷಿ ರಜನಿ ರಾಮಧ್ಯಾನಿ ಅವರ ಬಳಿ ಕರ್ನಾಟಕ ಶಾಸ್ತ್ರೀಯ ಸಂಗೀತ ಸೀನಿಯರ್ ಹಂತದ ಕಲಿಕೆಯಲ್ಲಿದ್ದು, ಈಗಾಗಲೇ ಹಲವು ಮಠ ಮಾನ್ಯಗಳ ವೇದಿಕೆಗಳಲ್ಲಿ ಗಾಯನ ಪ್ರಸ್ತುತಪಡಿಸಿದ್ದಾರೆ. ತಿರುಮಲ ತಿರುಪತಿಯ ಟಿಟಿಡಿ– ದಾಸ ಸಾಹಿತ್ಯ ಪ್ರಾಜೆಕ್ಟ್‌ನ ಗಾಯಕಿಯಾಗಿ ಈಗಾಗಲೇ ತಿರುಪತಿ ಯಲ್ಲಿ ಹಲವು ಬಾರಿ ದಾಸರಪದ ಗಾಯನ ಕಛೇರಿ ನಡೆಸಿಕೊಟ್ಟ ಕೀರ್ತಿಗೆ ಭಾಜನರಾಗಿದ್ದಾರೆ.

ಹಾಡುಗಾರಿಕೆಯನ್ನು ಅನನ್ಯ ಭಾವದಿಂದ ಸ್ವೀಕರಿಸಿರುವ ಎ.ಆರ್.ಅಪ್ರಮೇಯ, ಶ್ರೀ ಗುರುಗುಹ ಸಂಗೀತ ಮಹಾವಿದ್ಯಾಲಯದಲ್ಲಿ ಶಾಸ್ತ್ರೀಯ ಸಂಗೀತ ಸೀನಿಯರ್ ಹಂತದ ಕಲಿಕೆಯಲ್ಲಿದ್ದಾರೆ. ಇವರಿಗೆ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಗಾಯನ ಸ್ಪರ್ಧೆಗಳಲ್ಲಿ ಅನೇಕ ಬಹುಮಾನಗಳು ದೊರೆತಿವೆ. ಕೇಂದ್ರ ಮಾನವ ಸಂಪನ್ಮೂಲ ಇಲಾಖೆ, ಕೇಂದ್ರೀಯ ವಿದ್ಯಾಲಯ ಸಂಘಟನ್ ಹಮ್ಮಿಕೊಂಡಿದ್ದ ರಾಷ್ಟ್ರೀಯ ಕಲಾ ಉತ್ಸವ್ ಸ್ಪರ್ಧೆಯಲ್ಲಿ ಎರಡು ಬಾರಿ ದಕ್ಷಿಣ ಭಾರತವನ್ನು ಪ್ರತಿನಿಧಿಸಿದ್ದಾರೆ. ಮೈಸೂರಿನ ಸದ್ವಿದ್ಯಾ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಇವರು ಈ ಬಾರಿ ದ್ವಿತೀಯ ಪಿಯುಸಿ(ವಿಜ್ಞಾನ) ಪರೀಕ್ಷೆಯಲ್ಲಿ ಶೇ.95 ಅಂಕದೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಶಿಷ್ಯವೇತನಕ್ಕೆ ಆಗ್ರಹಿಸಿ ಸಂಶೋಧಕರ ಪ್ರತಿಭಟನೆ


ಶಿಷ್ಯವೇತನರಹಿತ ಸಂಶೋಧಕರ ಬಳಗದಿಂದ ಮೈಸೂರು ವಿವಿ ಕ್ರಾಫರ್ಡ್ ಭವನ ಮುಂಭಾಗ ಪ್ರತಿಭಟನೆ ನಡೆಯಿತು.

ಮೈಸೂರು, ಮೇ 19(ವಿವಿಹೆಚ್)– ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸಂಶೋಧಕರಿಗೆ ಶಿಷ್ಯವೇತನ ನೀಡಬೇಕೆಂದು ಒತ್ತಾಯಿಸಿ ಶಿಷ್ಯವೇತನರಹಿತ ಸಂಶೋಧಕರ ಬಳಗದ ವತಿಯಿಂದ ಮೈಸೂರು ವಿ.ವಿ ಕ್ರಾಫರ್ಡ್ ಭವನದ ಮುಂಭಾಗ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ವಿ.ವಿ ವ್ಯಾಪ್ತಿಯ ಕಾಲೇಜುಗಳು, ಮಾನಸಗಂಗೋತ್ರಿಯಲ್ಲಿ ಪಿಎಚ್.ಡಿ. ಪ್ರವೇಶಾತಿ ಪಡೆದು ಸಂಶೋಧನೆ ಕೈಗೊಂಡಿರುವ ಸಂಶೋಧಕರಿಗೆ 2026–27ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿಶೇಷ ಘಟಕದ ವತಿಯಿಂದ ನೀಡಲಾಗುವ ಶಿಷ್ಯವೇತನಕ್ಕೆ 96 ಅರ್ಜಿಗಳು ಸಲ್ಲಿಕೆಯಾಗಿವೆ. ಆದರೆ, ಮೈಸೂರು ವಿ.ವಿ ಕೇವಲ 20 ಸಂಶೋಧಕರಿಗೆ ಮಾತ್ರ ಶಿಷ್ಯವೇತನ ಮಂಜೂರು ಮಾಡುವ ಮೂಲಕ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯಗಳು ಶಿಷ್ಯವೇತನ ರಹಿತವಾಗಿ ಪಿಎಚ್.ಡಿ. ಪದವಿ ಪಡೆಯಲು ಹರಸಾಹಸ ಪಡುವಂತಾಗಿದೆ ಎಂದು ಆಕ್ರೋಶ ಹೊರಹಾಕಿದರು.

ಹೆಚ್ಚುವರಿ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳಿಗೆ ವಿವಿ ವರ್ಷಕ್ಕೆ 23 ಕೋಟಿ ರೂ. ವ್ಯಯಿಸುತ್ತಿದೆ. 400 ಕೋಟಿ ರೂ. ಬಜೆಟ್‌ನಲ್ಲಿ ನಿಯಮಾನುಸಾರ ಶೇ.24ರಷ್ಟನ್ನು ಎಸ್‌ಸಿ, ಎಸ್‌ಟಿ ಉಪಯೋಜನೆಗಳಿಗೆ ಮೀಸಲಿಟ್ಟರೆ 96–97 ಕೋಟಿ ರೂ. ನೀಡಬೇಕಾಗುತ್ತದೆ. ಆದರೆ, ವಿವಿ ಇದ್ಯಾವುದನ್ನೂ ಮೀಸಲಿಡದೆ ವಂಚಿಸುತ್ತಿದೆ. ಎಲ್ಲಾ ಅರ್ಹ ಸಂಶೋಧಕರಿಗೂ ಸಮಾನ ಶಿಷ್ಯವೇತನವನ್ನು ಮಂಜೂರು ಮಾಡಬೇಕು ಎಂದು ಒತ್ತಾಯಿಸಿದರು.

ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ, ಸಂಚಾಲಕರಾದ ರವಿಕುಮಾರ್ ಮುಡಿಗುಂಡ, ನವೀನ್ ಅಳಗಂಚಿ, ಮಾದೇಶ್, ದೀಪ, ಮೌನ ದೊರೆ, ಧೀರಜ್, ನವೀನ್, ಬಿ.ಎನ್.ವಿಶಾಖ್, ಸಣ್ಣಮಾದು ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಯಾವ ಪುರುಷಾರ್ಥಕ್ಕೆ ಸರ್ಕಾರದ ಸಮರ್ಪಣಾ ಸಮಾವೇಶ...


ಬಿ.ಶಿವಣ್ಣ

ಮೈಸೂರು, ಮೇ 19– ರಾಜ್ಯ ಕಾಂಗ್ರೆಸ್ ಸರ್ಕಾರ ಯಾವ ಪುರುಷಾರ್ಥಕ್ಕೆ ಸಾಧನಾ ಸಮರ್ಪಣಾ ಸಮಾವೇಶ ನಡೆಸಿದೆಯೋ ಗೊತ್ತಿಲ್ಲ ಎಂದು ಕರ್ನಾಟಕ ಪ್ರಜಾ ಪಾರ್ಟಿ(ರೈತ ಪರ್ವ) ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ ಕಿಡಿಕಾರಿದ್ದಾರೆ.

ಸರ್ಕಾರದ ಗ್ಯಾರಂಟಿ ಯೋಜನೆಗಳಿಂದಾಗಿ ರಾಜ್ಯದ ಅಭಿವೃದ್ಧಿ ಕುಂಠಿತವಾಗಿದೆ. ದಿನಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ಜನ ತತ್ತರಿಸಿದ್ದಾರೆ. ಬೆಳೆಗೆ ಸೂಕ್ತ ಬೆಲೆಯಿಲ್ಲದೆ ರೈತರು ಸಂಕಷ್ಟದಲ್ಲಿದ್ದಾರೆ. ಕೊಲೆ, ಸುಲಿಗೆ, ದರೋಡೆ, ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ. ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ. ಎಲ್ಲಾ ಇಲಾಖೆಗಳಲ್ಲೂ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ರಾಜ್ಯದಲ್ಲಿ ಇಂತಹ ದುಃಸ್ಥಿತಿ ಇರುವಾಗ ರಾಜ್ಯ ಸರ್ಕಾರ ಯಾವ ಪುರುಷಾರ್ಥಕ್ಕಾಗಿ ಸಮರ್ಪಣಾ ಸಮಾವೇಶ ಮಾಡಿದೆಯೋ ಅರ್ಥವಾಗುತ್ತಿಲ್ಲ. ಗ್ಯಾರಂಟಿ ಯೋಜನೆಗಳಿಗಷ್ಟೇ ಅಂಟಿಕೊಳ್ಳದೆ ರಾಜ್ಯದ ಅಭಿವೃದ್ಧಿಯತ್ತಲೂ ರಾಜ್ಯ ಸರ್ಕಾರ ಗಮನಹರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಸುತ್ತೂರು ಶ್ರೀಕ್ಷೇತ್ರದಲ್ಲಿ ಅಧ್ಯಯನ ಶಿಬಿರ

ಮೈಸೂರು, ಮೇ 19– ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಸುತ್ತೂರು ಶ್ರೀಕ್ಷೇತ್ರದಲ್ಲಿ ಮಠಾಧಿಪತಿಗಳು, ಮಾತಾಜಿಗಳು, ಸಾಧಕರು ಹಾಗೂ ಆಧ್ಯಾತ್ಮಿಕ ಜಿಜ್ಞಾಸುಗಳಿಗೆ ಅಧ್ಯಯನ ಶಿಬಿರವನ್ನು ಮೇ 20ರಿಂದ 25ರವರೆಗೆ ಆಯೋಜಿಸಲಾಗಿದೆ. ಮೇ 20ರಂದು ನೋಂದಣಿ, ಸ್ವಪರಿಚಯ ಇತ್ಯಾದಿ ಕಾರ್ಯಕ್ರಮಗಳಿರುತ್ತವೆ. ಮೇ 21ರಂದು ಬೆಳಗ್ಗೆ 10.00 ಗಂಟೆಗೆ ಉದ್ಘಾಟನೆಯಾಗಲಿದೆ.

ಚಿಲಕವಾಡಿಯ ಶ್ರೀ ಗುರುರಾಮಯೋಗೀಶ್ವರ ಮಠದ ಶ್ರೀ ಇಮ್ಮಡಿ ಗುರುಲಿಂಗ ಸ್ವಾಮಿಗಳ ಸಮ್ಮುಖದಲ್ಲಿ, ಮಾಜಿ ಸಂಸದ ಡಾ.ಐ.ಜಿ.ಸನದಿಯವರ ಅಧ್ಯಕ್ಷತೆಯಲ್ಲಿ, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರು ಹಾಗೂ ಮಾಜಿ ಶಾಸಕ ಡಿ.ಆರ್. ಪಾಟೀಲ್ ಉದ್ಘಾಟಿಸಲಿದ್ದಾರೆ. ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಮುಖ್ಯ ಅತಿಥಿಗಳಾಗಿರುತ್ತಾರೆ.

ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಕೆ.ಅನಂತರಾಮುರವರು ಶ್ರೀಮನ್ನಿಜಗುಣ ಶಿವಯೋಗಿಗಳ ವಿವೇಕ ಚಿಂತಾಮಣಿಯ ಪ್ರಥಮ ವೇದಾದಿಶಾಸ್ತ್ರಾರ್ಥ ನಿರ್ಣಯದಿಂದ, ಶಿವಾಗಮಾರ್ಥ ವರ್ಣನೆ, ನಾಗಲೋಕ ಸ್ಥಿತಿ ವರ್ಣನೆ, ಜಂಬೂದ್ವೀಪ ವರ್ಣನೆಯ ಚತುರ್ಥ ಪರಿಚ್ಛೇದದವರೆಗೆ, ಘೋಡಗೇರಿಯ ಶ್ರೀ ಮಲ್ಲಯ್ಯ ಸ್ವಾಮಿಗಳು ಪಂಚಮ ಮೃತ್ಯುಲೋಕ ವರ್ಣನೆಯಿಂದ ದೇವಲೋಕ ವರ್ಣನೆ, ಊರ್ಧ್ವಲೋಕ ಸ್ಥಿತಿ ವರ್ಣನೆ, ಶುದ್ಧಭುವನ ವರ್ಣನೆ, ಭುವನಾಂತರ ಪ್ರಾಪ್ತಿ ವರ್ಣನೆ ಮತ್ತು ಕಾಲಕ್ರಮ ವರ್ಣನೆಯ ದಶಮ ಪರಿಚ್ಛೇದದವರೆಗೆ ವಿಷಯಗಳನ್ನು ಮಂಡಿಸಲಿದ್ದಾರೆ. ವಿಷಯ ಮಂಡನೆಯ ನಂತರ ಪ್ರಶ್ನೋತ್ತರವಿರುತ್ತದೆ. ಶಿಬಿರದಲ್ಲಿ ಪ್ರತಿದಿನ ಯೋಗ ಮತ್ತು ಧ್ಯಾನಗಳಿರುತ್ತವೆ. 25ರಂದು ಶಿಬಿರದ ಸಮಾರೋಪವಿರುತ್ತದೆ. ಭಾಗವಹಿಸಲಿಚ್ಛಿಸುವವರು 9964141560 ದೂರವಾಣಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಕನ್ನಡ ಓಟವೂ ಸೇರಿದಂತೆ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿ ಕನ್ನಡ ಭಾಷಾ ಜಾಗೃತಿ ಕಾರ್ಯಕ್ರಮ

ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಸಭೆ


ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಆವರಣದ ಅಪರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯರೊಂದಿಗೆ ಸಭೆ ನಡೆಯಿತು.

ಮೈಸೂರು, ಮೇ.19(ಎಸ್‌ಪಿಎನ್)– ಸಾರ್ವಜನಿಕವಾಗಿ ಕನ್ನಡ ಭಾಷೆ ಬಳಕೆಯನ್ನು ಹೆಚ್ಚಿಸಲು ದಸರಾ ಮ್ಯಾರಥಾನ್ ಮಾದರಿಯಲ್ಲಿಯೇ'ಕನ್ನಡ ಓಟ' ಸೇರಿದಂತೆ ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕನ್ನಡ ಭಾಷಾ ಜಾಗೃತಿ ಕಾರ್ಯಕ್ರಮಗಳನ್ನು ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಭರವಸೆ ನೀಡಿದರು.

ಮೈಸೂರು ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಆವರಣದ ಅಪರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ವತಿಯಿಂದ ಏರ್ಪಡಿಸಿದ್ದ ಅಧಿಕಾರಿಗಳ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಮೈಸೂರು ಮಹಾನಗರ ಪಾಲಿಕೆ ವತಿಯಿಂದ ನಗರದ ಆಯ್ದ ರಸ್ತೆ ಮತ್ತು ವೃತ್ತಗಳಲ್ಲಿರುವ ಅಂಗಡಿ ಮುಂಗಟ್ಟುಗಳ ನಾಮಫಲಕಗಳಲ್ಲಿ ಶೇ 60–40ರ ಅನುಪಾತದಡಿ ಕನ್ನಡ ಬಳಕೆ ಮಾಡುವಂತೆ ಅಭಿಯಾನ ನಡೆಸಲಾಗುವುದು. ಕನ್ನಡ ನಮ್ಮ ಮಾತೃ ಭಾಷೆ, ಮಾತೃ ಭಾಷೆ ಹೆಚ್ಚು ಬಳಕೆ ಮಾಡುವುದು ಜಿಲ್ಲಾ ಹಂತ ಅಧಿಕಾರಿಗಳು ಹಾಗೂ ಜನತೆಯ ಸ್ವಾಭಿಮಾನದ ಸಂಕೇತ ಎಂದರು.

ಕನ್ನಡ ಭಾಷೆ ಬಳಕೆ, ಜಾಗೃತಿ ಕುರಿತು ಜಿಲ್ಲಾ ಕನ್ನಡ ಜಾಗೃತಿ ಸಮಿತಿಯ ಸದಸ್ಯರೊಬ್ಬರು ನೀಡಿದ ಸಲಹೆ ಮೇರೆಗೆ ಹಂತಹಂತವಾಗಿ ಕನ್ನಡ ಭಾಷೆ ಕುರಿತು ಅಭಿಯಾನ, ಕನ್ನಡ ಓಟ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಸಂಘಟಿಸಲಾಗುವುದು ಎಂದರು.

ಕರ್ನಾಟಕ ಕಾವಲು ಪಡೆಯ ರಾಜ್ಯಾಧ್ಯಕ್ಷ ಮೋಹನ್ ಕುಮಾರ್ ಗೌಡ ಮಾತನಾಡಿ, ಕನ್ನಡ ನಾಡು, ನುಡಿ ಹಾಗೂ ಜಲದ ವಿಷಯವಾಗಿ ಹೋರಾಡುವ ಸಂದರ್ಭದಲ್ಲಿ ಪೊಲೀಸ್ ಇಲಾಖೆ, ಹೋರಾಟಗಾರರ ಮೇಲೆ ಎಫ್‌ಐಆರ್ ದಾಖಲಿಸುತ್ತದೆ. ಆ ವೇಳೆ ಕನ್ನಡ ನಾಡು–ನುಡಿ ಉಳಿಸುವ ಸಂದರ್ಭದಲ್ಲಿ ಹೋರಾಟ ಮಾಡುತ್ತಿದ್ದರು ಎಂಬುದಾಗಿ ಪೊಲೀಸರು ದಾಖಲಿಸುವ ಎಫ್‌ಐಆರ್ ನಲ್ಲಿ ಉಲ್ಲೇಖಿಸುವಂತೆ ಪೊಲೀಸ್ ಇಲಾಖೆಗೆ ಸೂಚಿಸುವಂತೆ ಹೋರಾಟಗಾರರು ಸಭೆಯಲ್ಲಿ ಮನವಿ ಮಾಡಿದರು.

ವಾಣಿಜ್ಯ ಸ್ಥಳದಲ್ಲಿ, ಎಸ್‌ಬಿಐ ಸೇರಿದಂತೆ ಇತರೆ ಬ್ಯಾಂಕ್‌ಗಳಲ್ಲಿ ಹಾಗೂ ಅಂಗಡಿ ನಾಮಫಲಕಗಳಲ್ಲಿ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಶೇ.60–40 ಅನುಪಾತ ತಪ್ಪದೇ ಪಾಲನೆಯಾಗಬೇಕು. ಇಲ್ಲದಿದ್ದಲ್ಲಿ ಜಿಲ್ಲಾಡಳಿತ ಕಾನೂನು ಕಠಿಣ ಕ್ರಮ ಜರುಗಿಸಬೇಕು ಎಂದು ಎಲ್ಲಾ ಸದಸ್ಯರು ಒತ್ತಾಯಿಸಿದರಲ್ಲದೆ, ಕಡಕೊಳ ಕುಮಾರಸ್ವಾಮಿ ಇಂದಿನ ಸಭೆಗೆ ಗೈರಾಗಿರುವ ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ನೋಟೀಸ್ ನೀಡುವಂತೆ ಒತ್ತಾಯಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಾಮನಿರ್ದೇಶಿತ ಸದಸ್ಯ ಟಿ.ಗುರುರಾಜ್ ಮಾತನಾಡಿ, ರಸ್ತೆ ಬದಿಯ ಸಂಚಾರಿ ನಿಯಮಗಳ ಫಲಕಗಳಲ್ಲಿ ಒಂದು ಬದಿಯಲ್ಲಾದರೂ ಕನ್ನಡ ಭಾಷೆಯನ್ನು ಬಳಕೆ ಮಾಡುವಂತೆ ಪೊಲೀಸ್ ಇಲಾಖೆಗೆ ಸೂಚಿಸಬೇಕು. ಕನ್ನಡ ಪರ ಹೋರಾಟಗಾರರು ಠಾಣೆಗೆ ತೆರಳಿ, ಮಾಹಿತಿ ನೀಡುವ ಸಂದರ್ಭದಲ್ಲಿ ಗೌರವದಿಂದ ನಡೆಸಿಕೊಳ್ಳುವಂತೆ ಜಿಲ್ಲಾಡಳಿತಕ್ಕೆ ತಾಕೀತು ಮಾಡಬೇಕು. ಪೆಟ್ರೋಲ್ ಪಂಪ್‌ಗಳ 'ಐ ಲವ್ ಮೈಸೂರ್ ಸೇರಿದಂತೆ ಇತರೆ ಆಕರ್ಷಣೀಯ ಫಲಕಗಳನ್ನು ಅಳವಡಿಸುವ ಮೊದಲು ಕನ್ನಡದಲ್ಲೇ ಫಲಕಗಳನ್ನು ಹಾಕುವಂತೆ ಸುತ್ತೋಲೆ ಹೊರಡಿಸುವಂತೆ ಮನವಿ ಮಾಡಿದರು.

ಅಂಗಡಿ ಮುಂಗಟ್ಟು, ಶಿಕ್ಷಣ ಸಂಸ್ಥೆಗಳ ನಾಮಫಲಕಗಳಲ್ಲಿ ಶೇ 60 ರಷ್ಟು ಕನ್ನಡದಲ್ಲಿರಬೇಕು ಎಂಬ ನಿಯಮವಿದ್ದರೂ ಇನ್ನೂ ಬಹಳಷ್ಟು ಕಡೆ ಈ ನಿಯಮ ಪಾಲನೆಯಾಗುತ್ತಿಲ್ಲ. ಇದರ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಕನ್ನಡ ಪರ ಹೋರಾಟಗಾರರು ಹೋರಾಟ ನಡೆಸುವುದಾಗಿ ಕನ್ನಡ ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಜಿ. ಮೋಹನ್ ತಿಳಿಸಿದರು

ಬ್ಯಾಂಕ್ ಚಲನ್‌ಗಳು ಸೇರಿದಂತೆ ಇತರೆ ನಮೂನೆಗಳಲ್ಲಿ ಸಾರ್ವಜನಿಕರಿಗೆ ಉಪಯುಕ್ತವಾಗುವ ರೀತಿ ಕನ್ನಡ ಭಾಷೆಯ ಬಳಕೆಯಾಗಬೇಕು. ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಕನ್ನಡದ ಬಳಕೆಗೆ ಆದ್ಯತೆ ನೀಡಬೇಕು ಎಂದು ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಯ ಕನ್ನಡ ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಗೋಪಾಲಕೃಷ್ಣ ತಿಳಿಸಿದರು.

ಕನ್ನಡ ಜಿಲ್ಲಾ ಜಾಗೃತಿ ಸಮಿತಿ ಸದಸ್ಯರು ಚರ್ಚಿಸಿರುವ ವಿಷಯಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಆಯಾ ಇಲಾಖೆಗೆ ಪತ್ರ ಬರೆಯುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಅವರಿಗೆ ಎಡಿಸಿ ಆರ್.ಐಶ್ವರ್ಯ ಸೂಚನೆ ನೀಡಿದರು.

ಸಭೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತ ದಾಸೇಗೌಡ, ಕನ್ನಡ ಜಿಲ್ಲಾ ಜಾಗೃತಿ ಸಮಿತಿ ಸದಸ್ಯರುಗಳಾದ ಡಾ.ವಿನೋದಮ್ಮ, ರವಿಪ್ರಸಾದ್ ಹೆಚ್.ಆರ್, ಕುಮಾರ್,ಡಾ.ದಿನಮಣಿ ಬಿ.ಎಸ್, ಪರಮೇಶ್, ಡಾ.ಎಂ.ಪಿ. ಮಂಜಪ್ಪ ಶೆಟ್ಟಿ ಮಸಗಲಿ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಜೈಲಿಗೆ ತೆರಳಿ ನಟ ದರ್ಶನ್ ಭೇಟಿ ಮಾಡಿದ ಪತ್ನಿ ವಿಜಯಲಕ್ಷ್ಮಿ, ಪುತ್ರ ವಿನೀಶ್



ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ಸ್ಟಾರ್ ನಟ ದರ್ಶನ್ ತೂಗುದೀಪ ಅವರನ್ನು ಪತ್ನಿ ವಿಜಯಲಕ್ಷ್ಮಿ ಹಾಗೂ ಪುತ್ರ ವಿನೀಶ್ ಅವರು ಮಂಗಳವಾರ ಪರಪ್ಪನ ಅಗ್ರಹಾರ ಜೈಲಿನಲ್ಲಿ ಭೇಟಿ ಮಾಡಿದರು.

ಇಂದು ನಟ ದರ್ಶನ್ ಹಾಗೂ ವಿಜಯಲಕ್ಷ್ಮಿ ಅವರ 23ನೇ ವಿವಾಹ ವಾರ್ಷಿಕೋತ್ಸವ. ಈ ಹಿನ್ನೆಲೆಯಲ್ಲಿ ವಿಜಯಲಕ್ಷ್ಮಿ ಅವರು ಇಂದು ಮಧ್ಯಾಹ್ನ ಪುತ್ರ ವಿನೀಶ್ ಜೊತೆ ಪರಪ್ಪನ ಅಗ್ರಹಾರ ಜೈಲಿಗೆ ಭೇಟಿ ನೀಡಿದರು. ಈ ವೇಳೆ ನಟ ದರ್ಶನ್ ಅವರು ಪತ್ನಿ ಹಾಗೂ ಮಗನನ್ನು ಅಪ್ಪಿಕೊಂಡು ಭಾವುಕರಾದರು ಎನ್ನಲಾಗಿದೆ.

ಕಳೆದ ವರ್ಷ ಜಾಮೀನಿನ ಮೇಲೆ ಹೊರ ಬಂದಿದ್ದ ದರ್ಶನ್, ತಮ್ಮ ಪತ್ನಿ ಜೊತೆ ಅದ್ಧೂರಿಯಾಗಿ ಆನಿವರ್ಸರಿ ಸೆಲಬ್ರೇಟ್ ಮಾಡಿದ್ದರು. ಆದರೆ, ಈ ಬಾರಿ ದರ್ಶನ್ ಒಂಟಿಯಾಗಿ ಜೈಲಿನಲ್ಲಿ ಕಣ್ಣೀರು ಹಾಕಿದ್ದು, ಪತ್ನಿ ಹಾಗೂ ಪುತ್ರನ ಭೇಟಿಗೆ ಅವಕಾಶ ಕಲ್ಪಿಸುವಂತೆ ಕೋರಿ ಜೈಲಿನ ಮುಖ್ಯ ಅಧೀಕ್ಷಕ ಅಂಶುಕುಮಾರ್ ಅವರಿಗೆ ಮನವಿ ಮಾಡಿದ್ದರು. ಮತ್ತೊಂದೆಡೆ ಪತ್ನಿ ವಿಜಯಲಕ್ಷ್ಮಿ ಸಹ ಕಾರಾಗೃಹ ಎಡಿಜಿಪಿ ಅಲೋಕ್ ಕುಮಾರ್ ಅವರಿಗೆ ಪತ್ರ ಬರೆದು ಪತಿ ಭೇಟಿಗೆ ಅವಕಾಶ ನೀಡುವಂತೆ ಕೋರಿದ್ದರು. ಈ ಮನವಿ ಸ್ಪಂದಿಸಿದ ಜೈಲು ಅಧಿಕಾರಿಗಳು ಇಂದು ಪತ್ನಿ ಹಾಗೂ ಮಗನ ಭೇಟಿಗೆ ಅವಕಾಶ ಕಲ್ಪಿಸಿದ್ದಾರೆ.

ಸಿಎಂ ಪಟ್ಟದ ಆಟಕ್ಕೆ ರೋಚಕ ಟ್ವಿಸ್ಟ್! ಸಿಎಂ, ಡಿಸಿಎಂ ಜೊತೆ ಖರ್ಗೆ ಮೀಟಿಂಗ್!!



ಬೆಂಗಳೂರು, ಮೇ 19– ನಾಯಕತ್ವ ಬದಲಾವಣೆ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ. ನಾಯಕತ್ವ ಜಟಾಪಟಿ ನಡುವೆ ಸಚಿವ ಕೆ.ಜೆ.ಜಾರ್ಜ್ ನಿವಾಸದಲ್ಲಿ ಮಹತ್ವದ ಸಭೆ ನಡೆದಿದೆ. ಸಭೆಯಲ್ಲಿ ಮಲ್ಲಿಕಾರ್ಜುನ್ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ ಶಿವಕುಮಾರ್ ಭಾಗಿಯಾಗಿದ್ದು ಸಾಕಷ್ಟು ಕುತೂಹಲ ಮೂಡಿಸಿದೆ.

ಮೇ 20ರಂದು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ತುಂಬುತ್ತಿದೆ. ಸರ್ಕಾರಕ್ಕೆ ಮೂರು ವರ್ಷ ತುಂಬಿದ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ಸಾಧನಾ ಸಮಾವೇಶ ಹಮ್ಮಿಕೊಂಡಿತ್ತು. ಈ ಮಧ್ಯೆ ಮತ್ತೆ ನಾಯಕತ್ವ ಬದಲಾವಣೆ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ. ನಾಯಕತ್ವ ಜಟಾಪಟಿ ನಡುವೆ ಸಚಿವ ಕೆ.ಜೆ.ಜಾರ್ಜ್ ನಿವಾಸದಲ್ಲಿ ಮಹತ್ವದ ಸಭೆ ನಡೆದಿದೆ. ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ ಶಿವಕುಮಾರ್ ಭಾಗಿಯಾಗಿದ್ದು ಸಾಕಷ್ಟು ಕುತೂಹಲ ಮೂಡಿಸಿದೆ.

ಕೆ.ಜೆ.ಜಾರ್ಜ್ ನಿವಾಸದಲ್ಲಿ ನಡೆದ ರಾಜ್ಯ ನಾಯಕರ ಸಭೆ : ರಾಜ್ಯ ರಾಜಕೀಯದಲ್ಲಿ ಮತ್ತೆ ನಾಯಕತ್ವ ಬದಲಾವಣೆ ಚರ್ಚೆ ಜೋರಾಗಿದೆ. ನಾಯಕತ್ವ ಜಟಾಪಟಿ ಮಧ್ಯೆ ಸಚಿವ ಕೆ.ಜೆ.ಜಾರ್ಜ್ ನಿವಾಸದಲ್ಲಿ ರಾಜ್ಯ ನಾಯಕರು ಸಭೆ ನಡೆಸಿದ್ದಾರೆ. ನಿನ್ನೆ ಕೇರಳ ಸಿಎಂ ಪದಗ್ರಹಣದಲ್ಲಿ ಭಾಗಿಯಾಗಿ ತಿರುವನಂತಪುರಂನಿಂದ ವಾಪಾಸ್ ಆದ ಬಳಿಕ ಇಂಧನ ಸಚಿವ ಕೆ.ಜೆ ಜಾರ್ಜ್ ನಿವಾಸದಲ್ಲಿ ಮಲ್ಲಿಕಾರ್ಜುನ್ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ಅವರು ಸಭೆ ನಡೆಸಿ ಮಾತುಕತೆ ನಡೆಸಿದ್ದಾರೆ. ಮೂರು ವರ್ಷ ಪೂರೈಸಿದ ಬಳಿಕ ಈ ಸಭೆ ನಡೆದಿದ್ದು, ರಾಜ್ಯ ನಾಯಕರ ಸಭೆ ಸಾಕಷ್ಟು ಕುತೂಹಲ ಕೆರಳಿಸಿದೆ.

ಕೊಪ್ಪಳದಲ್ಲಿ ಕೃಷಿ ಹೊಂಡದಲ್ಲಿ ಮುಳುಗಿ ಇಬ್ಬರು ಬಾಲಕಿಯರು ಸಾವು

ಕೊಪ್ಪಳ, ಮೇ 19– ಕೃಷಿ ಹೊಂಡದಲ್ಲಿ ಮುಳುಗಿ ಇಬ್ಬರು ಬಾಲಕಿಯರು ಮೃತಪಟ್ಟ ಹೃದಯ ವಿದ್ರಾವಕ ಘಟನೆ ಮಂಗಳವಾರ ಕೊಪ್ಪಳ ಜಿಲ್ಲೆ ಕುಕನೂರು ತಾಲೂಕಿನ ಯರೇಹಂಚಿನಾಳ ಗ್ರಾಮದಲ್ಲಿ ನಡೆದಿದೆ.

ಮೃತ ಬಾಲಕಿಯರನ್ನು ಗದಗ ಜಿಲ್ಲೆಯ ತಿಮ್ಮಾಪೂರ ಗ್ರಾಮದ ಲಕ್ಷ್ಮವ್ವ ಹರಣಸಿಕಾರಿ(15) ಹಾಗೂ ಮುತ್ತವ್ವ ಹರಣಸಿಕಾರಿ(8) ಎಂದು ಗುರುತಿಸಲಾಗಿದೆ. ಯರೇಹಂಚಿನಾಳ ಗ್ರಾಮದಿಂದ ಗದಗಕ್ಕೆ ಹೋಗುವ ರಸ್ತೆ ಪಕ್ಕದಲ್ಲಿರುವ 362ನೇ ಸರ್ವೆ ನಂಬರಿನ ಕೃಷಿ ಹೊಂಡಕ್ಕೆ ಬಟ್ಟೆ ತೊಳೆಯಲು ತೆರಳಿದ್ದ ವೇಳೆ ಕಾಲು ಜಾರಿ ನೀರಿಗೆ ಬಿದ್ದ ಪರಿಣಾಮ ದುರ್ಘಟನೆ ಸಂಭವಿಸಿದೆ ಎಂದು ತಿಳಿದು ಬಂದಿದೆ.

ಮೃತ ಬಾಲಕಿಯರ ಕುಟುಂಬಗಳು ಬಡವರಾಗಿದ್ದು, ಮಕ್ಕಳ ಸಾವಿನಿಂದ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಸರ್ಕಾರದಿಂದ ಸೂಕ್ತ ಪರಿಹಾರ ನೀಡಬೇಕೆಂದು ಸ್ಥಳೀಯರು ಹಾಗೂ ಕುಟುಂಬಸ್ಥರು ಆಗ್ರಹಿಸಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆಯೇ ಕುಕನೂರು ಪೊಲೀಸ್ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ಪ್ರಕರಣ ದಾಖಲಾಗಿದ್ದು, ಮುಂದಿನ ಕ್ರಮ ಕೈಗೊಳ್ಳಲಾಗಿದೆ.

ಐಸ್‌ಲ್ಯಾಂಡ್, ಫಿನ್‌ಲ್ಯಾಂಡ್, ಡೆನ್ಮಾರ್ಕ್ ಪ್ರಧಾನಿಗಳ ಜೊತೆ ಮೋದಿ ಮಾತುಕತೆ



ಓಸ್ಲೋ, ಮೇ 19– ಐಸ್‌ಲ್ಯಾಂಡ್, ಫಿನ್‌ಲ್ಯಾಂಡ್ ಮತ್ತು ಡೆನ್ಮಾರ್ಕ್ ಪ್ರಧಾನಿಗಳ ಜೊತೆ ಪ್ರತ್ಯೇಕ ಸಭೆಗಳಲ್ಲಿ ಭಾರತ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದು, ವ್ಯಾಪಾರ ಹಾಗೂ ನವೀಕರಿಸಬಹುದಾದ ಇಂಧನ ದಂತಹ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಬಾಂಧವ್ಯ ಮತ್ತಷ್ಟು ಗಟ್ಟಿಗೊಳಿಸುವುದಕ್ಕೆ ಒತ್ತು ನೀಡಿದ್ದಾರೆ. 3ನೇ ಭಾರತ–ನಾರ್ಡಿಕ್ ಶೃಂಗಸಭೆಗೂ ಮುನ್ನ ಈ ಪ್ರತ್ಯೇಕ ಸಭೆಗಳು ನಡೆದಿವೆ. ಐಸ್‌ಲ್ಯಾಂಡ್ ಪ್ರಧಾನಿ ಕ್ರಿಸ್ಟ್ರುನ್ ಫ್ರಾಸ್ಟಾಡೊಟೀರ್, ಫಿನ್‌ಲ್ಯಾಂಡ್ ಪ್ರಧಾನಿ ಪೆಟ್ಟೆರಿ ಒರ್ಪೊ ಮತ್ತು ಡೆನ್ಮಾರ್ಕ್ ಪ್ರಧಾನಿ ಮ್ಯಾಟೆ ಫ್ರೆಡೆರಿಕ್ಸೆನ್ ಅವರೊಂದಿಗೆ ಪ್ರಧಾನಿ ಮೋದಿ ಚರ್ಚಿಸಿದ್ದಾರೆ. ಈ ಸಂದರ್ಭದಲ್ಲಿ ಭಾರತ ಹಾಗೂ ನಾರ್ಡಿಕ್ ದೇಶಗಳ ನಡುವಣ ದ್ವಿಪಕ್ಷೀಯ ಬಾಂಧವ್ಯ ವೃದ್ಧಿಯ ಕುರಿತು ಚರ್ಚಿಸಲಾಯಿತು.

ನಾರ್ಡಿಕ್ ದೇಶಗಳು ಉತ್ತರ ಯುರೋಪ್ ಹಾಗೂ ಉತ್ತರ ಅಟ್ಲಾಂಟಿಕ್‌ನಲ್ಲಿರುವ ಭೌಗೋಳಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪ್ರದೇಶವನ್ನು ಪ್ರತಿನಿಧಿಸುತ್ತದೆ. ಇದು ಡೆನ್ಮಾರ್ಕ್, ಫಿನ್‌ಲ್ಯಾಂಡ್, ಐಸ್‌ಲ್ಯಾಂಡ್, ನಾರ್ವೆ ಹಾಗೂ ಸ್ವೀಡನ್ ದೇಶಗಳನ್ನು ಒಳಗೊಂಡಿವೆ. ಐದು ನಾರ್ಡಿಕ್ ರಾಷ್ಟ್ರಗಳ ಒಟ್ಟು ಜಿಡಿಪಿ 1.9 ಟ್ರಿಲಿಯನ್ ಡಾಲರ್‌ಗೂ ಹೆಚ್ಚಿದೆ.3ನೇ ಭಾರತ–ನಾರ್ಡಿಕ್ ಶೃಂಗದಲ್ಲಿ ತಂತ್ರಜ್ಞಾನ, ನಾವೀನ್ಯತೆ, ಹಸಿರು ಪರಿವರ್ತನೆ, ನವೀಕರಿಸಬಹುದಾದ ಇಂಧನ, ಸುಸ್ಥಿರತೆ, ಆರ್ಥಿಕತೆ, ರಕ್ಷಣೆ, ಬಾಹ್ಯಾಕಾಶ ಮತ್ತು ಆರ್ಕ್ಟಿಕ್ ನಂತಹ ಕ್ಷೇತ್ರಗಳಲ್ಲಿ ನಾರ್ಡಿಕ್ ರಾಷ್ಟ್ರಗಳೊಂದಿಗೆ ಹೆಚ್ಚಿನ ಕಾರ್ಯತಂತ್ರ ಪಾಲುದಾರಿಕೆ ನಿರೀಕ್ಷಿಸಲಾಗುತ್ತಿದೆ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಶ್ರೀ ಮೋಹನ್ ಕುಮಾರ್ ಬಿನ್ ಲೇಟ್ ನಿಂಗೇಗೌಡ, ವಯಸ್ಸು ಸುಮಾರು 57 ವರ್ಷಗಳು, ವಾಸ:– ಸಿ.ಪಿ.ಸಿ ಲೇಔಟ್, ಐ.ಡಿ.ಬಿ.ಐ ಬ್ಯಾಂಕ್ ಹತ್ತಿರ, ಕಾಲೇಜ್ ರಸ್ತೆ, ಮಡಿಕೇರಿ, ಕೊಡಗು ಜಿಲ್ಲೆ–571201. ಇವರು ಈ ಕೆಳಕಂಡಂತೆ ವಿವರಿಸಲಾದ ಸ್ಥಿರಾಸ್ತಿಯನ್ನು ಶ್ರೀ ದಿವ್ಯಚಂದ್ರ ಬಿ.ಡಿ ಬಿನ್ ಗಂಗಪ್ಪ ದಾಸೇಗೌಡ, ವಯಸ್ಸು ಸುಮಾರು 55 ವರ್ಷಗಳು ಹಾಗೂ ಶ್ರೀಮತಿ ರಮ್ಯಾ ದಿವ್ಯಚಂದ್ರ, ವಯಸ್ಸು ಸುಮಾರು 46 ವರ್ಷಗಳು, ಇಬ್ಬರ ವಾಸ:– ಫ್ಲಾಟ್ ನಂ. 22033, ಪ್ರೆಸ್ಟೀಜ್ ಫಾಲ್ಕನ್ ಸಿಟಿ ಅಪಾರ್ಟ್‌ಮೆಂಟ್, ಕೋಣನಕುಂಟೆ ಕ್ರಾಸ್, ಕನಕಪುರ ರಸ್ತೆ, ಬೆಂಗಳೂರು. ಇವರುಗಳಿಂದ ಖರೀದಿಸಬೇಕೆಂದು ಉದ್ದೇಶಿಸಿರುತ್ತಾರೆ.

ಆಸ್ತಿ ವಿವರ:–

ಮೈಸೂರು ನಗರ, ಚಾಮರಾಜ ಮೊಹಲ್ಲಾ, ಬೋಗಾದಿ, ಶಾರದಾದೇವಿ ನಗರ ಬಡಾವಣೆ, ನಿವೇಶನ ಸಂಖ್ಯೆ **396/1** ಇದರ ವಿಸ್ತೀರ್ಣ ಪೂರ್ವ ಪಶ್ಚಿಮ: 15 ಮೀಟರ್ ಹಾಗೂ ಉತ್ತರದಿಂದ ದಕ್ಷಿಣಕ್ಕೆ: (24.32+24.00)/2 ಮೀಟರ್‌ಗಳು, ಒಟ್ಟು 362.40 ಚದರ ಮೀಟರ್‌ಗಳುಳ್ಳ ಸ್ವತ್ತಿಗೆ ಚಕ್ಕುಬಂದಿ:–

ಪೂರ್ವಕ್ಕೆ: ನಿವೇಶನ ಸಂಖ್ಯೆ 16 (ಖಾಸಗಿ ಬಡಾವಣೆ), ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 396/2, ಉತ್ತರಕ್ಕೆ: ನಾಗರೀಕ ಯೋಗಕ್ಷೇಮ 1ನೇ ಹಂತ ಖಾಸಗಿ ಬಡಾವಣೆ, ದಕ್ಷಿಣಕ್ಕೆ: 24 ಮೀಟರ್ ಅಗಲದ ಮೈ. ಕಾಂತರಾಜ ಅರಸ್ ರಸ್ತೆ, ಈ ಮೇಲ್ಕಂಡ ಆಸ್ತಿಗೆ ಸಂಬಂಧಿಸಿದಂತೆ ಯಾರಾದರೂ ವ್ಯಕ್ತಿ ಅಥವಾ ಸಂಸ್ಥೆಗೆ ಯಾವುದೇ ಹಕ್ಕು, ಸ್ವಾಮ್ಯ, ಆಸಕ್ತಿ, ಗಿರವಿ, ಭಾಧ್ಯತೆ, ಬಾಡಿಗೆ ಹಕ್ಕು, ವಾರಸುದಾರಿಕೆ ಹಕ್ಕು, ಮಾರಾಟದ ಒಪ್ಪಂದ, ನ್ಯಾಯಾಲಯದ ವ್ಯಾಜ್ಯ, ನಿರ್ಬಂಧ, ಋಣಭಾರಗಳು ಅಥವಾ ಇತರ ಯಾವುದೇ ದಾವೆ ಇದ್ದಲ್ಲಿ, ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 7 (ಏಳು) ದಿನದೊಳಗಾಗಿ ಸಂಬಂಧಿಸಿದ ದಾಖಲೆಗಳ ಸಮೇತ ಕೆಳಗೆ ಸಹಿ ಮಾಡಿದ ವಕೀಲರ ಕಛೇರಿಗೆ ಲಿಖಿತ ಆಕ್ಷೇಪಣೆ ಸಲ್ಲಿಸಬೇಕಾಗಿ ತಿಳಿಸಲಾಗಿದೆ. ನಿಗದಿತ ಅವಧಿಯೊಳಗಾಗಿ ಯಾವುದೇ ಆಕ್ಷೇಪಣೆಗಳು ಸ್ವೀಕರಿಸಲ್ಪಡದಿದ್ದಲ್ಲಿ ಮೇಲ್ಕಂಡ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಯಾವುದೇ ಹಕ್ಕು ಅಥವಾ ದಾವೆ ಇಲ್ಲವೆಂದು ಪರಿಗಣಿಸಿ, ಉದ್ದೇಶಿತ ಖರೀದಿದಾರರು ಖರೀದಿ ವ್ಯವಹಾರವನ್ನು ಮುಂದುವರಿಸಲಿದ್ದಾರೆ. ನಂತರದಲ್ಲಿ ಸಲ್ಲಿಸಲ್ಪಡುವ ಯಾವುದೇ ಹಕ್ಕು ಅಥವಾ ಆಕ್ಷೇಪಣೆಯನ್ನು ಪರಿಗಣಿಸಲ್ಪಡುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಖರೀದಿದಾರರ ಪರ ವಕೀಲರು
ಕೇಶವ್ ಗೌಡ, ಎಲ್, ವಕೀಲರು,
ನಂ.13, ಮುಡ ಕಾಂಪ್ಲೆಕ್ಸ್, ಚದುರಂಗ ರಸ್ತೆ,
ರಾಮಕೃಷ್ಣನಗರ, ಮೈಸೂರು –570022,
ಫೋನ್ ನಂ. 82175 53593

ದಿನಾಂಕ: 19/05/2026
ಸ್ಥಳ: ಮೈಸೂರು

ಕೇಂದ್ರ ಆಹಾರ ಸಂಶೋಧನಾಲಯದ ಉದ್ಯೋಗಿಗಳ ಗೃಹ ನಿರ್ಮಾಣ ಸಹಕಾರ ಸಂಘ, ನಿಯಮಿತ

ಸಿ.ಎಫ್.ಟಿ.ಆರ್.ಐ ಆವರಣ, ಮೈಸೂರು – 570 020

Regd.No.:ARM/GI/212/78-79 Dated 27-3-1979 Phone: 2510249

ಸಿ.ಎಫ್.ಟಿ.ಆರ್.ಐ ಉದ್ಯೋಗಿಗಳ ಗೃಹನಿರ್ಮಾಣ ಸಹಕಾರ ಸಂಘ, ನಿ. ಮೈಸೂರು ಈ ಸಂಘವು ಸಂಘದ ಸದಸ್ಯತ್ವದ ಷೇರಿನ ಮೊತ್ತವನ್ನು ರೂ. 500/– ರಿಂದ ರೂ. 3,000/–ಗಳಿಗೆ ಹೆಚ್ಚಳ ಮಾಡಿದ್ದು, ಸದಸ್ಯರುಗಳು ಬಾಕಿ ಉಳಿದಿರುವ ರೂ. 2,500/–ಗಳನ್ನು ದಿನಾಂಕ 30–06–2026 ರೊಳಗೆ ಸಂಘಕ್ಕೆ ಪಾವತಿಸಿ ರಶೀತಿಯನ್ನು ಪಡೆಯತಕ್ಕದ್ದು, ಕಡೆಯ ದಿನಾಂಕ 30–06–2026 ರೊಳಗೆ ಸಂಘಕ್ಕೆ ಷೇರಿನ ಬಾಕಿ ಮೊತ್ತವನ್ನು ಪಾವತಿಸದಿದ್ದಲ್ಲಿ ಸಂಘದ ಸದಸ್ಯತ್ವವು ಕೊನೆಗೊಳ್ಳುತ್ತದೆ ಮತ್ತು ಸದಸ್ಯತ್ವದ ಷೇರಿನ ಮೊತ್ತವು ಸಂಘದ ಅಭಿವೃದ್ಧಿ ನಿಧಿಗೆ ವರ್ಗಾವಣೆಯಾಗುವುದೆಂದು ಈ ಮೂಲಕ ಸದಸ್ಯರಿಗೆ ತಿಳಿಯಪಡಿಸಲಾಗುತ್ತದೆ. ದೂರವಾಣಿ : 0821–2510249/9110841202

ಸಹಿ/– ಅಧ್ಯಕ್ಷರು, ಸಿ.ಎಫ್.ಟಿ.ಆರ್.ಐ, ಕೇಂದ್ರ ಆಹಾರ ಸಂಶೋಧನಾಲಯದ ಉದ್ಯೋಗಿಗಳ ಗೃಹ ನಿರ್ಮಾಣ ಸಹಕಾರ ಸಂಘ, ನಿ.,

ಮೈಸೂರು ಮಿತ್ರ 47 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ
ಸಹಾಯಕ ನಿರ್ದೇಶಕರು ಗ್ರೇಡ್–1ರವರ ಕಛೇರಿ, ತಿ.ನರಸೀಪುರ ತಾಲ್ಲೂಕು

ಕೊಠಡಿ ಸಂಖ್ಯೆ: 310, ಮಿನಿ ವಿಧಾನಸೌಧ, ತಿ.ನರಸೀಪುರ ಟೌನ್, ಮೈಸೂರು ಜಿಲ್ಲೆ – 571124, DIGI PIN: 4M6-6ML-765M
Ph: 08227-260672/9480843180 Email:tswotnp@yahoo.com
ಸನಿ:ಸಕಇ:ತಿನಪು:ಕಅ:ವಾ.ಟೆಂಡರ್:ಸಿಆರ್:2026–27 ದಿ: 14.05.2026

ಬಾಡಿಗೆ ವಾಹನ ಟೆಂಡರ್ ಪ್ರಕಟಣೆ

2026–27ನೇ ಸಾಲಿಗೆ ಸಹಾಯಕ ನಿರ್ದೇಶಕರು ಗ್ರೇಡ್–1ರವರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ತಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಈ ಕಛೇರಿಯ ಉಪಯೋಗಕ್ಕಾಗಿ ಹವಾನಿಯಂತ್ರಿತ ಕಾರನ್ನು ದಿ: 01.07.2026 ರಿಂದ ದಿ: 30.06.2027ರವರೆಗಿನ ಅವಧಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನವನ್ನು ಪಡೆಯಲು ಸರ್ಕಾರಿ ಆದೇಶ ಸಂಖ್ಯೆ: ಪಿಆಸುಇ:30: ಟಿವಾನೀ 2019 ಬೆಂಗಳೂರು ದಿ: 22.08.2023ರ ಆದೇಶದಂತೆ ವಾರ್ಷಿಕ ಟೆಂಡರ್ ಕರೆಯಲಾಗಿದೆ. ಆಸಕ್ತಿಯುಳ್ಳ ಅಧಿಕೃತ ಸಂಸ್ಥೆ/ ಟ್ರಾವೆಲ್ಸ್ ಏಜೆನ್ಸಿರವರು ಈ ಕಛೇರಿಯಿಂದ ಟೆಂಡರ್ ಅರ್ಜಿಯನ್ನು ಪಡೆದು ದಿ: 20.05.2026ರ ಬೆಳಗ್ಗೆ 11.00 ಗಂಟೆಯಿಂದ ದಿ: 19.06.2026ರ ಸಂಜೆ 5.00 ಗಂಟೆಯವರೆಗೆ ಮುಚ್ಚಿದ ಲಕೋಟೆಗಳಲ್ಲಿ ಆರ್ಥಿಕ ಲಕೋಟೆ ಮತ್ತು ತಾಂತ್ರಿಕ ಲಕೋಟೆಗಳನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ ಮತ್ತು ಟೆಂಡರ್ ಅನ್ನು ದಿನಾಂಕ: 20–06–2026 ರಂದು ಬೆಳಗ್ಗೆ 11.00 ಗಂಟೆಗೆ ಹಾಜರಿರುವ ಟೆಂಡರ್‌ದಾರರ ಸಮಕ್ಷಮ ತೆರೆಯಲಾಗುವುದು. ವಾಹನ ನೀಡಲು ಇಚ್ಛಿಸುವ ಅಧಿಕೃತ ಟ್ರಾವೆಲ್ಸ್ ಏಜೆನ್ಸಿಯವರ ಸೇವಾ ವ್ಯಾಪ್ತಿಯು ಮೈಸೂರು ಜಿಲ್ಲೆಗೆ ಒಳಪಟ್ಟಿದ್ದು, ಮಾಸಿಕ ಗರಿಷ್ಠ ರೂ.40,000/– (ತೆರಿಗೆಗಳನ್ನು ಹೊರತುಪಡಿಸಿ) ನಿಗದಿಪಡಿಸಲಾಗಿರುತ್ತದೆ. ಅಧಿಕೃತ ಸಂಸ್ಥೆಯವರು ಶುಲ್ಕವನ್ನು ಪಾವತಿಸಿ ಕಛೇರಿಯಿಂದ ಟೆಂಡರ್ ಅರ್ಜಿಯನ್ನು ಪಡೆದು, ಅಗತ್ಯ ದಾಖಲಾತಿಗಳೊಂದಿಗೆ ನಿಗಧಿತ ಸಮಯದೊಳಗೆ ಅರ್ಜಿಯನ್ನು ಸಲ್ಲಿಸಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದ್ದು, ಆರ್ಥಿಕ ಬಿಡ್ ಮತ್ತು ತಾಂತ್ರಿಕ ಬಿಡ್ ಅನ್ನು ಪ್ರತ್ಯೇಕ ಕವರ್‌ನಲ್ಲಿಟ್ಟು ಸದರಿ ಎರಡು ಕವರ್‌ಗಳನ್ನು ಮತ್ತೊಂದು ಕವರ್‌ನಲ್ಲಿಟ್ಟು ಸೀಲ್ ಮಾಡಿ ಸಲ್ಲಿಸತಕ್ಕದ್ದು ಹಾಗೂ ಟೆಂಡರ್ ಅರ್ಜಿಯಲ್ಲಿ ನಮೂದಿಸಲಾಗಿರುವ ಷರತ್ತುಗಳಂತೆ ಸೇವೆ ಒದಗಿಸಲು ಇಚ್ಛಿಸುವ ಏಜೆನ್ಸಿಯವರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9480843180 ಅಥವಾ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/– ಸಹಾಯಕ ನಿರ್ದೇಶಕರು ಗ್ರೇಡ್–1,
ಸಮಾಜ ಕಲ್ಯಾಣ ಇಲಾಖೆ, ತಿ.ನರಸೀಪುರ ತಾಲ್ಲೂಕು.

DIPR/DDMYS/192/KSMCA/146/2026-27

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ. ಮಲ್ಲಯ್ಯರವರ ಮಗ, ಶ್ರೀ. ಎಂ. ಸಿದ್ದಪ್ಪ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಆದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖುದ್ದುಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಮುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖುದ್ದುಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ವಿಜಯನಗರ 4ನೇ ಹಂತ, 1ನೇ ಫೇಸ್ ನಲ್ಲಿರುವ ಖಾಲಿ ನಿವೇಶನಗಳು, ಹಾಲೀ ಹೂಟಗಳ್ಳಿ ನಗರ ಸಭೆ ವ್ಯಾಪ್ತಿಗೆ ಒಳಪಟ್ಟಿದ್ದು, ಈ ಕೆಳಗೆ ನೀಡಲಾದ ಪ್ರತೀ ನಿವೇಶನಗಳ ಅಳತೆ ಪೂರ್ವದಿಂದ ಪಶ್ಚಿಮಕ್ಕೆ : 15 ಮೀಟರ್ ಹಾಗೂ ಉತ್ತರದಿಂದ ದಕ್ಷಿಣಕ್ಕೆ : 12 ಮೀಟರ್ ಒಟ್ಟು ವಿಸ್ತೀರ್ಣ 216 ಚದರ ಮೀಟರ್. **ಐಟಂ ನಂ. 01:** ನಿವೇಶನ ಸಂಖ್ಯೆ 1542, ಇ–ಖಾತೆ ಪ್ರಕಾರ ಸ್ವತ್ತಿನ ಸಂಖ್ಯೆ: 9886385635, ವಾರ್ಡ್ ನಂ.32, ಹಳೆಯ & ಅಸೆಸ್ಮೆಂಟ್ ನಂ. 1542, ಇದರಲ್ಲಿರತಕ್ಕ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಿವೇಶನ ಸಂಖ್ಯೆ 1525, ಉತ್ತರಕ್ಕೆ – ನಿವೇಶನ ಸಂಖ್ಯೆ 1541 ಮತ್ತು ದಕ್ಷಿಣಕ್ಕೆ ನಿವೇಶನ ಸಂಖ್ಯೆ 1543. **ಐಟಂ ನಂ. 02:** ನಿವೇಶನ ಸಂಖ್ಯೆ 1525, ಇ–ಖಾತೆ ಪ್ರಕಾರ ಸ್ವತ್ತಿನ ಸಂಖ್ಯೆ: 5563203700, ವಾರ್ಡ್ ನಂ.32, ಹಳೆಯ & ಅಸೆಸ್ಮೆಂಟ್ ನಂ. 1525, ಇದರಲ್ಲಿರತಕ್ಕ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ ನಿವೇಶನ ಸಂಖ್ಯೆ 1542, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ನಿವೇಶನ ಸಂಖ್ಯೆ 1526 ಮತ್ತು ದಕ್ಷಿಣಕ್ಕೆ ನಿವೇಶನ ಸಂಖ್ಯೆ 1524.

ಎಸ್‌ಎಲ್‌ಡಿ ಲಾ ಫರ್ಮ್
ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641
email: sldlawfirm2021@gmail.com

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ ಮಲ್ಲಯ್ಯರವರ ಮಗ ಶ್ರೀ. ಕೆ. ಸಿದ್ದಪ್ಪ, ರವರು ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖುದ್ದುಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖುದ್ದುಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮದಲ್ಲಿ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತಗೊಂಡ ಸರ್ವೆ ನಂ.ಗಳಾದ. 152/1, 2, 4 ಮತ್ತು 362 ರಲ್ಲಿರುವ ಒಟ್ಟು ವಿಸ್ತೀರ್ಣ 08 ಎಕರೆ 08 ಗುಂಟೆಯಲ್ಲಿ ನಿರ್ಮಿಸಿರುವ ಸಿಲ್‌ವೇಕ್ ಬಡಾವಣೆ, ಹಾಲಿ ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಗೊಳಪಟ್ಟಿದ್ದು, ಈ ಕೆಳಗೆ ನೀಡಲಾದ ಪ್ರತೀ ನಿವೇಶನಗಳ ಅಳತೆ ಪೂರ್ವದಿಂದ ಪಶ್ಚಿಮಕ್ಕೆ 18 ಮೀಟರ್, ಹಾಗೂ ಉತ್ತರದಿಂದ ದಕ್ಷಿಣಕ್ಕೆ 12 ಮೀಟರ್, ಒಟ್ಟು ವಿಸ್ತೀರ್ಣ 216 ಚದರ ಮೀಟರ್. **ಐಟಂ ನಂಬರ್ 1:** ನಿವೇಶನ ಸಂಖ್ಯೆ. 26, ಇ–ಖಾತೆ ಪ್ರಕಾರ ಸ್ವತ್ತಿನ ಸಂಖ್ಯೆ. 7484228224, ವಾರ್ಡ್ ನಂ. 5, ಹಳೇ & ಅಸೆಸ್ಮೆಂಟ್ ನಂ. ನಿವೇಶನ ಸಂಖ್ಯೆ 26 ರ ಇದರಲ್ಲಿರತಕ್ಕ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಿವೇಶನ ಸಂಖ್ಯೆ 17, ಉತ್ತರಕ್ಕೆ ನಿವೇಶನ ಸಂಖ್ಯೆ 27, ಮತ್ತು ದಕ್ಷಿಣಕ್ಕೆ ನಿವೇಶನ ಸಂಖ್ಯೆ 25. **ಐಟಂ ನಂಬರ್ 2:** ನಿವೇಶನ ಸಂಖ್ಯೆ. 27, ಇ–ಖಾತೆ ಪ್ರಕಾರ ಸ್ವತ್ತಿನ ಸಂಖ್ಯೆ 4193422998, ವಾರ್ಡ್ ನಂ. 5, ಹಳೇ & ಅಸೆಸ್ಮೆಂಟ್ ನಂ. ನಿವೇಶನ ಸಂಖ್ಯೆ 27 ರ ಚಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಿವೇಶನ ಸಂಖ್ಯೆ 16, ಉತ್ತರಕ್ಕೆ ನಿವೇಶನ ಸಂಖ್ಯೆ 28, ಮತ್ತು ದಕ್ಷಿಣಕ್ಕೆ ನಿವೇಶನ ಸಂಖ್ಯೆ 26.

ಎಸ್‌ಎಲ್‌ಡಿ ಲಾ ಫರ್ಮ್
ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641,
email: sldlawfirm2021@gmail.com

SRI SATHYA SAI BABA CENTRAL SCHOOL AND PU COLLEGE
Jayalakshmipuram, Mysuru - 570012

APPOINTMENT NOTIFICATION

Experienced candidates with English proficiency can apply for the following posts.

Sl #	Posts	No.of Posts	Qualification	Experience
1	Nursery Trained Teachers	1	BA/B.Sc./B.Com with NTT/NST/MTT/DELEd	Candidates with relevant experience will be given preference.
2	Hostel Warden (Male) Part time / Full Time For PU College	1	Any degree	

1. Salary will be according to capability.
2. PF, Gratuity and other benefits will be provided.

Eligible candidates can send applications along with CV to email ID sssbpucnn0385@gmail.com or WhatsApp: 9741065500 on or before 23.5.2026

GNS Rajeshwari, Hon. Secretary — Thrimurthy, Principal